ಶ್ರೀ ಬಂಡೆಪ್ಪ ಖಾಶೆಂಪೂರ್ :- ಮಾನ್ಯ ಅಧ್ಯಕ್ಷರೆ, ಈಗ ಯಾವ ವಿಷಯವನ್ನು ತೆಗೆದುಕೊಳ್ಳುತ್ತಿದ್ದೀರಿ. ನಾವು ಕೊಟ್ಟಿದ್ದನ್ನು ಇದಕ್ಕೆ convert ಮಾಡಿ ಕೊಟ್ಟಿದ್ದೀರಲ್ಲಾ?

ಅಧ್ಯಕ್ಷರು :- ನಿಯಮ 69ರ ಮೇರೆಗೆ ಮುಂದುವರೆದ ಚರ್ಚೆ, ಎರಡೂ ಕ್ಲಬ್ ಮಾಡಿ ಮಾತನಾಡಿ, ಎರಡೂ ವಿಷಯಗಳು ಒಂದೇ ಇದೆ.

ಶ್ರೀ ಹೆಚ್.ಡಿ. ರೇವಣ್ಣ :- ಮಾನ್ಯ ಅಧ್ಯಕ್ಷರೆ, ದಯಮಾಡಿ ಗಮನ ಸೆಳೆಯುವ ಸೂಚನೆಯನ್ನು ತೆಗೆದುಕೊಳ್ಳಿ. ಇದನ್ನು ಒಂದು ವಾರದಿಂದ ತೆಗೆದುಕೊಂಡಿಲ್ಲ.

ಅಧ್ಯಕ್ಷರು :- ತೆಗೆದುಕೊಳ್ಳೋಣ.

ಶ್ರೀ ಬಂಡೆಪ್ಪ ಖಾಶೆಂಪೂರ್ :- ಮಾನ್ಯ ಅಧ್ಯಕ್ಷರೆ, ನಾವು ಬರಗಾಲದ ಮೇಲೆ ಮಾತನಾಡಬೇಕು. ಇವತ್ತು ನಿಲುವಳಿ ಸೂಚನೆಯಲ್ಲಿ ಕೊಟ್ಟಿದ್ದೇವೆ, ತಾವು ಅದನ್ನು convert ಮಾಡಿ ಕೊಟ್ಟಿದ್ದೀರಿ. ನಾವು ಮಾತನಾಡಬೇಕು.

ಅಧ್ಯಕ್ಷರು :- ಎರಡೂ ವಿಷಯಗಳು ಸೇರಿಸಿದೆ, ತಾವು ಮಾತನಾಡಿ.

6. ನಿಯಮ 69ರ ಅಡಿಯಲ್ಲಿ ಮುಂದುವರೆದ ಚರ್ಚೆ

ವಿಷಯ : ರಾಜ್ಯದಲ್ಲಿ 123, ತಾಲ್ಲೂಕುಗಳನ್ನು ಬರಪೀಡಿತ ಪ್ರದೇಶವೆಂದು ಘೋಷಿಸುವ ಬಗ್ಗೆ

ಶ್ರೀ ಟಿ.ಬಿ. ಜಯಚಂದ್ರ (ಶಿರಾ) :- ಮಾನ್ಯ ಅಧ್ಯಕ್ಷರೆ, ನಿಯಮ 69ರ ಅಡಿಯಲ್ಲಿ ಈ ರಾಜ್ಯದ 123, ತಾಲ್ಲೂಕುಗಳನ್ನು ಬರಪೀಡಿತ ಪ್ರದೇಶಗಳೆಂದು ಸರ್ಕಾರ ಘೋಷಿಸಿದ್ದು, ಬಹುತೇಕ ತಾಲ್ಲೂಕುಗಳಲ್ಲಿ ಭೀಕರವಾದಂಥ ಪರಿಸ್ಥಿತಿ ಉಂಟಾಗಿದ್ದು, ಪರಿಸ್ಥಿತಿಯನ್ನು ಎದುರಿಸಲು ಕಾಮಗಾರಿಯನ್ನು ಸಮರೋಪಾದಿಯಲ್ಲಿ ಕೈಗೊಳ್ಳುವಲ್ಲಿ ಸರ್ಕಾರ ಸಂಪೂರ್ಣವಾಗಿ ವಿಫಲವಾಗಿದೆ ಎನ್ನುವಂಥ ವಿಷಯವನ್ನು ಪ್ರಸ್ತಾಪ ಮಾಡಿದ್ದೆವು. ಸದನ ಪ್ರಾರಂಭವಾದಂಥ ಸಂದರ್ಭದಲ್ಲಿ ಇಡೀ ರಾಜ್ಯದ ಜನರು 123 ತಾಲ್ಲೂಕು ಎಂದು ಹೇಳದೇ ಅದನ್ನು 2/3 of the ರಾಜ್ಯ, ಆ ರಾಜ್ಯದಲ್ಲಿ ಜನರು ಅತ್ಯಂತ ಸಂಕಷ್ಟದಲ್ಲಿರಬೇಕಾದಾಗ, ಜನಗಳು ನಿರೀಕ್ಷೆ ಮಾಡುತ್ತಿರುವಂಥ ರೀತಿಯಲ್ಲಿ, ಜನರಿಗೆ ಸಹಾಯವಾಗುತ್ತದೆನ್ನುವಂಥ ರೀತಿಯಲ್ಲಿ ವಿಧಾನ ಸಭೆ ಪ್ರಾರಂಭವಾಗಿದೆ. ಇದು ಪ್ರಾರಂಭವಾದ ಮೇಲೆ ಬಜೆಟ್ ಮಂಡನೆ ಆಗಿದೆ. ಇಲ್ಲಿ ನಾವು ಬರದ ಬಗ್ಗೆ ಚರ್ಚೆ ಮಾಡುತ್ತೇವೆಂದು ಜನರು ನಿರೀಕ್ಷೆ ಮಾಡುವಂಥ ಸಂದರ್ಭದಲ್ಲಿ ಆ ನಿಯಮಾವಳಿಯನ್ನು ಸಡಿಲಗೊಳಿಸದೇ ಚರ್ಚೆಗೆ ಅವಕಾಶ ಮಾಡಿದ್ದರೆ ಒಳ್ಳೆಯದಿತ್ತೆಂದು ನನ್ನ ಭಾವನೆ. ಆದರೂ ಕೂಡ

ಇವತ್ತು ನಿಯಮ 69ರ ಅಡಿಯಲ್ಲಿ ಚರ್ಚೆಗೆ ಅವಕಾಶವನ್ನು ಕೊಟ್ಟಿದ್ದೀರಿ. ಇದನ್ನು ಚರ್ಚೆ ಮಾಡುವಂಥ ಸಂದರ್ಭದಲ್ಲಿ ಈಗಾಗಲೇ ಸಾಕಷ್ಟು ರೀತಿಯಲ್ಲಿ ಬರದ ಬಗ್ಗೆ ಹಿಂದಿನ ವಿಧಾನಸಭೆಯಲ್ಲಿ, ಅದರ ಹಿಂದಿನ ವಿಧಾನ ಸಭೆಯಲ್ಲಿ ಕೂಡ ಸಾಕಷ್ಟು ವಿಚಾರಗಳು ಚರ್ಚೆಯಾಗಿದೆ. ಈಗಾಗಲೇ ವಿರೋಧ ಪಕ್ಷದ ನಾಯಕರು ನಿನ್ನೆ ಸಭೆಯಲ್ಲಿ ವಿಸ್ತಾರವಾಗಿ ರಾಜ್ಯದ ಬರಗಾಲ ಪರಿಸ್ಥಿತಿಯನ್ನು ಪರಿ ಪರಿಯಾಗಿ ವಿಂಗಡಿಸಿ ಹೇಳುವಂಥ ಕೆಲಸವನ್ನು ಮಾಡಿರುವಾಗ ನಾನು ಹೆಚ್ಚಿಗೆ ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ. ಒಂದು ಮೂಲವಾಗಿ ನಾವು ಯೋಚನೆ ಮಾಡಬೇಕು. ಇಲ್ಲಿ ಬರಗಾಲವೆಂದಾಗ ಮೂರು ವಿಚಾರಗಳಿವೆ. ಒಂದು ಕೃಷಿ, ಎರಡು ಕೃಷಿಕ, ಮೂರನೆಯದು ಕೃಷಿ ಕಾರ್ಮಿಕರು. ಕೃಷಿ ಎಂದರೆ ಏನು ಎನ್ನುವುದನ್ನು ನಾನು ಹೇಳುವುದೇನೂ ಬೇಕಾಗಿಲ್ಲ. ಇವತ್ತು ಯಾರಿಗೂ ಬೇಡದೇ ಇರುವಂಥ ಉದ್ಯಮವದು. ಇವತ್ತು ಯಾರೂ ಕೂಡ ಬಯಸದೇ ಇರುವುದು ಅದು. ಕೃಷಿ ಆ ಮಟ್ಟಕ್ಕೆ ತಲುಪಿದ್ದು, ನಮಗೆ ಕೃಷಿಯೇ ಬೇಡವೇ ಬೇಡ ಎಂದು ಹೇಳಿ ಅದನ್ನು ಬಿಟ್ಟು ಹೋಗುವಂಥ ಪರಿಸ್ಥಿತಿ ಬಂದಿದೆ. ಕೃಷಿಯನ್ನೇ ನಂಬಿರತಕ್ಕಂಥ ರಾಜ್ಯ ಮತ್ತು ದೇಶದಲ್ಲಿ ಕೃಷಿ ಕಷ್ಟವಾದರೆ ನಮ್ಮ ಮುಂದಿನ ಪರಿಸ್ಥಿತಿ ಏನು ಎನ್ನುವ ಬಗ್ಗೆ ಚಿಂತನೆ ಮಾಡಬೇಕು ಎನ್ನುವ ಕಾರಣಕ್ಕೋಸ್ಕರ ಮಾನ್ಯ ಯಡಿಯೂರಪ್ಪನವರು ವಿಶೇಷವಾಗಿ ಕೃಷಿ ಬಜೆಟ್‌ನ್ನು ಮಂಡಿಸುವಂಥ ಕೆಲಸವನ್ನು ಮೊದಲ ಬಾರಿಗೆ ಮಾಡಿದರು.

(ಈ ಹಂತದಲ್ಲಿ ಉಪಾಧ್ಯಕ್ಷರು ಅಧ್ಯಕ್ಷ ಪೀಠವನ್ನಲಂಕರಿಸಿದರು)

ಅವರು ಆ ಪ್ರಯತ್ನ ಮಾಡಿದ್ದು ಸರಿ ಅಥವಾ ತಪ್ಪು ಎನ್ನುವುದಕ್ಕಿಂತ ಹೆಚ್ಚಾಗಿ ಕೃಷಿಗೆ ಆಧ್ಯತೆಯನ್ನು ಕೊಡಬೇಕು ಎನ್ನುವ ದೃಷ್ಟಿಯಿಂದ ಮಾಡಿದರು ಎಂದು ನಾನು ಭಾವಿಸುತ್ತೇನೆ. ಆದರೆ ಅದರ ಪರಿಣಾಮವೇನಾಯಿತು? ನಾವು ಇಷ್ಟೆಲ್ಲಾ ಮಾಡಿದಾಗ್ಯೂ ಕೂಡ ಕೃಷಿಗೆ ಹಾಕಿದಂಥ ಮೂಲ ಬಂಡವಾಳ, ಕೃಷಿಕರು ಹಾಕಿದಂಥ ಮೂಲ ಬಂಡವಾಳಕ್ಕೆ ದೋಖಾ ಆಯಿತು. ಯಾವುದೇ ರೀತಿಯಾದಂಥ ಪರಿಣಾಮವಾಗಲಿಲ್ಲ. ಇದಕ್ಕೆ ಕಾರಣವೇನು? ಒಂದು ಮಾತನ್ನು ನಾವು ಜ್ಞಾಪಕದಲ್ಲಿಟ್ಟುಕೊಳ್ಳಬೇಕು. ನಾವು ಕೃಷಿಯನ್ನು ಅಭಿವೃದ್ಧಿ ಮಾಡಬೇಕಾದರೆ, ಕೃಷಿಕರಿಗೆ ಸಹಾಯವಾಗಬೇಕಾದರೆ ಅದಕ್ಕೆ ನಾನಾ ರೀತಿಯ ಕಾರಣಗಳಿವೆ. ಕೇವಲ ಕೃಷಿ ಬಜೆಟ್ ಸರ್ಕಾರ ಕೊಡತಕ್ಕಂಥ ಸವಲತ್ತು, ಸಬ್ಸಿಡಿಯನ್ನು ಮಾತ್ರ ಅವಲಂಬಿಸಿಲ್ಲ. ಅದಕ್ಕೆ ಬೇರೆ ಬೇರೆ ಆಯಾಮಗಳಿವೆ. ಅದೆಲ್ಲವೂ ಸರಿಯಾದಾಗ ಮಾತ್ರ ಸಾಧ್ಯವಾಗುತ್ತದೆ. ನಮ್ಮ ಕೃಷಿಕರು ತಾನು ಸಂತೃಪ್ತಿಯಿಂದ ಇದ್ದೇನೆ, ಸಮಾಧಾನದಿಂದ ಇದ್ದೇನೆ ಎನ್ನುವ ದಿನಗಳು ಬಹಳ

ಕಡಿಮೆ. ಕಾರಣವೇನೆಂದರೆ, ಒಂದಲ್ಲ ಒಂದು ರೀತಿಯ ಸಮಸ್ಯೆಗಳಿರುತ್ತವೆ. ಮಳೆ ಬಂತು ಅಥವಾ ಬೆಳೆ ಬಂತು ಎಂದರೆ ಅದಕ್ಕೆ ಬೆಲೆ ಇರುವುದಿಲ್ಲ. ಅಥವಾ ರೋಗ ಬಂತು ಅಥವಾ ಇನ್ನೇನೋ ಆಯಿತು, ಅಥವಾ ಮಳೆ ಬರಲಿಲ್ಲ ಅಥವಾ ನೀರು ಇರಲಿಲ್ಲ ಎಂದರೆ ಆಗ ಗೊಬ್ಬರದ ಮುಖಾಂತರ ಹಾಕಿದಂಥ ಬಂಡವಾಳವೆಲ್ಲ ಸಂಪೂರ್ಣ ನಾಶವಾಗಿ ಹೋಗುತ್ತದೆ. ಹಾಗಾಗಿ ನಾವು ಮೂಲವನ್ನು ಅರ್ಥಮಾಡಿಕೊಳ್ಳಬೇಕು. ಇವತ್ತು ನಾವು ರೈತನಿಗೆ ಕೃಷಿಯಲ್ಲಿ ಏನಾದರೂ ಸಹಾಯ ಮಾಡಬೇಕೆಂದರೆ ಅವನಿಗೆ ಒಳ್ಳೆಯ ಬೆಲೆಯನ್ನು ಕೊಡುವುದರ ಬಗ್ಗೆ ಹೆಚ್ಚು ಕೇಂದ್ರೀಕೃತ ಮಾಡಬೇಕು. ಆ ಬೆಲೆಯನ್ನು ತಂದು ಕೊಡುವುದರಲ್ಲಿ ನಾವು ಹೊಸಹೊಸ ವಿಚಾರಗಳಿಗೆ ಸಹ ಹೋಗಬೇಕಾಗುತ್ತದೆ. ಹೊಸ ವಿಚಾರಗಳು, ಹೊಸ ಆವಿಷ್ಕಾರಗಳು, ತಂತ್ರಜ್ಞಾನಗಳು, ಗೃಹ ಕೈಗಾರಿಕೆಗಳು ಮತ್ತು Agro Processing Industries ಕಡೆಗೆ ಹೆಚ್ಚು ಗಮನ ಕೊಟ್ಟಂಥ ಸಂದರ್ಭದಲ್ಲಿ ಮತ್ತು crop planning ಇದೆಲ್ಲವನ್ನೂ ಮಾಡಿದಂಥ ಸಂದರ್ಭದಲ್ಲಿ ಮಾತ್ರ ಅವನಿಗೆ ಸಹಾಯವಾಗುತ್ತದೆ ಎನ್ನುವುದು ಒಂದು ವಿಚಾರ. ಇವತ್ತು ಪರಿಸ್ಥಿತಿ ಏನಾಗಿದೆ ಎಂದರೆ ಕೃಷಿಕ ಕೃಷಿಯನ್ನು ನಂಬಿ ಹಾಳಾಗಿರುವ ಅವನ ಪರಿಸ್ಥಿತಿಯೇನು ಎನ್ನುವುದನ್ನು ನಾನು ಹೇಳಬೇಕಾಗಿಲ್ಲ. ಇವತ್ತು ನಮ್ಮ ಒಟ್ಟಾರೆ ಜಮೀನಿನ ವಿಸ್ತರಣೆಯಲ್ಲಿ ಶೇಕಡ 76ರಷ್ಟು ಸಣ್ಣ ಮತ್ತು ಅತಿ ಸಣ್ಣ ಕೃಷಿಕರಿದ್ದಾರೆ. ಅಂದರೆ ಇವರು 2 ಹೆಕ್ಟೇರ್‌ಗಿಂತ ಕಡಿಮೆ ಭೂಮಿ ಇರತಕ್ಕಂಥವರು. 1 ಹೆಕ್ಟೇರ್‌ಗಿಂತ ಕಡಿಮೆ ಇರತಕ್ಕಂಥವರು 48% ಇದ್ದಾರೆ. ಮಳೆಯನ್ನು ನಂಬಿ ವ್ಯವಸಾಯ ಮಾಡತಕ್ಕಂಥ ಇವರು ಇವತ್ತಿನ ಪರಿಸ್ಥಿತಿಯಲ್ಲಿ ಎಷ್ಟರ ಮಟ್ಟಿಗೆ ಆರ್ಥಿಕವಾಗಿ ಸಬಲರಾಗಲು ಸಾಧ್ಯವಾಗಿದೆ ಎನ್ನುವುದು ಒಂದು ವಿಚಾರ. ಇನ್ನೊಂದು ಕಡೆ ಕೃಷಿ ಕಾರ್ಮಿಕರು ಇದ್ದಾರೆ. ಕೃಷಿಯನ್ನೇ ನಂಬಿಕೊಂಡು ಕಾರ್ಮಿಕರಾಗಿ ಇರತಕ್ಕಂಥವರು ಎಷ್ಟು ಜನರಿದ್ದಾರೆ ಎಂದರೆ ಒಂದರಿಂದ ಒಂದೂವರೆ ಕೋಟಿ ಜನ ಕೃಷಿ ಕಾರ್ಮಿಕರಿದ್ದಾರೆ ಎನ್ನುವ ಅಂಕಿಅಂಶಗಳು ನಮ್ಮಲ್ಲಿವೆ. ಈಗಾಗಲೇ ಉದ್ಯೋಗ ಖಾತರಿ ಯೋಜನೆಯಲ್ಲಿ ರಿಜಿಸ್ಟರ್ ಮಾಡಿರುವವರ ಸಂಖ್ಯೆಯನ್ನು ಲೆಕ್ಕ ಹಾಕಿದರೆ ಅದು ಸುಮಾರು 1 ಕೋಟಿ 46 ಲಕ್ಷಕ್ಕೆ ಹೋಗುತ್ತದೆ ಎಂದರೆ ಕೃಷಿ ಕಾರ್ಮಿಕರ ಸಂಖ್ಯೆ ಎಷ್ಟಿದೆ ಎನ್ನುವುದು ತಿಳಿಯುತ್ತದೆ. ಇವತ್ತು ಮಳೆಯಿಲ್ಲ, ಬೆಳೆಯಿಲ್ಲ ಎಂದ ಮೇಲೆ ಅವರು ಉದ್ಯೋಗಕ್ಕೋಸ್ಕರ ಏನು ಮಾಡಬಹುದು? ಅವರು ಯಾವ ರೀತಿ ಬದುಕಲು ಸಾಧ್ಯ ಎನ್ನುವುದನ್ನು ನಾವು ಯೋಚನೆ ಮಾಡಬೇಕಾಗುತ್ತದೆ. ಇವತ್ತು ನಾವು ಆ labour forceಗೆ ಏನು ಕೊಟ್ಟಿದ್ದೇವೆ? ಅವರಿಗೆ ನಾವು ಎಷ್ಟರ ಮಟ್ಟಿಗೆ ಹಣವನ್ನು

ತೊಡಗಿಸಿದ್ದೇವೆ? ಬಜೆಟ್ಟನ್ನು ಮಂಡನೆ ಮಾಡುವಂಥ ಸಂದರ್ಭದಲ್ಲಿ ಮುಖ್ಯಮಂತ್ರಿಗಳೇ ಹೇಳಿದ್ದಾರೆ. ಬರದ ವಿಚಾರದಲ್ಲಿ ಮೊದಲನೆಯದಾಗಿ ಪ್ರಸ್ತಾಪ ಮಾಡಿದ್ದಾರೆ. ಎಷ್ಟು ನಷ್ಟವಾಗಿದೆ ಎನ್ನುವುದನ್ನೂ ಕೂಡ ಹೇಳಿದ್ದಾರೆ. 4,600 ಕೋಟಿ ರೂಪಾಯಿಗೂ ಹೆಚ್ಚು ಹಣ ನಷ್ಟವಾಗಿದೆ. ಆ ನಷ್ಟವನ್ನು ಭರಿಸಬೇಕಾಗಿರುವಂಥ ಈ ಸಂದರ್ಭದಲ್ಲಿ ನಾವು ಕೇಂದ್ರ ಸರ್ಕಾರಕ್ಕೆ ಮನವಿಯನ್ನು ಕೂಡ ಕೊಟ್ಟಿದ್ದೇವೆ, ಅವರಿಂದಲೂ ಸಹಾಯ ನಿರೀಕ್ಷೆ ಮಾಡುತ್ತಿದ್ದೇವೆ ಎಂದು ಹೇಳಿದ್ದೀರಿ. ನೀವು ಆತನಿಗೆ ತಕ್ಷಣ ಬೇಕಾಗಿರುವಂಥ ಉದ್ಯೋಗ ಕೊಡಬೇಕು. ಅದೆಲ್ಲಕ್ಕಿಂತ ಹೆಚ್ಚಾಗಿ, ಇವತ್ತು ಕುಡಿಯುವ ನೀರಿನ ಬಗ್ಗೆ ಚರ್ಚೆ ಬಂದಾಗ, ಸರ್ಕಾರದಿಂದ ಏನು ಉತ್ತರ ಬರುತ್ತದೆ, ಸರ್ಕಾರದಿಂದ ಏನು ಸಹಾಯವಾಗುತ್ತದೆ ಎಂದು ಎಲ್ಲ ಶಾಸಕರು ಕಾತುರದಿಂದ ನೋಡುವಂಥ ಸಂದರ್ಭ ಉಂಟಾಗಿದೆ. ಇವತ್ತು ನೀರಿನ ಪರಿಸ್ಥಿತಿ ಏನಾಗಿದೆ ಎಂದರೆ ಯಾವ ಕೆರೆಕಟ್ಟೆಗಳೂ ಕೂಡ ತುಂಬಿಲ್ಲ. ಅರ್ಧ ಕೆರೆ, ಕಾಲು ಕೆರೆ ಆಗಿರುವುದೇ ಜಾಸ್ತಿಯಾಗಿದೆ. ಯಾವ ಕೆರೆಯಲ್ಲೂ ಕೂಡ ನೀರು ತುಂಬಿಲ್ಲ. ಅಂದರೆ ನಮ್ಮ ಅಂತರ್ಜಲದ ಮಟ್ಟ ಕಡಿಮೆಯಾಯಿತು. Surface water improvement ಎಲ್ಲೂ ಆಗಲಿಲ್ಲ. ಮಳೆ ಬರದೇ ಇದ್ದಂಥ ಸಂದರ್ಭದಲ್ಲಿ ಬೆಳೆ ಹಾಳಾದ ಪ್ರಶ್ನೆ ಬೇರೆ. ಆದರೆ ಮೂಲ ಸಮಸ್ಯೆ ಎಂದರೆ ಕುಡಿಯುವ ನೀರಿನ ಸಮಸ್ಯೆ. ದಿನಕಳೆದಂತೆ ಅಂತರ್ಜಲ ಕೆಳಕ್ಕೆ ಹೋಗುತ್ತಾ ಹೋಗುತ್ತಾ ಕುಡಿಯುವ ನೀರಿನ ಸಮಸ್ಯೆ ಉಂಟಾಯಿತು. ಕುಡಿಯುವ ನೀರಿನ ಸಮಸ್ಯೆಯ ಪರಿಹಾರಕ್ಕೆ ನಮಗೆ ಯಾವ ಪರಿಹಾರಗಳಿವೆ ಎಂದರೆ C.R.F. grant ಇದೆ. ಇದರಲ್ಲಿ ರಾಜ್ಯ ಮತ್ತು ಕೇಂದ್ರ ಸರ್ಕಾರಗಳ ಹೊಂದಾಣಿಕೆಯ ಮುಖಾಂತರ ಹಣ ಬರುತ್ತದೆ. ಕೇಂದ್ರದಿಂದ 126 ಕೋಟಿ ರೂಪಾಯಿ ಬರುತ್ತದೆ, ಅದಕ್ಕೆ ನೀವು 42–43 ಕೋಟಿ ರೂಪಾಯಿ ಹಾಕುತ್ತೀರಿ. ಅದು ಅಂದಾಜು ಒಟ್ಟು ಸುಮಾರು 180 ಕೋಟಿ ರೂಪಾಯಿ ಆಗುತ್ತದೆ. ಆ 180 ಕೋಟಿ ರೂಪಾಯಿಗಳನ್ನು ಕೊಳವೆ ಬಾವಿಗಳನ್ನು ಆಳ ಪಡಿಸುವುದಕ್ಕೋಸ್ಕರ, ಪೈಪ್‌ಲೈನನ್ನು ಅಳವಡಿಸುವುದಕ್ಕೋಸ್ಕರ ಕುಡಿಯುವ ನೀರಿಗಾಗಿ ಖರ್ಚು ಮಾಡಬೇಕು ಎಂದು ಇದೆ. ಆದರೆ ಇದನ್ನು ನೀವು ಯಾವತ್ತು ಖರ್ಚು ಮಾಡಿದ್ದೀರಿ ಎಂದರೆ, ಇದಕ್ಕೆ ನೀವು ಸಂಪೂರ್ಣವಾಗಿ ಹಣ ಬಿಡುಗಡೆ ಮಾಡಿದ್ದು ಕೇವಲ 15 ದಿವಸಗಳ ಮುಂಚೆ. ಅದುವರೆಗೂ ಯಾವುದೇ ಅಲ್ಪಸ್ವಲ್ಪ ಹಣವನ್ನೂ ಖರ್ಚು ಮಾಡಿರಲಿಲ್ಲ. Deputy Commissioner ರವರ P.D.Account ನಲ್ಲಿ ದುಡ್ಡಿದೆ ಅದನ್ನು ಖರ್ಚು ಮಾಡಲಿ ಎಂದು ನೀವು

ಒಂದು ಆದೇಶ ಕೊಟ್ಟುಬಿಟ್ಟಿರಿ. P.D.Account ಅಂದರೆ ಏನು ಎಂದು ಗೊತ್ತಿಲ್ಲವೇ? P.D.Account ನಲ್ಲಿ ಯಾವತ್ತೋ ಖರ್ಚಾಗಿರುವ ದುಡ್ಡಿಗೆ, ಲೆಕ್ಕಾಚಾರವಾಗಿಲ್ಲದೇ ಇರುವಂಥ ಇದರಲ್ಲಿ ದುಡ್ಡಿದೆ ಎಂದು ಹೇಳಿದ್ದೀರಿ. Actually ಇದರಲ್ಲಿ ದುಡ್ಡಿಲ್ಲ. Deputy Commissioner ರವರ ಹತ್ತಿರವೂ ದುಡ್ಡಿಲ್ಲ. ಎಲ್ಲೋ ಕೆಲವು ಕಡೆ implementing officer ರವರ ಹತ್ತಿರ, Executive Engineer ಗಳ ಹತ್ತಿರ, Assistant Executive Engineer ಗಳ ಹತ್ತಿರ ದುಡ್ಡು ಇರಬಹುದೇ ವಿನಾಃ ಬೇರೆಯವರ ಹತ್ತಿರ ದುಡ್ಡಿಲ್ಲ. ಆ ದುಡ್ಡನ್ನು ಕುರಿತು, P.D. Account ನಲ್ಲಿರುವುದನ್ನು ಖರ್ಚು ಮಾಡಿ ಎಂದು ಆದೇಶ ಕೊಡುತ್ತೀರಲ್ಲ, ನಿಜವಾಗಿಯೂ ನಿಮ್ಮಲ್ಲಿ ಪ್ರಾಮಾಣಿಕವಾಗಿ ಬರ ಪರಿಸ್ಥಿತಿಯನ್ನು ನಿಭಾಯಿಸಬೇಕು, ಕುಡಿಯುವ ನೀರಿಗೆ ಹಣ ಕೊಡಬೇಕು ಎನ್ನುವುದು ನಿಜವಾಗಿ ನಿಮ್ಮ ಮನಸ್ಸಿನಲ್ಲಿದೆಯೇ, ನಿಮಗೆ ಆ ಇಚ್ಛೆ ಇತ್ತೇ ಎನ್ನುವುದನ್ನು ಪ್ರಶ್ನೆ ಮಾಡಬೇಕಾಗುತ್ತದೆ. ಇಂಥ ಎಲ್ಲ ವಿಚಾರಗಳನ್ನು ಕೂಡ ನಾವು ವಾಸ್ತವಿಕವಾಗಿರುವಂಥ ಸಂಗತಿಯ ಹಿನ್ನೆಲೆಯಲ್ಲಿ ವಿಚಾರ ಮಾಡಬೇಕಾಗುತ್ತದೆ. ರಾಜ್ಯದಲ್ಲಿ ಬರ ಬಂದಾಗ ಯಾವ ರೀತಿ ಘೋಷಣೆ ಮಾಡಬೇಕೆಂದರೆ, ಅದನ್ನು ಜಿಲ್ಲಾಧಿಕಾರಿಗಳ ಮುಖೇನ ವರದಿ ತರಿಸಿಕೊಂಡು ಅದನ್ನು ಪರಿಶೀಲಿಸಿ, ಸಚಿವ ಸಂಪುಟದ ಉಪ ಸಮಿತಿಯು ಕುಳಿತು ಅದನ್ನು ಚರ್ಚೆ ಮಾಡಿ ಎಷ್ಟು ತಾಲ್ಲೂಕುಗಳಲ್ಲಿ ಬರವಿದೆ, ಏನು ಮಾಡಬೇಕು ಎನ್ನುವುದನ್ನು ತೀರ್ಮಾನ ಮಾಡುತ್ತಾರೆ. ಆದರೆ ನಿಮ್ಮ ರಾಜಕೀಯದ ಗೊಂದಲ, ರೆಸಾರ್ಟ್‌ನ ರಾಜಕಾರಣ, ನಿಮ್ಮಲ್ಲಿರುವ ಭಿನ್ನಾಭಿಪ್ರಾಯದ ಹಿನ್ನೆಲೆಯಲ್ಲಿ, ಇವತ್ತು ನಮ್ಮ ಹಳ್ಳಿಗಳ ಪರಿಸ್ಥಿತಿ ಏನಾಗಿದೆ ಎನ್ನುವುದನ್ನು ನೀವ್ಯಾರೂ ಕೂಡ ನೋಡಲಿಲ್ಲ. ಸಚಿವ ಸಂಪುಟದ ಉಪ ಸಮಿತಿಯೂ ಸೇರಲಿಲ್ಲ. ಅನಿವಾರ್ಯವಾಗಿ ಅಧಿಕಾರಿಗಳು 123 ತಾಲ್ಲೂಕುಗಳು ಬರಪೀಡಿತ ಪ್ರದೇಶಗಳೆಂದು ಘೋಷಣೆ ಮಾಡಬೇಕಾಗಿ ಬಂತು. ಅವರಲ್ಲಿರುವಂಥ ಅಂಕಿ ಅಂಶಗಳ ಆಧಾರದ ಮೇಲೆ ಅವರು ಘೋಷಣೆಯನ್ನು ಮಾಡುತ್ತಾರೆ. ಅವರು ಘೋಷಣೆ ಮಾಡಿದ್ದಾರೆ ಎಂದ ತಕ್ಷಣ ಅವರು ಕೆಲಸ ಮಾಡಿಲ್ಲವೆಂದಲ್ಲ. ನೀವು ಎಷ್ಟರ ಮಟ್ಟಿಗೆ ಅಧಿಕಾರಿಗಳಿಗೆ ಶಕ್ತಿಯನ್ನು ಕೊಡಬೇಕಾಗಿತ್ತೋ ಅದನ್ನು ಕೊಡಲಿಲ್ಲ. ನೀವು ಅದರ ಬಗ್ಗೆ ತಲೆಯನ್ನೇ ಕೆಡಿಸಿಕೊಳ್ಳಲಿಲ್ಲ. ಈಗ ಚಟುವಟಿಕೆ ಪ್ರಾರಂಭವಾಗಿರುವುದು ಹೇಗೆಂದರೆ, ಬಜೆಟ್ ಮಂಡನೆ ಮಾಡಬಹುದು ಎಂಬುದು ನಿಮಗೆ ಖಾತ್ರಿಯಾಯಿತು. ಬಜೆಟ್ ಮಂಡಿಸುವ ಸಂದರ್ಭದಲ್ಲಿ ಇದನ್ನು ನಾನು ಈಗ ಹೇಳಲೇಬೇಕಲ್ಲವೇ? ಬರಕ್ಕೋಸ್ಕರ ನೀವು ಏನು

ಮಾಡಿದ್ದೀರಿ? ಎಂಬುದನ್ನು ಹೇಳಲೇಬೇಕಲ್ಲವೇ? ಅದಕ್ಕೋಸ್ಕರವಾಗಿಯಾದರೂ ಕೂಡ ಸ್ವಲ್ಪ ಹಣ ಬಿಡುಗಡೆ ಮಾಡೋಣವೆಂದು ಸ್ವಲ್ಪ ದಿವಸಗಳ ಹಿಂದೆ ಹಣ ಬಿಡುಗಡೆ ಮಾಡಿದ್ದೀರಿ. ಇದರಿಂದ ಏನಾದರೂ ಸಮಸ್ಯೆ ಬಗೆಹರಿಸುವುದಕ್ಕೆ ಸಾಧ್ಯವೇ ಎಂದರೆ ಖಂಡಿತವಾಗಿಯೂ ಇಲ್ಲ. Government Order ಆದ ತಕ್ಷಣ ಒಂದು system ಆಗಿದೆ. ಆ ಹಣ DC ಗೆ ತಲುಪಬೇಕಾದರೆ 15 ದಿವಸ, ಒಂದು ತಿಂಗಳು ಬೇಕಾಗುತ್ತದೆ. ನೀವು ಮುಖ್ಯಮಂತ್ರಿಯಾದ ತಕ್ಷಣ interaction ಮಾಡಿದ್ದೀರಿ. ನಾನು DC office ಗೆ ಹೋದಾಗ ನೀವು ಎರಡು ಸಾರಿ interaction ಮಾಡಿದ್ದನ್ನು ನಾನೂ ಕೂಡ ನೋಡಿದ್ದೇನೆ. ಸ್ವಲ್ಪ ಪರವಾಗಿಲ್ಲ, ಮುಖ್ಯಮಂತ್ರಿಯವರು ಅಭಿಮಾನದಿಂದ ರೈತರ ಬಗ್ಗೆ, ಕುಡಿಯುವ ನೀರಿನ ಬಗ್ಗೆ ಕಾಳಜಿ ವಹಿಸಿದ್ದಾರೆಂದು ಭಾವಿಸಿದೆ. ಆದರೆ, ಎಷ್ಟು ಜನ ಜಿಲ್ಲಾ ಮಂತ್ರಿಗಳು ಶಾಸಕರ ಸಭೆ ಕರೆದಿದ್ದಾರೆ? ಎಷ್ಟು ಜನ ಶಾಸಕರಾಗಿರುವವರು ಸಭೆ ಮಾಡುವುದಕ್ಕೆ ಸಾಧ್ಯವಾಯಿತು? ಶಾಸಕರು ಕುಳಿತು ತೀರ್ಮಾನ ಮಾಡುವುದಕ್ಕೆ ಯಾವ ಮಾನದಂಡವಿದೆ? ಒಂದು ಕಡೆ taskforce ರಚನೆಯಾಗಿದೆ ಎಂದು ಹೇಳುತ್ತೀರಿ. Taskforce meeting ಮಾಡಿ proceedings ಮಾಡಿದ ಮೇಲೆ ಕೆಲವು ಕಡೆ Deputy Commissioner ರವರು ಬಂದು ಒಂದು ಪಟ್ಟಿಯನ್ನು ಮಾಡಿದರು. ಅದಕ್ಕೆ approval ಕೊಟ್ಟಿರುವುದು ಕೇವಲ 3 ದಿವಸಗಳಲ್ಲಿ ಅಂದರೆ, ಇಲ್ಲಿಯವರೆಗೆ ಯಾವುದೇ ತರಹದ action ಆಗಲಿಲ್ಲ. ನಾನು ಈ ವಿಚಾರವನ್ನು ಹೇಳುವುದಕ್ಕೆ ಪ್ರಯತ್ನ ಮಾಡುತ್ತಿದ್ದೇನೆ. 170 ಕೋಟಿ ರೂ. CRF ಮಾಡಿದ್ದೇವೆಂದು ಈಗ ನೀವು ಹೇಳಬಹುದು. ಗ್ರಾಮೀಣಾಭಿವೃದ್ಧಿ ಇಲಾಖೆಯ ಮೂಲಕ 130 ಕೋಟಿ ರೂ. ಮಾಡಿ 301 ಕೋಟಿ ರೂ. ಬಿಡುಗಡೆ ಮಾಡಿದ್ದೇವೆಂದು ಹೇಳಬಹುದು. ಆದರೆ, ಆಗಿರುವ ನಷ್ಟದ ಪ್ರಮಾಣದ ಹಣ ಎಷ್ಟು? ಹಣ ಎಷ್ಟು ಬೇಕಾಗಿತ್ತು ಎನ್ನುವುದನ್ನು ಅಂದಾಜು ಮಾಡುವುದಕ್ಕಾಗಲಿಲ್ಲ. ನನ್ನ ಕ್ಷೇತ್ರದ ಆಧಾರ ಇಟ್ಟುಕೊಂಡು ಹೇಳುವುದಾದರೆ, ನನ್ನ ಕ್ಷೇತ್ರಕ್ಕೆ ಎಷ್ಟು ಹಣ ಬೇಕಾಗುತ್ತದೆ ಎಂಬುದನ್ನು ಮಾನ್ಯ ಮುಖ್ಯಮಂತ್ರಿಯವರಿಗೆ ಹೇಳಿದ್ದೆ. ಯಾರೂ ಬೇಡ ಎಂದು ನಾನು Deputy Commissioner ರವರನ್ನು ಕೂರಿಸಿಕೊಂಡು action plan ಮಾಡಿದೆ. ನನ್ನ ಕ್ಷೇತ್ರಕ್ಕೆ ಬೇಕಾಗಿರುವುದು 6 ಕೋಟಿ 58 ಲಕ್ಷ ರೂಪಾಯಿ. ಅಷ್ಟು ಹಣ ಬಂದರೆ ಮಾತ್ರ ಸ್ವಲ್ಪ ಮಟ್ಟಿಗೆ ಸಮಸ್ಯೆ ಇರುವ ಹಳ್ಳಿಗಳಿಗೆ ನೀರು ಕೊಡುವುದಕ್ಕೆ ಸಾಧ್ಯವೆನ್ನುವ ರೀತಿಯಲ್ಲಿ ಮನವರಿಕೆ ಮಾಡಿ ಡಿ.ಸಿ. ಗೆ ಕೊಟ್ಟಿದ್ದೆವು. ಡಿಸಿ.ಯವರು ಖಂಡಿತವಾಗಿಯೂ ಇದನ್ನು approve ಮಾಡಿಸುತ್ತೇನೆ, ಮಾನ್ಯ

ಮುಖ್ಯಮಂತ್ರಿಯವರಿಂದ ಆದೇಶವಿದೆ ಎಂದು ಹೇಳಿ ಬಂದವರು approval ಕೊಟ್ಟಿದ್ದು 1 ಕೋಟಿ 34 ಲಕ್ಷ ರೂ.ಗಳಿಗೆ ಮಾತ್ರ. ಅಂದರೆ, ನಿಮ್ಮ ಆದ್ಯತೆ ಏನು? ಒಂದು ಪಂಚಾಯಿತಿಯ ಒಂದು ಹಳ್ಳಿಗೆ, ಎರಡು ಹಳ್ಳಿಗಳಿಗೆ ಕೊಡಿ. ಹಾಗಾದರೆ ಬೇರೆ ಹಳ್ಳಿಯವರು ಏನು ಮಾಡಬೇಕು? ಸಮಸ್ಯೆ ಹೇಗೆ ಬರುತ್ತಿದೆ ಎಂದರೆ, ನೀವು ಕ್ಷೇತ್ರದ headquarters ನಲ್ಲಿ ಕುಳಿತುಕೊಂಡಾಗ ನಾವು ಊರಿಗೆ ಹೋದಾಗ ನೀರು ಬಂದಿರುತ್ತದೆ. ಮಾರನೆ ದಿವಸ ಹೋದರೆ ನೀರು ಇಲ್ಲ ಎಂದು ಹೇಳುತ್ತಾರೆ. ಏಕೆಂದರೆ, ಅಂತರ್ಜಲ ಪ್ರತಿದಿನ ಕುಸಿಯುತ್ತಿದೆ. ನಮ್ಮಲ್ಲಿನ pipeline system ಯಾವ ರೀತಿ ಇದೆಯೆಂದರೆ, ಇವತ್ತು hand rig ನಿಂದ ಬರತಕ್ಕಂಥದ್ದು ಕೇವಲ 150, 200 ಅಡಿ, 250 ಅಡಿ ಮೇಲೆ ನೀರು ಬರುವುದಿಲ್ಲ. Piped system ನಲ್ಲಿ ಬಂದಿರುವುದು ಕೂಡ ನಿಂತುಹೋಗುತ್ತದೆ. ಈ ರೀತಿಯಾಗಿ ಆದ ಸಂದರ್ಭದಲ್ಲಿ ಅದನ್ನು ದಿನನಿತ್ಯ monitor ಮಾಡಬೇಕಾಗುತ್ತದೆ. ಅದು ಶಾಸಕರಿಗೆ ಅರ್ಥವಾಗುತ್ತದೆ, ಗೊತ್ತಾಗುತ್ತದೆ, ಅಧಿಕಾರಿಗಳಿಗೆ ಗೊತ್ತಾಗುತ್ತದೆ. ನಾವಾದರೂ ಕೂಡ ಇದನ್ನು ಎಷ್ಟರಮಟ್ಟಿಗೆ ಬಗೆಹರಿಸಬಹುದು? ನಾವು ಇದನ್ನು ಬಗೆಹರಿಸುವುದಕ್ಕೆ ಸಾಧ್ಯವಿಲ್ಲದಿರುವ ಸಂದರ್ಭದಲ್ಲಿ ನಾವು ಉತ್ತರ ಕೊಡುವುದಕ್ಕೆ ಸಾಧ್ಯವಿಲ್ಲದ ಹಾಗೆ ಆಗುತ್ತದೆ. ಆ ಕಾರಣಕ್ಕೋಸ್ಕರವೇ ಇವತ್ತು ನಿಮ್ಮ ಮಂತ್ರಿಯೊಬ್ಬರು ಹಳ್ಳಿಯಲ್ಲಿದ್ದರೆ ಕಷ್ಟವಾಗುತ್ತದೆ, Resort ನಲ್ಲಿರುವುದು ಒಳ್ಳೆಯದೆಂದು ಸತ್ಯ ಹೇಳಿದ್ದಾರೆ. ಎಲ್ಲರ ಪರಿಸ್ಥಿತಿಯೂ ಅದೇ ರೀತಿ ಆಗಿತ್ತು. ಏಕೆಂದರೆ, ನಿಮಗೆ ಯಾವುದೇ ರೀತಿಯ ಕಾರ್ಯಕ್ರಮ ಇರಲಿಲ್ಲ. ಯಾವ ರೀತಿಯಲ್ಲೂ ಆಶ್ವಾಸನೆ ಕೊಡುವ ಮಟ್ಟಕ್ಕೆ ಇಲ್ಲದ ಹಾಗೆ ಆಯಿತು. ಕುಡಿಯುವ ನೀರಿನ ವಿಚಾರದಲ್ಲಿ ಸಂಪೂರ್ಣ ನಿರ್ಲಕ್ಷ್ಯ ಆಗಿದೆ. ಮಾನ್ಯ ಉಪಾಧ್ಯಕ್ಷರೆ, ತಮ್ಮ ಪೀಠದಲ್ಲಿ ಕುಳಿತು ಪೂರಕ ಅಂದಾಜಿಗೆ ಒಪ್ಪಿಗೆ ಕೊಟ್ಟಿರಿ. ಬರಕ್ಕೆ ಎಂದು ಒಂದೇ ಒಂದು ರೂಪಾಯಿ ಸಹ ಕೊಟ್ಟಿಲ್ಲ. ಹಣ ಬೇಕು ಎಂದು ಯಾರೂ ಕೇಳಲಿಲ್ಲ. ನನಗೆ ಅದು ಅರ್ಥವಾಗಲಿಲ್ಲ. ರಸ್ತೆಗಳಿಗೆ ಹಣ ಕೊಟ್ಟಿದ್ದೀರಿ. ಅವಶ್ಯಕತೆ ಇತ್ತೇ? ನಿಮ್ಮ ಆದ್ಯತೆಗಳು ಏನು? ಕುಡಿಯುವ ನೀರು ಕೊಡಬೇಕು, ಸಮಸ್ಯೆ ಬಗೆಹರಿಸಬೇಕು ಎನ್ನುವ ನಿಮ್ಮ ಆದ್ಯತೆ ಎಲ್ಲಿಯೂ ಕಾಣುತ್ತಿಲ್ಲ. ಆ ಕಾಳಜಿಯೂ, ಕಳಕಳಿಯೂ ಇಲ್ಲ ಎಂದರೆ ಯಾರಿಗೆ ಹೇಳಬೇಕು? ಇವತ್ತೂ ಕೂಡ ಕುಡಿಯುವ ನೀರಿನ ವಿಚಾರದಲ್ಲಿ ತೆರೆದ ಮನಸ್ಸಿನಿಂದ ಹೋಗಬೇಕಾಗುತ್ತದೆ. ಯಾವುದೇ ರೀತಿಯಲ್ಲೂ ಹಣಕ್ಕೆ constraint ಆಗಬಾರದು. ಮಿತಿಯಾಗಬಾರದು. Taskforce ನವರಿಗೆ ಅಧಿಕಾರಿಗಳಿಗೆ ಅಧಿಕಾರವನ್ನು ಕೊಡಿ. 15–20 ವರ್ಷಗಳ

ಹಿಂದೆ ಕೊರೆಸಿದ್ದ ಬಾವಿ ಎಲ್ಲಿ failure ಆಗಿದೆ ಅದಕ್ಕೆ re-drill ಮಾಡತಕ್ಕಂಥದ್ದು ಮರುಪ್ರಯತ್ನವನ್ನು ಮಾಡಿ ನೀರು ತರುವ ಕೆಲಸವನ್ನು ಮಾಡುವ ಪ್ರಯತ್ನಕ್ಕೋಸ್ಕರ ಎಷ್ಟು ಹಣ ಬೇಕಾಗುತ್ತದೆ ಎಂಬುದನ್ನು ನೋಡಿ.

ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್ :- ಸದನದಲ್ಲಿ ಸಚಿವರಿಲ್ಲ.

ಶ್ರೀ ಬಿ.ಎನ್. ಬಚ್ಚೇಗೌಡ (ಕಾರ್ಮಿಕ ಸಚಿವರು) :- ನಮ್ಮದೂ ಅದೇ ರೀತಿಯಾಗಿದೆ.

ಶ್ರೀ ಟಿ.ಬಿ. ಜಯಚಂದ್ರ :- ಯಾರೂ ಕೇಳಿಸಿಕೊಳ್ಳದಿದ್ದರೂ ಕೊನೆಯ ಪಕ್ಷ ಸನ್ಮಾನ್ಯ ಯಡಿಯೂರಪ್ಪನವರಾದರೂ ಕೇಳಿಸಿಕೊಳ್ಳುತ್ತಿದ್ದಾರೆ. ನಮಗೆ ಅಷ್ಟಾದರೂ ಸಮಧಾನವಿದೆ. ಅವರಿಗೆ ಕೇಳಿಸಿಕೊಳ್ಳುವ ಪ್ರಾಮಾಣಿಕತನವಾದರೂ ಇದೆ. ಆ ರೀತಿ ಇನ್ನು ಯಾರ ಹತ್ತಿರವೂ ಇಲ್ಲ.

ಶ್ರೀ ಬಿ.ಎನ್. ಬಚ್ಚೇಗೌಡ :- ನಮ್ಮದೂ ಸಹ ಅದೇ ಸಮಸ್ಯೆಯಾಗಿದೆ. ತಾವು ಹೇಳುವುದನ್ನು ನಾವೂ ಕೇಳುತ್ತಿದ್ದೇವೆ.

ಶ್ರೀ ಬಂಡೆಪ್ಪ ಖಾಶೆಂಪೂರ್ :- RDPR, Animal Husbandry Ministers ಸದನದಲ್ಲಿ ಇಲ್ಲ. ಇಲ್ಲಿ ಬರಗಾಲದ ಮೇಲೆ discussion ಆಗುತ್ತಿದೆ.

ಶ್ರೀ ಬಿ.ಎನ್. ಬಚ್ಚೇಗೌಡ :- ನಾವೆಲ್ಲ ಇಲ್ಲಿ ಇದ್ದೇವೆ.

ಶ್ರೀ ಟಿ.ಬಿ. ಜಯಚಂದ್ರ :- ಕುಡಿಯುವ ನೀರಿನ ವಿಚಾರದಲ್ಲಿ ಭೀಕರದ ದಿನಗಳು, ತಿಂಗಳು ಎಂದರೆ ಏಪ್ರಿಲ್ ಮೇ ತಿಂಗಳು. Monsoon setin ಆಗಬೇಕಾದರೆ ಮಳೆ ಬರಬೇಕಾದರೆ ಜೂನ್ 10ರಲ್ಲಿಯೇ. June ಮೊದಲನೇ ವಾರದಲ್ಲಿ Monsoon setin ಆದರೂ ಕೂಡ ಮಳೆ ಬಂದು ಏನಾದರೂ ಸಂತೃಪ್ತಿಯಾಗಬೇಕಾದರೆ ಜೂನ್ 15ರ ನಂತರವೆ. ಅದೂ ಕೂಡ ಮಳೆ ಬಂದರೆ ಮಾತ್ರ. ಎರಡು, ಎರಡೂವರೆ ತಿಂಗಳು ನಾವು ಯಾವ ರೀತಿಯಾಗಿ ರೈತರು, ಜನರ ಹತ್ತಿರ ನಿಭಾಯಿಸಬೇಕು ಎಂದು ಅರ್ಥವಾಗುತ್ತಿಲ್ಲ. ಬಹುಶಃ ಇದು ನಿಮ್ಮ ಕಷ್ಟವೂ ಇರಬಹುದು. ಆದರೆ, ನಿಮ್ಮ ಕಷ್ಟ ಬೇರೆ, ನಮ್ಮ ಕಷ್ಟ ಬೇರೆ. ಈ ಎಲ್ಲದರ ಜೊತೆಗೆ ಕುಡಿಯುವ ನೀರಿನ ಜೊತೆಗೆ ಇನ್ನೊಂದು ದೊಡ್ಡ ಸಮಸ್ಯೆ ಎಂದರೆ ವಿದ್ಯುಚ್ಛಕ್ತಿ. ವಿದ್ಯುಚ್ಛಕ್ತಿ ಇದ್ದಾಗಲೇ ನೀರು ಇದ್ದೂ ನೀರು ಸಿಗುತ್ತಿಲ್ಲ. ಯುಗಾದಿಯ ಹಿಂದಿನ ಮುಂದಿನ ದಿವಸ ನೆಮ್ಮದಿಯಾಗಿ ಕುಳಿತು ನಾವು ಒಂದು ದಿವಸವೂ ಹಬ್ಬ ಆಚರಿಸುವುದಕ್ಕೆ ಆಗಲಿಲ್ಲ. ರಾತ್ರಿ 2–3 ಗಂಟೆಯವರೆಗೂ ಕೂಡ ನಾಳೆ ಹಬ್ಬ ಇದೆ, ಹಬ್ಬದ ದಿವಸದಲ್ಲಿ ನೀರು ಕೊಡಲೇಬೇಕು, ಆ ಹಬ್ಬವಾದ ಮೇಲೆ ವರ್ಷದ ತೊಡಕು ಬರುತ್ತದೆ, ಅದಕ್ಕೆ

ನೀರು ಬೇಕೇ ಬೇಕು. ನೀರು ಬೇಕೆಂದರೆ, ಕೊಡಿಸಬೇಕೆಂದರೆ, ನಾವು ಎಷ್ಟು ಕಷ್ಟಪಟ್ಟೆವು. request ಮಾಡಿಕೊಂಡೆವು ಎಂಬುದನ್ನು ನಮಗೆ ಗೊತ್ತದೆ. ಕೊನೆಗೆ lineman ಕೆಲಸ ಮಾಡುವ ಪರಿಸ್ಥಿತಿ ಬಂತು. ಈ ಮಟ್ಟಕ್ಕೆ ಹೋದರೂ ಕೂಡ ಸಮಾಧಾನವಾಗಿ ನೀರು ಕೊಡುವುದಕ್ಕೆ ಆಗಲಿಲ್ಲ. ಕೊನೆಗೆ tankers ಮೂಲಕ ನೀರು ಕೊಡಿಸುವ ಕೆಲಸ ಮಾಡಿದೆವು. PDO, ಯಾವ ಅಧಿಕಾರಿಯೂ ಕೂಡ ಹಬ್ಬ ಇದೆ, ಕೇಳೋಣ ಎಂದರೆ ಒಬ್ಬರೂ address ಗೇ ಇರಲಿಲ್ಲ. ಆ PDO ಗಳು ಕೈಗೆ ಸಿಗದ ಸಂದರ್ಭದಲ್ಲಿ ನಾವು ಸ್ವೆಚ್ಛೆಯಿಂದ ಕೆಲಸ ಮಾಡುವ ಪ್ರಯತ್ನ ಆಯಿತು. ಎಷ್ಟರ ಮಟ್ಟಿಗೆ ನಿಮ್ಮ control ನಲ್ಲಿದ್ದಾರೆ ಎಂಬುದು ಇದರಿಂದ ಗೊತ್ತಾಗುತ್ತದೆ. ಅದಕ್ಕೆ ಇದಕ್ಕಿಂತ ಸಾಕ್ಷಿ ಬೇಕೇ? ನಾವು ಎಷ್ಟೇ ಹೇಳಿದರೂ ಕೂಡ ಈ ವಿದ್ಯುತ್ ಕಣ್ಣು ಮುಚ್ಚಾಲೆ ಆಟ ಇದೆಯಲ್ಲಾ, ಇದರಿಂದ ಕುಡಿಯುವ ನೀರಿನ ಸಮಸ್ಯೆ ಉಲ್ಬಣವಾಗಿದೆ. ಸಮಸ್ಯೆ ಬಹಳಷ್ಟು ಜಾಸ್ತಿಯಾಗಿದೆ. ಇನ್ನು ಮುಂದೆ ಇನ್ನೂ ಕೂಡ ಜಾಸ್ತಿಯಾಗುತ್ತದೆ. ವಿದ್ಯುಚ್ಛಕ್ತಿಯನ್ನು ಎಷ್ಟು ಗಂಟೆ ಕೊಡುತ್ತೀರಿ ಎನ್ನುವ ಬಗ್ಗೆ ನಮಗೆ ಲೆಕ್ಕ ಸಿಗುತ್ತಿಲ್ಲ. ನಿಮ್ಮ time table ಪ್ರಕಾರ 3 phase ನಲ್ಲಿ 3 ಗಂಟೆ, 6 hours ಎಂದು ಹೇಳುತ್ತೀರಿ. ಬೆಳಗ್ಗೆ 3–00 ಗಂಟೆ ಸಾಯಂಕಾಲ 2–00 ಗಂಟೆ ಕರೆಂಟ್ ಕೊಡುತ್ತೇವೆನ್ನುತ್ತೀರಿ. ಒಂದು ಗಂಟೆ, ಎರಡು ಗಂಟೆಯೂ ನೀರು ಬರುವುದಿಲ್ಲ. ಇಂಥ ಪರಿಸ್ಥಿತಿಯಲ್ಲಿ ಕುಡಿಯುವ ನೀರಿಗೆ mini water tanks fill up ಆಗುತ್ತಿಲ್ಲ. voltage ಇಲ್ಲದಿರುವಾಗ ಎಷ್ಟು ಗಂಟೆ ಕರೆಂಟ್ ಕೊಟ್ಟು ಏನು ಪ್ರಯೋಜನ? Voltage ಇಲ್ಲದಿರುವುದು ಸಹ ದೊಡ್ಡ ಸಮಸ್ಯೆಯಾಗಿದೆ. ಇದಕ್ಕೆ ಏನು ಮಾಡುತ್ತಿದ್ದೀರಿ ಎಂಬುದು ನನಗೆ ಅರ್ಥವಾಗುತ್ತಿಲ್ಲ. ಪರಿಸ್ಥಿತಿ improve ಆಗುತ್ತದೆ ಎಂಬ ವಿಶ್ವಾಸ ನನಗಂತೂ ಇಲ್ಲ. ಪ್ರತಿದಿನ power Minister ಕೊಡುತ್ತಿರುವ statement ನೋಡಿದರೆ, ಎಲ್ಲೋ ಒಂದು ಕಡೆ caution ಮಾಡುತ್ತಿದ್ದಾರೆ, ಇನ್ನು ಮುಂದೆ ವಿದ್ಯುಚ್ಛಕ್ತಿ ಇಲ್ಲ, ನೀವು ಕತ್ತಲಲ್ಲಿ ಮಲಗಲು ತಯಾರಾಗಿ ಎನ್ನುವ ರೀತಿಯ ಸಂದೇಶ ಕೊಡುತ್ತಿದ್ದಾರೆ. ಇದು ಒಂದು ಕಡೆ. ಜನ ನೀರು ಕುಡಿಯುವ ವಿಷಯ ಆಯಿತು. ಪ್ರಾಣಿ ಪಕ್ಷಿಗಳ ಕತೆ ಏನಾಗಬೇಕು ಹೇಳಿ. ಯಾವುದೇ ಕ್ಷೇತ್ರದಲ್ಲಿ 100ಕ್ಕೆ 90–95 ರಷ್ಟು ಕೆರೆಗಳಲ್ಲಿ ನೀರಿಲ್ಲ. ಅಂಥ ಸಂದರ್ಭದಲ್ಲಿ ಎಲ್ಲೆಲ್ಲಿ ಹಳ್ಳಗಳಲ್ಲಿ ನೀರು ಬರುವುದಕ್ಕೆ ಸಾಧ್ಯ ಹೇಳಿ. ಕೃಷಿ ಹೊಂಡ ತೆರೆಯುವುದಕ್ಕೆ ಸಾಧ್ಯವಾಗುತ್ತದೆಯೇ ನೋಡಿ. ಆ ರೀತಿ ಹೊಂಡ ತೆರೆದು ನೀರು ಕೊಡಲಿಕ್ಕೆ ಸಾಧ್ಯವಾಗುತ್ತದೆಯೇ ನೋಡಿ. ಆ ರೀತಿ

ಕೃಷಿ ಹೊಂಡಗಳನ್ನು ತೆರೆಯಲು provision ಮಾಡಿ ಆದೇಶ ಕೊಡಬೇಕು. ಇವತ್ತು ನಾವು ಕೃಷಿ ಸಂಪತ್ತನ್ನು ಉಳಿಸಿಕೊಳ್ಳಬೇಕಾದ ಸಂದರ್ಭದಲ್ಲಿ ಏನು ಮಾಡಬೇಕು ಎನ್ನುವುದರ ಕಡೆಗೆ ಗಮನಹರಿಸಬೇಕು. ನಾನು ಈಗಾಗಲೇ ನನ್ನ ಕಡೆಯಿಂದ ಹತ್ತಾರು ಕಡೆ ಹೊಂಡಗಳನ್ನು ತೆಗೆಸುವ ಕೆಲಸ ಮಾಡಿದ್ದೇನೆ. ಹಾಗೂ ಹೀಗೂ 10 ಅಡಿಗೆ, 15 ಅಡಿಗೆ central ನಲ್ಲಿ ಒಂದು ಕಡೆ ಬಂದು ಅಷ್ಟು ದೂರದಲ್ಲಿ ಬಂದು ನೀರು ಕುಡಿದುಕೊಂಡು ಹೋಗತಕ್ಕಂಥ ಪರಿಸ್ಥಿತಿ ಉಂಟಾಗಿದೆ. ಮುಂದಿನ ದಿವಸಗಳಲ್ಲಿ ಇದು ಅತ್ಯಂತ ಭೀಕರವಾಗುತ್ತದೆ, ಇದರಿಂದ ಬಹಳ ಕಷ್ಟವಾಗುತ್ತದೆ ಎನ್ನುವ ಮಾತನ್ನು ಹೇಳುತ್ತೇನೆ. ಇನ್ನು ಗೋಶಾಲೆಗಳನ್ನು ಮಾಡಿದ್ದೇವೆಂದು ಹೇಳಿದಿರಿ. ಗೋಸಂಪತ್ತನ್ನು ಲೆಕ್ಕ ಹಾಕಿದರೆ, ಗೋಸಂಪತ್ತಿನ ಜೊತೆಗೆ ಕುರಿ ಮುಂತಾದ ಬೇರೆಯದನ್ನೆಲ್ಲ ಲೆಕ್ಕ ಹಾಕಿದರೆ ನಿಮ್ಮಲ್ಲಿರುವ ಮೇವು ಎಲ್ಲಾ ಕಡೆ exhaust ಆಗಿದೆ. ನೀರಾವರಿ ಪ್ರದೇಶದಲ್ಲಿ ಕೂಡ ಇವತ್ತು ಮೇವು exhaust ಆಗಿದೆ. ಹಾಗಾದರೆ, ಇನ್ನು ಮುಂದೆ ಏನು ಮಾಡಬೇಕು? ಅದಕ್ಕೆ ಪರ್ಯಾಯವಾಗಿ ಏನು ಮಾಡಬೇಕು ಎನ್ನುವ ಕಡೆಗೆ ಗಮನಹರಿಸಬೇಕು. ನೀವು ರೈತರಿಗೆ sample kits ಅನ್ನು ಕೊಟ್ಟಿದ್ದೀರಿ. ಈ IP set ಇರತಕ್ಕಂಥವರು ಮಾತ್ರ ಇವತ್ತು ಅಲ್ಪಸ್ವಲ್ಪ ಅದನ್ನು ಬೆಳೆಯುವುದಕ್ಕೆ ಸಾಧ್ಯವಾಯಿತು. ಆದರೆ, ಬೇರೆಯವರಿಗೆ ಯಾವ ರೀತಿಯಾದ ಪರಿಸ್ಥಿತಿ ನಿರ್ಮಾಣವಾಗಿದೆ? ಈಗಾಗಲೇ ಸಂತೆಗಳಲ್ಲಿ ದನಗಳು ಸೇರುತ್ತಿಲ್ಲ. ನಮ್ಮಲ್ಲಿ ಈಗ ವಿಪರೀತವಾಗಿ ಸಂತೆಗಳು ಆಗಬೇಕಾಗಿತ್ತು. ಆದರೆ, ಈಗ ಸಂತೆಗಳಲ್ಲಿ ದನಗಳೇ ಸೇರುತ್ತಿಲ್ಲ. ಏಕೆಂದರೆ, ಈಗಾಗಲೇ ಸಂತೆಗಳು ಆಯಿತು ಎಂದು ಬರುವುದಕ್ಕೇ ತಯಾರಿಲ್ಲ. ಆ ರೀತಿಯ ಸ್ಥಿತಿಯಾಗಿದೆ. ಆದ್ದರಿಂದ ಗೋಶಾಲೆಗಳನ್ನು ತೆರೆಯಬೇಕೆಂದು ಒತ್ತಿ ಒತ್ತಿ ಹೇಳುತ್ತೇನೆ. ಗೋಸಂಪತ್ತನ್ನು ಉಳಿಸಬೇಕು, ಗೋಹತ್ಯೆ ನಿಷೇಧ ಮಾಡಬೇಕೆಂದು ದೊಡ್ಡ ಮಟ್ಟದಲ್ಲಿ ಭಾಷಣ ಮಾಡತಕ್ಕಂಥ ಈ ಸರ್ಕಾರಕ್ಕೆ ಇವತ್ತು ಅತ್ಯಂತ ಕಷ್ಟದಲ್ಲಿರುವಂಥ ಗೋವುಗಳಿಗೆ ನೀರು ಕೊಡಲಿಕ್ಕಾಗಲಿಲ್ಲ, ಮೇವು ಕೊಡಲಿಕ್ಕಾಗಲಿಲ್ಲ, ಗೋಶಾಲೆಗಳನ್ನು ಪ್ರಾರಂಭ ಮಾಡಲಿಕ್ಕಾಗಲಿಲ್ಲವೆಂದರೆ ಸರ್ಕಾರಕ್ಕೆ ನಾಚಿಕೆ ಆಗಬೇಕು. ರಾಜ್ಯದಲ್ಲಿ 34 ಗೋ ಶಾಲೆಗಳನ್ನು ತೆರೆದಿದ್ದೇವೆಂದು ಮಾನ್ಯ ಮುಖ್ಯಮಂತ್ರಿಯವರು ಬಹಳ ದೊಡ್ಡದಾಗಿ ಹೇಳುತ್ತಾರೆ. 123 ತಾಲ್ಲೂಕುಗಳಲ್ಲಿ ಅದರಲ್ಲೂ ಸುಮಾರು 70 ತಾಲ್ಲೂಕುಗಳು totally exploited taluks. ಅಂತರ್ಜಲ ಇಲ್ಲದಿರತಕ್ಕಂಥ ತಾಲ್ಲೂಕುಗಳು ಸೇರಿವೆ. ಅಲ್ಲಿ ಯಾವುದೇ ರೀತಿಯ ಮೇವು ಸಿಗದಿರತಕ್ಕಂಥ ಸಂದರ್ಭದಲ್ಲಿ, ನೀವು 34 ಗೋಶಾಲೆಗಳನ್ನು ತೆರೆದಿದ್ದೇವೆಂದು ಹೇಳಿದರೆ ಇದು

ಯಾರಿಗೆ ಸಮಾಧಾನ ಮಾಡುವುದಕ್ಕೋಸ್ಕರ ತೆರೆದಿದ್ದೀರಿ? ಯಾರ ಬಜೆಟ್ ಭಾಷಣದಲ್ಲಿ ಸಮಾಧಾನ ಮಾಡುವುದಕ್ಕೋಸ್ಕರ ಹೇಳಿದ ಮಾತು ಇದು ಎಂದು ನನಗೆ ಅರ್ಥವಾಗುತ್ತಿಲ್ಲ. ಯಾವುದೇ ಪ್ರಯತ್ನಗಳು ಕೂಡ ಆಗುತ್ತಿಲ್ಲ. ಒಂದು ಗೋಶಾಲೆ ಪ್ರಾರಂಭ ಮಾಡಬೇಕೆಂದರೆ ಕನಿಷ್ಠ 30 ರಿಂದ 32 ಲಕ್ಷ ರೂಪಾಯಿಗಳು ಬೇಕಾಗುತ್ತದೆ. ಒಂದು ಸಲ ಗೋಶಾಲೆಯನ್ನು ಪ್ರಾರಂಭ ಮಾಡಿದರೆ ಅದು ಕನಿಷ್ಠ ಒಂದು ತಿಂಗಳಾದರೂ ನಡೆಯಬೇಕಾಗುತ್ತದೆ. ಒಂದು ದನಕ್ಕೆ ಎಷ್ಟು ಮೇವು ಬೇಕಾಗುತ್ತದೆ, ಎಷ್ಟು ಲೀಟರ್ ನೀರು ಬೇಕಾಗುತ್ತದೆನ್ನುವುದನ್ನೆಲ್ಲ ಅಂದಾಜು ಮಾಡಿ ಒಂದು ಗೋಶಾಲೆ ಪ್ರಾರಂಭ ಮಾಡಬೇಕಾದರೆ 32 ಲಕ್ಷ ರೂಪಾಯಿ ಬೇಕಾಗುತ್ತದೆ ಎಂದು ಅಂದಾಜು ಮಾಡಿದ್ದಾರೆ. ಆದರೆ, ಈಗ ಬಿಡುಗಡೆ ಮಾಡಿರುವುದು ಕೇವಲ 5 ಲಕ್ಷ ರೂಪಾಯಿಗಳು. ಒಂದು ಸಲ 5 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿಬಿಟ್ಟರೆ ಆಮೇಲೆ ಏನಾಯಿತು ಎಂದು ಕೇಳುವವರು ಗತಿ ಇಲ್ಲ. ಮಾನ್ಯ ಮುಖ್ಯಮಂತ್ರಿಗಳೇ ಚಿತ್ರದುರ್ಗಕ್ಕೆ ಹೋಗಿ ಅಲ್ಲಿ ಬಹಳ ಕಡೆ ಗೋಶಾಲೆಗಳನ್ನು ಪ್ರಾರಂಭ ಮಾಡಿದರು. ಅದು ಒಂದು ತಿಂಗಳೊಳಗೆ ಮುಚ್ಚಿಹೋಗತಕ್ಕಂಥ ಪರಿಸ್ಥಿತಿ ಬಂತು. ಈ ರೀತಿಯಾದರೆ, ಇದು ತೋರಿಕೆಗೆ ಮಾಡತಕ್ಕಂಥ ಕೆಲಸವಾಗುತ್ತದೆ, ಪ್ರಾಮಾಣಿಕವಾಗಿ ಜನರಿಗೆ ಸ್ಪಂದಿಸತಕ್ಕಂಥ ಸೂಚನೆ ಆಗುವುದಿಲ್ಲವೆನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಇನ್ನು ಕೃಷಿ ಕಾರ್ಮಿಕರ ಬಗ್ಗೆ ಹೇಳುವುದಾದರೆ, ಉದ್ಯೋಗ ಖಾತರಿ ಯೋಜನೆ ಜಾರಿಯಲ್ಲಿರಬೇಕಾದಾಗ ಇವತ್ತು ಉದ್ಯೋಗವನ್ನು ಸೃಷ್ಟಿ ಮಾಡತಕ್ಕಂಥದ್ದು ಆ ಯೋಚನೆಯನ್ನೇ ಬಿಟ್ಟಿರತಕ್ಕಂಥ ವಿಚಾರ ಬಂದಾಗ ನಾವು ಇದರಲ್ಲಿ ಹಣವನ್ನು ಕೊಡುವುದಿಲ್ಲವೆನ್ನುವ ಆದೇಶವನ್ನು, ಮಾತನ್ನು ಹೇಳುತ್ತಿದ್ದೀರಿ. ಹಾಗಾಗಿ ಉದ್ಯೋಗ ಖಾತರಿ ಯೋಜನೆಗಳೇ ಏಕೆ ಕಡಿಮೆಯಾಗುತ್ತಿದೆ ಎನ್ನುವುದರ ಬಗ್ಗೆ ಗಮನ ಹರಿಸಬೇಕಾಗುತ್ತದೆ. ಬೆಳಿಗ್ಗೆ ವಿರೋಧ ಪಕ್ಷದ ನಾಯಕರು ಮಾತನಾಡುತ್ತಾ, 2006-07 ರಿಂದ ಎಷ್ಟೆಷ್ಟು ತಾಲ್ಲೂಕುಗಳು, ಎಷ್ಟೆಷ್ಟು ಜಿಲ್ಲೆಗಳಿಗೆ ಇತ್ತು. ಈಗ ಸಂಪೂರ್ಣವಾಗಿ ರಾಜ್ಯಕ್ಕೆ ಬಂದಿದೆ, ಎಷ್ಟು ಹಣ ಖರ್ಚಾಗಿದೆ ಎನ್ನುವುದನ್ನೆಲ್ಲ ಹೇಳಿದರು. ಅದರಲ್ಲಿ labour component only 60%, 40% for material. ಒಂದು ಕಡೆ asset creation ಆಗಬೇಕು, ಇನ್ನೊಂದು ಕಡೆ ಉದ್ಯೋಗ ಸೃಷ್ಟಿಯಾಗಬೇಕು. ನಿಮ್ಮ ಸರ್ಕಾರಕ್ಕೆ ಕಾಳಜಿ ಇಲ್ಲ ಎನ್ನುವುದಕ್ಕೆ ಉದಾಹರಣೆಯಾಗಿ ಹೇಳುವುದಾದರೆ, ಉದ್ಯೋಗ ಖಾತರಿ ಯೋಜನೆಯಲ್ಲಿ 155 ರೂಪಾಯಿಗಳನ್ನು ದಿನಗೂಲಿ ಆಗಿ ಕೊಡುವುದೆಂದು ತೀರ್ಮಾನವಾಗಿದೆ. Labour Minister ರವರು ಇವತ್ತು

ಸದನದಲ್ಲಿಯೇ ಇದ್ದಾರೆ. Minimum wages Act ಪ್ರಕಾರ ನೀವು notification ಮಾಡಿ ಎಷ್ಟು ದಿವಸಗಳಾಯಿತು? Minimum wages Act ಪ್ರಕಾರ wages ಅನ್ನು declare ಮಾಡಿ notification ಮಾಡಿ ಎಷ್ಟು ದಿವಸಗಳಾಯಿತು? ನನಗೆ ತಿಳಿದಿರುವ ಮಟ್ಟಿಗೆ ನೀವು 143 ಅಥವಾ 144 ರೂಪಾಯಿಗಳು ಎಂದು notification ಮಾಡಿ ಅದನ್ನು ನೀವು ಕೇಂದ್ರ ಸರ್ಕಾರಕ್ಕೆ ರವಾನೆ ಮಾಡಿ 6 ತಿಂಗಳಾಯಿತು. 6 ತಿಂಗಳಾದ ನಂತರ ಕೇಂದ್ರ ಸರ್ಕಾರದಿಂದ ಆದೇಶ ಹೊರಬರುತ್ತದೆ.

ಶ್ರೀ ಬಿ.ಎನ್. ಬಚ್ಚೇಗೌಡ (ಕಾರ್ಮಿಕ ಸಚಿವರು) :- ಒಂದ್ನಿಮಿಷ, MNREG ಯಲ್ಲಿ ದಿನಗೂಲಿ 125 ರೂಪಾಯಿ ಇತ್ತು. ಆ 125 ರೂಪಾಯಿ ಏನಿತ್ತು ಅದು 145 ರೂಪಾಯಿ ಆಗಬೇಕೆಂದು ಅದು High Court ಗೆ ಹೋಗಿ High Court ಆದೇಶದ ಮೇಲೆ Supreme Court ಗೆ appeal ಆಯಿತು. ಇವತ್ತು ಆ ಪರಿಸ್ಥಿತಿಯಲ್ಲಿ ಕೇಂದ್ರದ ಸಚಿವರಾದ ಶ್ರೀ ಜಯರಾಮ್ ರಮೇಶ್‌ರವರು MNREG minimum wages ಅನ್ನು 155 ರೂಪಾಯಿಗಳೆಂದು ಮಾಡಿದ್ದಾರೆ. ಆ 155 ರೂಪಾಯಿಗಳಿಗೆ provided Supreme Court decision ಪ್ರಕಾರ ತೀರ್ಮಾನ ಕೊಟ್ಟಿದ್ದಾರೆ. ನಾನು Labour Minister ಆಗಿ ನನ್ನ schedule of employments ಗೆ ಕೊಡುವ minimum wages ಬೇರೆ. ಅದನ್ನು once in three years, once in five years revision ಮಾಡುತ್ತಾ ಹೋಗುತ್ತೇವೆ. ಅದು labourés ಗೆ ಮಾತ್ರ ಅನ್ವಯವಾಗುವಂಥದ್ದು. ಇದು agriculture labourers ಗೆ ತಾವು ಹೇಳುವಂಥದ್ದು Rural Development and Panchayat Raj Department ಗೆ ಬರುತ್ತದೆ, ನನಗೆ ಬರುವುದಿಲ್ಲ.

ಶ್ರೀ ಟಿ.ಬಿ. ಜಯಚಂದ್ರ :- ನೀವು ಎಷ್ಟು ಕೊಡುತ್ತಿದ್ದೀರಿ ಎನ್ನುವುದನ್ನು ಹೇಳಿ.

ಶ್ರೀ ಬಿ.ಎನ್. ಬಚ್ಚೇಗೌಡ (ಕಾರ್ಮಿಕ ಸಚಿವರು) :- ನಾನು Different schedule of employments ಗೆ ನಾವು ಕೊಟ್ಟುಕೊಂಡು ಹೋಗುತ್ತಿದ್ದೇವೆ. ನನ್ನ ಹತ್ತಿರ ಈ ತರಹ clarification ಹೀಗಿದೆ. Skilled, unskilled, semi-skilled, attender ಎಂದು 4 ತರಹದ scale ಇದೆ. ಆ ಪ್ರಕಾರ ನಾವು cost index ಮೇಲೆ work out ಮಾಡಿ ಒಟ್ಟು ಮೂರು ವರ್ಷಕ್ಕೊಮ್ಮೆ revision ಮಾಡುತ್ತೇವೆ.

ಶ್ರೀ ಟಿ.ಬಿ. ಜಯಚಂದ್ರ :– ನನಗೆ procedure ಬೇಡ. Notification ನಲ್ಲಿ ಮಾಡಿರುವುದು ಎಷ್ಟು?

ಶ್ರೀ ಬಿ.ಎನ್. ಬಚ್ಚೇಗೌಡ :– ನಾನು Scheduled Employments ಗೆ Rs. 75 ಮಾಡಿದ್ದೇನೆ.

ಶ್ರೀ ಟಿ.ಬಿ. ಜಯಚಂದ್ರ :– Un-skilled labours ಕೂಲಿಗೆ ಎಷ್ಟು ಕೊಡುತ್ತಿದ್ದೀರೆಂದು ನಾನು ಕೇಳುತ್ತಿದ್ದೇನೆ.

ಶ್ರೀ ಬಿ.ಎನ್. ಬಚ್ಚೇಗೌಡ :– ಅಸಂಘಟಿತ ವಲಯಕ್ಕೆ ಈಗ ಇರುವಂಥದ್ದು 155 ರೂಪಾಯಿ ಮತ್ತು ಹಿಂದೆ ಇದ್ದಂಥದ್ದು 125 ರೂಪಾಯಿಗಳು.

ಶ್ರೀ ಟಿ.ಬಿ. ಜಯಚಂದ್ರ :– ದಯಮಾಡಿ ನೀವು notification ಮಾಡಿರುವುದು ಎಷ್ಟಕ್ಕೆ ಎಂದು ತಮ್ಮ Labour Department ನ ಅಧಿಕಾರಿಗಳನ್ನು ಕೇಳಿ. ನಿಮ್ಮ ಇಲಾಖೆಯವರು 144 ರೂಪಾಯಿಗಳಿಗೆ Notification ಮಾಡಿರುವಂಥದ್ದು. ಅದರ basis ಮೇಲೆಯೇ ಇವತ್ತು ಕೇಂದ್ರ ಸರ್ಕಾರದವರು 155 ರೂಪಾಯಿಗಳೆಂದು ಮಾಡಿದ್ದಾರೆ. ಯಾವತ್ತು Notification ಆಯಿತು ಎಂಬುದಲ್ಲ. ಈ ಬಗ್ಗೆ ಕೇಂದ್ರ ಸರ್ಕಾರಕ್ಕೆ ಒತ್ತಾಯ ಮಾಡಿ ಇಲ್ಲಿಯವರೆಗೆ ನೀವು ತರಲಿಲ್ಲ. ನೀವು ಪ್ರಸ್ತಾವನೆ ಕಳುಹಿಸಿ 6 ತಿಂಗಳಾದ ಮೇಲೆ ಇವತ್ತು ಏಕೆ ಬಂತು? ಅತ್ಯಂತ ಕಡಿಮೆ ದಿನಗೂಲಿ ಇರತಕ್ಕಂಥದ್ದು ಕರ್ನಾಟಕ ರಾಜ್ಯವಾಗಿದೆ. ಬೇರೆ ಬೇರೆ ರಾಜ್ಯಗಳಿಗೆ ಹೋಲಿಸಿ ನೋಡಿದಾಗ ಇದು ನಮ್ಮಲ್ಲಿ ಬಹಳ ಕಡಿಮೆ ಇದೆ. ಅಂದರೆ ನಿಮ್ಮ ಪ್ರಾಮಾಣಿಕತೆ, ಇದು ನಿಮ್ಮ ಖಾತೆಗೆ ಅಲ್ಲದಿದ್ದರೂ ಗ್ರಾಮೀಣಾಭಿವೃದ್ಧಿ ಸಚಿವರು ಇವೆಲ್ಲದರ ಬಗ್ಗೆ ಯೋಚನೆ ಮಾಡಬೇಕಾಗಿತ್ತು. ಇದನ್ನು ನಾವು ಹೇಳಬೇಕಲ್ಲ, ಅದಕ್ಕೆ ಹೇಳುತ್ತಿದ್ದೇವೆ. ಇಲ್ಲಿ ಯಾರೂ ಕೇಳಿಸಿಕೊಳ್ಳುವವರಿಲ್ಲ. ಇದು ನಮ್ಮ ಹಣೆಬರಹ. ಉದ್ಯೋಗ ಖಾತರಿ ಯೋಜನೆಯಲ್ಲಿ ಎಂಥ ಒಳ್ಳೆಯ ಅವಕಾಶವಿತ್ತ ಎಂದರೆ, ಬಹುಶಃ ರಾಜ್ಯಸರ್ಕಾರ ಸ್ವಲ್ಪ interest ತೆಗೆದುಕೊಂಡು ಮಾಡಿದ್ದರೆ, ಏನು ದೊಡ್ಡ ತೊಂದರೆಯಾಗಿರುವುದು ಎಂದರೆ, executionಗೆ ತೊಂದರೆ ಆಗಿರತಕ್ಕಂಥದ್ದು, ಯಾವುದೇ ಕಾಮಗಾರಿಯನ್ನು ಮಾಡಬೇಕಾದ ಸಂದರ್ಭದಲ್ಲಿ videoದಲ್ಲಿ ಹಿಡಿಯಬೇಕೆಂದು ಇದೆ. ಆದರೆ, ನೀವು ಇವತ್ತು Labour ಕೆಲಸ ಮಾಡುತ್ತಿರುವುದನ್ನು videograph ಮುಖೇನ up-load ಮಾಡಬೇಕೆಂದು ಮುಂತಾದವುಗಳನ್ನು ಮಾಡಿದ್ದೀರಿ. ಅದನ್ನು ಮಾಡದೆ ಇರುವ ಕಾರಣಕ್ಕೆ, ಅಧಿಕಾರಿಗಳು ಸ್ಪಂದಿಸದಿರುವ ಕಾರಣಕ್ಕೋಸ್ಕರ ಇವತ್ತು ಕಾಮಗಾರಿಗಳು

ಆಗಲಿಲ್ಲ. ಕಳೆದ ಮೂರು ವರ್ಷಗಳಿಂದ ನನ್ನ ಜಿಲ್ಲೆಯಲ್ಲಿ ಜಾರಿಯಲ್ಲಿದೆ. ನಾನು ಮೊದಲನೇ ವರ್ಷ ನನ್ನ ಕ್ಷೇತ್ರದಲ್ಲಿ 44 ಕೋಟಿ ರೂಪಾಯಿಗಳ financial progress ಕೊಡಿಸಿದ್ದೇನೆ. 2ನೇ ವರ್ಷ 47 ಕೋಟಿ ರೂಪಾಯಿಗಳ financial progress ಕೊಟ್ಟಿದ್ದೇವೆ, ಆದರೆ, 3ನೇ ವರ್ಷ ಕೇವಲ 4.5 ಕೋಟಿ ರೂ.ಗಳ progress ಕೊಟ್ಟಿರುವಂಥದ್ದು. ಇದಕ್ಕೆ ಕಾರಣವೇನೆಂದರೆ, ಇದರಲ್ಲಿ execution problem ಆಗುತ್ತಿದೆ. ಅದನ್ನು ನೀವು ಎಷ್ಟರ ಮಟ್ಟಿಗೆ, ಮಹಾತ್ಮ ಗಾಂಧಿ ಉದ್ಯೋಗ ಖಾತರಿ ಯೋಜನೆಗೆ ರಾಜ್ಯ ಮಟ್ಟದಲ್ಲಿ ಒಂದು ಸಮಿತಿ ಇದೆ. ನೀವು ಯಾವುದೇ ವಿಚಾರಗಳನ್ನು ನಿರ್ಧಾರ ಮಾಡುವುದಕ್ಕೆ ನಿಮಗೆ ಅವಕಾಶವಿದೆ. ಇವೆಲ್ಲಕ್ಕಿಂತಲೂ ಹೆಚ್ಚಾಗಿ ಕೇಂದ್ರ ಸರ್ಕಾರ ನಿಗದಿ ಮಾಡಿದಂಥ ಹಣವನ್ನು ಕಳೆದ ಮೂರು ವರ್ಷಗಳಲ್ಲಿ 3800 ಕೋಟಿ ರೂಪಾಯಿಗಳಲ್ಲಿ ನೀವು ಖರ್ಚು ಮಾಡಿರುವಂಥದ್ದು 1800 ಕೋಟಿ ರೂಪಾಯಿಗಳು ಮಾತ್ರ. ಇದು ಏಕೆ ಕಡಿಮೆಯಾಗುತ್ತಿದೆ ಎಂದು, ಈ ಬಾರಿ ಕೂಡ ಕಡಿಮೆಯಾಗುತ್ತದೆ ಎಂದರೆ ಅದನ್ನು ನೀವು ಒಪ್ಪಬಾರದಾಗಿತ್ತು. ಕಾರಣ ಏನೆಂದರೆ ಈ ಉದ್ಯೋಗ ಖಾತ್ರಿ ಯೋಜನೆ ಎನ್ನುವುದು it is an Act of Parliament. ಇವತ್ತು on demand you have to give employment. ಇವತ್ತು ನಮ್ಮಲ್ಲಿ register ಮಾಡಿದವರು ಎಷ್ಟು ಜನ ಇರುತ್ತಾರೆ, ಅದರ Basis ಮೇಲೆ ನೀವು action plan ಮಾಡಿ ಕೇಂದ್ರ ಸರ್ಕಾರದ ಒಪ್ಪಿಗೆ ಪಡೆಯತಕ್ಕಂಥ ಕೆಲಸ ಮಾಡಬೇಕಾಗಿತ್ತು. ಆ ಕೆಲಸ ಮಾಡಲಿಲ್ಲ. ತಾಲ್ಲೂಕು ಪಂಚಾಯಿತಿಯ ಅಧಿಕಾರಿಗಳಿಗೆ ನೀವು ಇಷ್ಟಿಷ್ಟೆ limit ಮಾಡಿ ಎಂದು ಹೇಳಿದಿರಿ. ನಿಮ್ಮ job cards ಎಷ್ಟು ಇದೆ ಎನ್ನುವ ಅಂಕಿಅಂಶವನ್ನೇ ಗಣನೆಗೆ ತೆಗೆದುಕೊಳ್ಳಲಿಲ್ಲ. ಅದಕ್ಕೆ ಅನುಗುಣವಾಗಿ ಕೂಲಿ ಎಷ್ಟು ಬೇಕು ಎನ್ನುವುದನ್ನು ಗಮನಿಸಲಿಲ್ಲ. ನೀವು ನಿರ್ಧಿಷ್ಟವಾಗಿ ಹೇಳಿದ್ದರಿಂದ action plan ನಲ್ಲಿ ಅಷ್ಟಕ್ಕೆ ಮಾಡಿದರು. ಇದೆಲ್ಲಾ ನಮಗೆ ಜ್ಞಾನೋದಯವಾದ ಮೇಲೆ ಕಷ್ಟಪಟ್ಟು ಹೋರಾಟ ಮಾಡಿ additional action plan ಎಂದು ಮಾಡಿಸಿದೆವು. Additional action planಗೂ ಇನ್ನೂ approval ಕೊಟ್ಟಿಲ್ಲ. ತಾಲ್ಲೂಕು ಪಂಚಾಯಿತಿ office ಮತ್ತು Chief Secretary office ಹತ್ತಿರ ಅಲೆದಲೆದು ಸಾಕಾಗಿ ನಾವು ಏನೂ progress ಕೊಡುವುದಕ್ಕೆ ಆಗದೇ ಏನೂ ಮಾಡುವುದಕ್ಕೆ ಆಗುವುದಿಲ್ಲವೆನ್ನುವ ಕಾರಣಕ್ಕಾಗಿಯೇ ಸುಮ್ಮನೆ ಇರಬೇಕಾಯಿತು. ಇದು ಆಗುತ್ತಿರುವುದು. ನಿಮಗೆ ಸಮಸ್ಯೆಗಳನ್ನು ಅರ್ಥ ಮಾಡಿಕೊಂಡು ಅದನ್ನು ಪರಿಹರಿಸಬೇಕು

ಎನ್ನತಕ್ಕಂಥದ್ದಕ್ಕೆ ಕಾಲವೂ ಇಲ್ಲ ಮನಸ್ಸೂ ಇಲ್ಲ. ಇದು ಬಂದಿರುವ problem. ಈಗ ಇಲ್ಲಿ ಗ್ರಾಮೀಣಾಭಿವೃದ್ಧಿ ಸಚಿವರು ಇರಬೇಕಾಗಿತ್ತು. ಇದನ್ನು ಯಾರಿಗೆ ಹೇಳುವುದು? ಅವರಿಗೆ ಖಂಡಿತವಾಗಿಯೂ ಇದನ್ನು ಹೇಗೆ ಮಾಡಬೇಕೆಂದು ಅರ್ಥವಾಗಿಲ್ಲ. ನಾವು ದೆಹಲಿಗೆ ಹೋದ ಸಂದರ್ಭದಲ್ಲಿ ಕೃಷಿ ಸಚಿವರನ್ನು ಕೇಳಿದಾಗ ಅವರು ಹೇಳಿದರು, ರಾಜ್ಯ ಸರ್ಕಾರದ ಮಟ್ಟದಲ್ಲಿ State Level Committee ಇದೆ ನೀವು ಅಲ್ಲಿ ಕುಳಿತುಕೊಂಡು ತೀರ್ಮಾನ ಮಾಡಿದರೆ ನಮ್ಮದೇನು ತೊಂದರೆಯಿದೆ ಎಂದರು. ಆದರೆ, ಬೇರೆ ಬೇರೆ ರಾಜ್ಯದಲ್ಲಿ ರಾಜಸ್ತಾನದಲ್ಲಿ ಖರ್ಚಾಗುತ್ತಿದೆ, ಗುಜರಾತ್‌ನಲ್ಲಿ ಖರ್ಚಾಗುತ್ತಿದೆ ಎಂದರೆ ನಮ್ಮಲ್ಲಿ ಏಕೆ ಆಗುತ್ತಿಲ್ಲ? ಆಂಧ್ರದಲ್ಲಿ ಏಕೆ ಆಗುತ್ತಿಲ್ಲ? ನಿಜ, ಮಾನ್ಯ ಮುಖ್ಯಮಂತ್ರಿಗಳು ಕಡಿಮೆಯಾಗುತ್ತಿದೆ ಎಂದು ಹೇಳಿದ್ದನ್ನು ನಾನು ಒಪ್ಪುತ್ತೇನೆ. ಆದರೆ, ನಮ್ಮ ಪರಿಸ್ಥಿತಿಗೆ ಅನುಗುಣವಾಗಿ ನಾವು approval ತೆಗೆದುಕೊಳ್ಳಬೇಕಾಗುತ್ತದೆ ಅದಕ್ಕೆ fight ಮಾಡಬೇಕಾಗುತ್ತದೆ. ಒಂದು ಸಾರಿ ಕಾಮಗಾರಿ ಮಾಡಿ ನಾಳೆ ಹಣ ಬಿಡುಗಡೆಗೆ ಪ್ರಯತ್ನ ಪಟ್ಟರೆ ಆಗುವುದಿಲ್ಲ ಎನ್ನತಕ್ಕಂಥ ಪ್ರಶ್ನೆಯಿಲ್ಲ. ಅಂಥದ್ದಕ್ಕೆ ಇವತ್ತು ಏನೇನೂ ಪ್ರಯತ್ನಗಳು ಆಗಲಿಲ್ಲ. ಹೀಗಾಗಿ ಇವತ್ತು ನಮಗೆ ದುಡಿಯುವಂಥ ಕೈಗಳಿಗೆ ಉದ್ಯೋಗಗಳಿಲ್ಲ, ಅವರಿಗೆ ಕೂಲಿಯಿಲ್ಲ, ಅರೆಹೊಟ್ಟೆಯಲ್ಲಿ ಅವರು ಮಲಗುವಂಥ ಪರಿಸ್ಥಿತಿ ಇವತ್ತು ಬಂದಿರತಕ್ಕಂಥದ್ದು. ಬೆಳಗ್ಗೆ ಯಾರೋ ಒಬ್ಬರು ಒಂದು ಪ್ರಶ್ನೆ ಕೇಳಿದಾಗ ಮಾನ್ಯ ಮುಖ್ಯಮಂತ್ರಿಗಳು, ನಮ್ಮ ರಾಜ್ಯದಿಂದ ಯಾರು ಕೂಡ ಗುಳೆ ಹೋಗುತ್ತಿಲ್ಲ ಎನ್ನುವ ಮಾತನ್ನು ಹೇಳಿದರು. ನಮ್ಮಲ್ಲಿ ನೆರೆರಾಜ್ಯವಾದ ಆಂಧ್ರ ಪ್ರದೇಶಕ್ಕೆ ಬೆಳಿಗ್ಗೆ ಎದ್ದರೆ ಎಲ್ಲಾ ಕೂಲಿಗಾಗಿ ಹೋಗುತ್ತಿದ್ದಾರೆ. ಇದು ನಾಚಿಕೆಯಾಗುತ್ತದೆ. ರಾಜ್ಯಕ್ಕೆ ಅವಮಾನವಾಗುತ್ತಿದೆ, ಇದನ್ನು ಅರ್ಥ ಮಾಡಿಕೊಳ್ಳದಂಥ ಆಡಳಿತ ಇವತ್ತು ನಮ್ಮಲ್ಲಿ ನಡೆಯುತ್ತಿರತಕ್ಕಂಥದ್ದು, ಇದೊಂದು ಬಹಳ ವಿಪರ್ಯಾಸವೆಂದು ಹೇಳಿದರೆ ತಪ್ಪಾಗಲಾರದು. ಹೀಗಾಗಿ ನಾನು ಈ ಸಂದರ್ಭದಲ್ಲಿ ಹೇಳುವುದು ಇಷ್ಟೆ, ಎಲ್ಲದ್ದನ್ನೂ ಕೂಡ ನಾನು ವಿಸ್ತಾರವಾಗಿ ಮಾತನಾಡತಕ್ಕಂಥ ಅವಶ್ಯಕತೆಯಿಲ್ಲ. ವಿರೋಧ ಪಕ್ಷದ ನಾಯಕರು ಈಗಾಗಲೇ ಸಾಕಷ್ಟು ವಿಚಾರಗಳನ್ನು ಪ್ರಸ್ತಾಪಿಸಿದ್ದಾರೆ. ದಯಮಾಡಿ ನಿಮ್ಮ ಹಣ, CRF ನಿಂದ ಕೇಂದ್ರ ಸರ್ಕಾರದಿಂದ ಬರತಕ್ಕಂಥ 170 ಕೋಟಿ ಬಿಟ್ಟರೆ ಮತ್ತೆ ಗ್ರಾಮೀಣಾಭಿವೃದ್ಧಿಯಲ್ಲಿ ಇವತ್ತು ಆಗಿರುವುದು ಸುಮಾರು 130 ಕೋಟಿ ಬಿಟ್ಟರೆ 301 ಕೋಟಿ ಖಂಡಿತವಾಗಿ ನಿಮಗೆ ಖರ್ಚು ಮಾಡುವುದಕ್ಕೆ ಆಗುವುದಿಲ್ಲ. ನೀವು ಖರ್ಚು ಮಾಡತಕ್ಕಂಥ ರೀತಿಯಲ್ಲಿಯೂ ಕೂಡ action plan ಆಗಿಲ್ಲ

ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ನೀವು ಒಂದು ಕಡೆ ಉದ್ಯೋಗ ಕೊಡುತ್ತಿಲ್ಲ, ಕುಡಿಯುವುದಕ್ಕೆ ನೀರು ಕೊಡುತ್ತಿಲ್ಲ, ಅದಕ್ಕೆ ಬೇಕಾದ ವಿದ್ಯುಚ್ಛಕ್ತಿ ಕೊಡುತ್ತಿಲ್ಲ. ವಿದ್ಯುಚ್ಛಕ್ತಿಗೆ ಇನ್ನೊಂದು ದೊಡ್ಡ ಕೊರತೆಯಾಗಿರುವುದು ಏನೆಂದರೆ ನಮ್ಮ transformers. ಇವತ್ತು transformers ಏಕೆ ಸುಟ್ಟು ಹೋಗುತ್ತಿವೆ ಎಂದರೆ, ನಿರಂತರವಾಗಿ ಸಾರಾಸಗಟಾಗಿ ಅಕ್ರಮವಾಗಿ ಕೊರೆಯತಕ್ಕಂಥ ಕೊಳವೆ ಬಾವಿಗಳಿಂದಾಗಿ ನಮ್ಮ transformers ಸುಟ್ಟು ಹೋಗುತ್ತಿವೆ. ನಾವು ಇದರ ಬಗ್ಗೆ ಸಾಕಷ್ಟು BESCOM ನ MD ಹತ್ತಿರ ಎಲ್ಲರ ಹತ್ತಿರ ಮಾತನಾಡಿದ್ದಾಯಿತು. ಆದರೆ, transformers ಗಳನ್ನು repair ಮಾಡತಕ್ಕಂಥದ್ದು ಇವತ್ತಿನವರೆವಿಗೂ ಸಾಧ್ಯವಾಗಿಲ್ಲ. Transformers ಸುಟ್ಟು ಹೋಗಿವೆ ಹಾಕಿಕೊಡಿ ಎಂದು ಹೇಳಿದರೆ, ಇಲಾಖೆಯವರು ನಮಗೆ budget ಇಲ್ಲವೆಂದು ಹೇಳುತ್ತಾರೆ. ಒಬ್ಬ ಇಲಾಖೆಯ Executive Engineer ಒಬ್ಬ Superintendent Engineer ಬಾಯಲ್ಲಿ ಬರುವ ಮಾತೆ? MD ಗೆ ಕೇಳಿದರೆ ನಮ್ಮ ಹತ್ತಿರ 700 ಕೋಟಿ ರೂಪಾಯಿ ಇದೆ budget ಗೆ ತೊಂದರೆಯಿಲ್ಲವೆಂದು ಹೇಳುತ್ತಾರೆ. ಇವತ್ತಿನವರೆಗೆ ಕಳೆದ ಹದಿನೈದು ದಿವಸಗಳಿಂದ budget ಇಲ್ಲ ಎನ್ನುವ ಒಂದೇ ಕಾರಣಕ್ಕೋಸ್ಕರ ಒಂದೇ ಒಂದು transformer ಅನ್ನು ಕೊಟ್ಟಿಲ್ಲ. ಒಂದೊಂದು ಕ್ಷೇತ್ರದಲ್ಲಿ ಕನಿಷ್ಠವೆಂದರೂ 50 ರಿಂದ 100 transformers ಕೊಡಬೇಕಾಗಿದೆ. ಇವತ್ತು ಒಂದು transformer ಗೆ ಎಷ್ಟು ಮಹತ್ವ ಬಂದಿದೆ ಎಂದರೆ ಏನಾದರೂ ಮಾಡಿ ಒಂದು transformer ಅನ್ನು MLA ಕೊಡಿಸಿಬಿಟ್ಟರೆ, ನಾವು MLA ಆಗಿ ಏನೇ ಶಿಫಾರಸ್ಸು ಮಾಡಿದರೂ ಕೂಡ ಒಳಗೆ ದುಡ್ಡು ಕೊಟ್ಟರೆ ಆಗುವುದು. ದುಡ್ಡನ್ನು ಕೊಟ್ಟು ಶಿಫಾರಸ್ಸನ್ನು ಮಾಡಿಸುತ್ತಾರೆ. ಆಗ ಏನಾದರೂ transformers ಕೊಟ್ಟರೆ ಅದು ಊರಿಗೆ ಬಂದಾಗ ಗಾಡಿಯಲ್ಲಿ tractor ನಲ್ಲಿಟ್ಟುಕೊಂಡು ಮೆರವಣಿಗೆ ಮಾಡುತ್ತಾರೆ. ಅಂದರೆ ನಮ್ಮ ಕಣ್ಣು ಬಂತು ಬೆಳಕು ಬಂತು ವಿದ್ಯುಚ್ಛಕ್ತಿ ಕಾಣುತ್ತೇವೆ ಎನ್ನುವ ಒಂದು ನಂಬಿಕೆ ಬರುವ ರೀತಿಯಲ್ಲಿ ಜನರು ಮೆರವಣಿಗೆ ಮಾಡುತ್ತಾರೆ, ಇದು ಬಂದಿರುವುದು. ಈ ಮಟ್ಟಕ್ಕೆ ಹಳ್ಳಿಗಳ ಪರಿಸ್ಥಿತಿಯಾದರೆ ಯಾವ ರೀತಿಯಲ್ಲಿ ನೀರು ಕೊಡಿಸುವುದಕ್ಕೆ ಸಾಧ್ಯ? Transformerಗಳ ರಿಪೇರಿಯ ಬಗ್ಗೆ ನಮಗೆ ಹೇಳುವುದಕ್ಕೆ ಸಾಧ್ಯವಿಲ್ಲ. ನಾವು ಏನೇ ಸಲಹೆ ಕೊಟ್ಟರೂ ಕೂಡ ಪ್ರಯೋಜನವಾಗುತ್ತಿಲ್ಲ. ಸಭೆಗಳನ್ನು ಮಾಡುತ್ತಾರೆ ಅಲ್ಲಿ ಚರ್ಚೆಯಾಗುತ್ತದೆ, ಬರೀ ಚರ್ಚೆ ಕೇವಲ ಚರ್ಚೆಯಾಗಿ

ಉಳಿಯುತ್ತದೆಯೇ ವಿನಾ ಅದು ಕಾರ್ಯಗತಕ್ಕೆ ಬರುತ್ತಿಲ್ಲ ಅದು ಅನುಷ್ಠಾನವಾಗುವುದಕ್ಕೆ ಯಾವುದೇ ಗುರುತರವಾದಂಥ ಪ್ರಯತ್ನಗಳು ಆಗುತ್ತಿಲ್ಲ. ಇದಕ್ಕೆ ಮೂಲ ಕೊರತೆಯೆಂದರೆ ಹಣ. ನೀವು ಒದಗಿಸಿರುವ ಹಣದ ಪ್ರಮಾಣ ಬಹಳ ಕಡಿಮೆಯಿದೆ. ಇದು ಏನೇನೂ ಕೂಡ ಸಾಲದು. ಇವತ್ತು ನೀವು 301 ಕೋಟಿ ಎಂದು ಹೇಳಿದರೆ 123 ತಾಲ್ಲೂಕುಗಳಿಗೆ ಅಲ್ಲದೆ ಬೇರೆ ಬೇರೆಯದಕ್ಕೂ ಕೊಟ್ಟಿದ್ದೀರಿ. ಎಷ್ಟು ಕೋಟಿ ಕೊಟ್ಟಂಗೆ ಆಯಿತು? ಒಂದೊಂದು ತಾಲ್ಲೂಕಿಗೆ ಸರಾಸರಿ ಎಂದರೂ ಒಂದೂವರೆಯಿಂದ ಎರಡು ಕೋಟಿ ರೂಪಾಯಿ ಕೊಟ್ಟಂಗೆ ಆಯಿತು. ಇಷ್ಟು ರೂಪಾಯಿಗಳಲ್ಲಿ ನೀವು pipelines ಹೇಗೆ replace ಮಾಡುತ್ತೀರಿ? Borewell ಗಳನ್ನು ನೀವು ಎಲ್ಲಿ ಅಳವಡಿಸುತ್ತೀರಿ? Electricity connection ಗೋಸ್ಕರ ನೀವು ಸಾವಿರಾರು ರೂಪಾಯಿಗಳನ್ನು ಕಟ್ಟಬೇಕು, ಅದನ್ನು ಎಲ್ಲಿ ಕಟ್ಟುತ್ತೀರಿ? ಎಷ್ಟು ಹಳ್ಳಿಗಳಿಗೆ ನೀರು ಕೊಡುವುದಕ್ಕೆ ಸಾಧ್ಯವಾಗುತ್ತದೆ? ಎಷ್ಟು ಜನಗಳ ಸಮಸ್ಯೆ ಪರಿಹರಿಸಲಿಕ್ಕೆ ಸಾಧ್ಯವಾಗುತ್ತದೆ? ಸಮಸ್ಯಾತ್ಮಕವಾಗಿರತಕ್ಕಂಥ ಹಳ್ಳಿಗಳು ಇವತ್ತು ದಿನ ದಿನಕ್ಕೂ ಜಾಸ್ತಿಯಾಗುತ್ತಿವೆ. ಅದರ ಗಾತ್ರ ವಿಸ್ತಾರವಾಗುತ್ತದೆ, ಅದರ ಸಮಸ್ಯೆಗಳನ್ನು ಬಗೆಹರಿಸಬೇಕಾದಾಗ ನಾವು ಪರ್ಯಾಯವಾಗಿರುವ ಯೋಜನೆಗಳನ್ನು ಮಾಡಬೇಕಾಗುತ್ತದೆ. ಇವತ್ತು ಅಂತರ್ಜಲ ಕಡಿಮೆಯಾದಾಗ ನೀರು ಬರದೇ ಇರುವ ಸಂದರ್ಭದಲ್ಲಿ source ಎಲ್ಲೋ ಒಂದು ಕಡೆಗೆ ಇರುತ್ತದೆ. ಯಾವುದೋ ಕೆರೆಯ ಹತ್ತಿರ ಇರುತ್ತದೆ. ಅಲ್ಲಿಂದ ನೀವು ಹೊಸದಾಗಿ pipeline ಮುಖಾಂತರ ನೀರು ತರಬೇಕೆಂದರೆ ಕನಿಷ್ಠವೆಂದರೂ 5 ರಿಂದ 12 ಲಕ್ಷದವರೆಗೆ ಖರ್ಚು ಮಾಡಬೇಕಾಗುತ್ತದೆ. ನೀವು ಕೊಡತಕ್ಕಂಥ ಹಣ ಲೆಕ್ಕ ಹಾಕಿದರೆ ಬಹುಶಃ 20–30 ಹಳ್ಳಿಗಳಿಗೆ ಅಥವಾ 40–50 ಹಳ್ಳಿಗಳಿಗೆ ಕೊಡಬಹುದೇ ವಿನಾ ಎಲ್ಲಾ ಹಳ್ಳಿಗಳಿಗೂ ಕೊಡುವುದಕ್ಕೆ ಆಗುವುದಿಲ್ಲ. ಒಂದೊಂದು ಕ್ಷೇತ್ರದಲ್ಲಿ ಸುಮಾರು 400 ರಿಂದ 500 ಹಳ್ಳಿಗಳು ಬರುತ್ತವೆ. Hamlets ಬರುತ್ತವೆ. ಇಂಥ ಸಂದರ್ಭದಲ್ಲಿ ಶಾಸಕರಾದವರು ಹೇಗೆ ಕೆಲಸ ನಿರ್ವಹಿಸಬೇಕು ಎನ್ನುವುದನ್ನು ಮಾನ್ಯ ಉಪಾಧ್ಯಕ್ಷರೆ ತಾವು ಯೋಚಿಸಬೇಕಾಗುತ್ತದೆ. ದಯಮಾಡಿ ನಾನು ಹೇಳುತ್ತೇನೆ, ಸರಕಾರ ಯಾವುದೇ ರೀತಿಯಲ್ಲೂ ಕೂಡ ಇದಕ್ಕೆ ದುಡ್ಡಿಗೆ ನಮಗೆ ತೊಂದರೆಯಿಲ್ಲ ಎಂದು ಬಾಯಿ ಮಾತು ಹೇಳಿದರೆ ಪ್ರಯೋಜನವಾಗುವುದಿಲ್ಲ. ನೀವು ದುಡ್ಡು ಕೊಡದೇ ಅಲ್ಲಿ ಕಾಮಗಾರಿಗಳು ಪ್ರಾರಂಭವಾಗುವುದಿಲ್ಲ. ನೀವು ದುಡ್ಡು ಕೊಡಬೇಕಾದಾಗ ಅಲ್ಲಿ ಅಧಿಕಾರಿಗಳ ಮಟ್ಟದಲ್ಲಿಯೇ ಅದನ್ನು control ಇಟ್ಟು ಕೊಡುವ ಕೆಲಸ ಮಾಡಬೇಕು. ನಾನು ತಮ್ಮಲ್ಲಿ ಒಂದು ಮಾತು ಕೇಳುತ್ತೇನೆ. ಇಲ್ಲಿಯವರೆಗೆ

NCCF ನಲ್ಲಿ ಕಳೆದ ಮೂರು ವರ್ಷಗಳಿಂದ ಪ್ರವಾಹವಾದಂಥ ಸಂದರ್ಭದಲ್ಲಿ ನಿಮಗೆ ಹಣ ಬಂತು. ಕೇಂದ್ರ ಸರ್ಕಾರದಿಂದ ಬಂದ ಹಣವನ್ನು ಮಾತ್ರ ಖರ್ಚು ಮಾಡಿ ನೀವು ನಲವತ್ತೇಳು ಸಾವಿರ ಮನೆಗಳನ್ನು ಕಟ್ಟುವುದಕ್ಕೆ ಪ್ರಯತ್ನಪಟ್ಟಿದ್ದೀರಿಯೇ ವಿನಾ ಇದುವರೆವಿಗೆ ರಾಜ್ಯ ಸರ್ಕಾರದ ಬೊಕ್ಕಸದಿಂದ ಒಂದು ರೂಪಾಯಿನೂ ಕೊಡಲಿಲ್ಲ. ಕೇಂದ್ರ ಸರ್ಕಾರದಿಂದ ಮೂರು ವರ್ಷಗಳಿಂದ NCCF ನಲ್ಲಿ ಏನು ಬಂತು ಅಷ್ಟು ಮಾತ್ರ ಖರ್ಚು ಮಾಡಿ ಇವತ್ತು ಮನೆಗಳನ್ನು ಕಟ್ಟತಕ್ಕಂಥ ಕೆಲಸ ಮಾಡಿದ್ದೀರಿ. ಅದರಲ್ಲೂ ಕೂಡ 50% ಕೂಡ ಇನ್ನೂ occupy ಮಾಡಿಕೊಂಡಿಲ್ಲ. ಅದೊಂದು ಕಡೆ ಸಮಸ್ಯೆ. ಇನ್ನೊಂದು ಕಡೆ ನೀವು NCCF ನಿಂದ ಈ ಸಾರಿ ಏಕೆ ಹಣ ಪಡೆದಿಲ್ಲ? ನನಗೆ ಅರ್ಥವಾಗುವುದಿಲ್ಲ, ನಿಮಗೆ CRF ಅಷ್ಟೇನೆ. ಪ್ರಕೃತಿ ವಿಕೋಪ ನಿಧಿಯಡಿಯಲ್ಲಿ ಬರುವ 170 ಕೋಟಿ ಬಿಟ್ಟರೆ ನೀವು ಒಂದು ರೂಪಾಯಿ ಪಡೆಯಲಿಲ್ಲವಲ್ಲ ಏಕೆ? NCCF ನಲ್ಲಿ ನೀವು ಎಷ್ಟು ಬೇಕಾದರೂ ಹಣ ಪಡೆಯಬಹುದು. ಕಳೆದ ಮೂರು ವರ್ಷದಲ್ಲಿ ನೀವು ಸುಮಾರು 1,900 ಕೋಟಿ ರೂಪಾಯಿ ಹಣ ಬಂದಿದೆ. ಈ ವರ್ಷ ನೀವು ಏಕೆ ಪ್ರಯತ್ನ ಮಾಡಿಲ್ಲ? ಹಾಗಾದರೆ ನಿಮಗೆ ಬರಗಾಲಕ್ಕೆ ತುತ್ತಾಗಿರತಕ್ಕಂಥ ತಾಲ್ಲೂಕುಗಳ ಲೆಕ್ಕವೇ ಇಲ್ಲವೇ? ಪ್ರವಾಹ ಬಂದ ತಾಲ್ಲೂಕುಗಳಿಗೆ ಮಾತ್ರ ಗಮನ ಹರಿಸುತ್ತೀರಿ ಬೇರೆ ಕಡೆಗೆ ಗಮನ ಹರಿಸುವುದಿಲ್ಲ ಎನ್ನುವ ರೀತಿಯಲ್ಲಿ ನಾವು ಭಾವನೆ ಮಾಡಬೇಕೆ? ನೀವು NCCF ನಲ್ಲಿ ಹಣವನ್ನು ಪಡೆಯುವುದಕ್ಕೆ ಅವಕಾಶವಿತ್ತು. ಅದನ್ನೂ ಕೂಡ ಮಾಡಿಲ್ಲವೆಂದರೆ ನಾನು ಏನು ಹೇಳಬೇಕು? ನೀವು ಬರದ ಪರಿಸ್ಥಿತಿಯನ್ನು ನಿಭಾಯಿಸುವುದಕ್ಕೋಸ್ಕರ ಕೇಂದ್ರ ಸರ್ಕಾರಕ್ಕೆ ಹೋಗುತ್ತೀರಿ. ಎಷ್ಟು ಸಾರಿ ನಿಮ್ಮ ಮಂತ್ರಿಗಳು ಡೆಲ್ಲಿಗೆ ಹೋಗಿದ್ದಾರೆ? ಎಷ್ಟು ಸಾರಿ ಹೋಗಿ ಕೇಂದ್ರ ಸರ್ಕಾರದ ಮುಂದೆ ಮನವಿ ಕೊಟ್ಟು ಹಣ ಪಡೆಯುವ ಪ್ರಯತ್ನ ಮಾಡಿದ್ದಾರೆ? ಬಹಳಷ್ಟು ಜನ ಹೋಗಿ ಡೆಲ್ಲಿಯಲ್ಲಿ ಇರುತ್ತಾರೆ. ಆದರೆ, ಅವರು ಇರುವುದು ಎಲ್ಲಿ ಇರುತ್ತಾರೆಂದರೆ, ಅಡ್ವಾಣಿ ಮತ್ತು ಗಡ್ಕರಿ ಮನೆಯ ಹತ್ತಿರ ಇರುತ್ತಾರೆ ವಿನಾ ಇವತ್ತು ಬರ ಪರಿಸ್ಥಿತಿ ನಿಭಾಯಿಸಬೇಕು ಎನ್ನುವ ಕಾರಣಕ್ಕೆ ಯಾರೂ ಕೂಡ ಹೋಗಿ ಹಣ ಕೇಳಿದ್ದಂತೂ ಇಲ್ಲ.

ಇದನ್ನು ತಾವು ದಯಮಾಡಿ ಅರ್ಥಮಾಡಿಕೊಳ್ಳಬೇಕು. ನೀವು ಪದೇ ಪದೇ ಎಷ್ಟೇ ಹೇಳಿದರೂ ಕೂಡ ಇವತ್ತಿನ ದಿವಸ ಈ ಸಮಸ್ಯೆಗಳನ್ನು ಬಗೆಹರಿಸುವುದಕ್ಕೆ ಸಾಧ್ಯವಾಗದೆ ಇರತಕ್ಕಂಥ ಪರಿಸ್ಥಿತಿ ಆಗಿದೆ. ಈ ಸಂದರ್ಭದಲ್ಲಿ ನಾನು ಹೇಳುವುದೇನೆಂದರೆ, ಇವತ್ತಿನ ದಿವಸ ಜನರು ಗುಳೆ

ಹೋಗುತ್ತಿದ್ದಾರೆ. ಮತ್ತೆ ರೈತರ ಆತ್ಮಹತ್ಯೆಗಳು ನಿಯಂತ್ರಣ ಇಲ್ಲದಷ್ಟು ಆಗುತ್ತಿವೆ. ನನ್ನ ಕ್ಷೇತ್ರದಲ್ಲಿ ಈ ಬಾರಿ 11 ಜನ ಸತ್ತಿದ್ದಾರೆ. ಈ 11 ಜನರಿಗೆ ದುಡ್ಡು ಕೊಡಬೇಕಾದರೆ ಎಷ್ಟು ಕಷ್ಟ ಆಯಿತೆಂಬ ಬಗ್ಗೆ ಒಂದೇ ಒಂದು ಮಾತಿನಲ್ಲಿ ಹೇಳಬೇಕಾಗಿದೆ. ನಾನು ಹಿಂದೆ ಕೃಷಿ ಸಚಿವನಾಗಿದ್ದಂಥ ಸಂದರ್ಭದಲ್ಲಿ magisterial enquiry ಅನ್ನು ಮಾಡಿ ಒಂದು ಲಕ್ಷ ರೂಪಾಯಿ ಕೊಡಬೇಕೆಂದು 2003ನೇ ಇಸವಿಯಲ್ಲಿ ಮಾಡಲಾಗಿತ್ತು. ಇದನ್ನು ಮಾಡಿ 10 ವರ್ಷಗಳಾಗಿದ್ದರೂ ಇವತ್ತಿಗೂ ಕೂಡ ಒಂದು ಲಕ್ಷ ರೂಪಾಯಿಯನ್ನೇ ಕೊಡುತ್ತಿದ್ದೇವೆ. ಸತ್ತು ಎಷ್ಟೋ ದಿವಸಗಳಾದ ಮೇಲೆ ಈ ಹಣವನ್ನು ಕೊಡುತ್ತಿದ್ದೇವೆ. ಅಂದರೆ, ಆತನ ವರ್ಷದ ತಿಥಿ ಸಂದರ್ಭದಲ್ಲಿ ಈ ಹಣವನ್ನು ಕೊಡುತ್ತಿದ್ದೇವೆ. ಅಲ್ಲಿಯವರೆಗೆ ದುಡ್ಡು ಕೊಡುವುದಕ್ಕೆ ಹೋಗುವುದಿಲ್ಲ. ಏಕೆಂದರೆ, ಇವತ್ತಿನ ದಿವಸ magisterial enquiry ಆಗತಕ್ಕಂಥದ್ದೇ ಒಂದು ದೊಡ್ಡ ಕಷ್ಟವಾದ ಕೆಲಸವಾಗಿದೆ. ಆದ್ದರಿಂದ, ಇದನ್ನು ಸ್ವಲ್ಪ ಸರಳೀಕರಣ ಮಾಡಿ ಅಧಿಕಾರವನ್ನು ಸ್ಥಳೀಯವಾಗಿರುವ ತಾಲ್ಲೂಕು ಮಟ್ಟದ ಅಧಿಕಾರಿಗಳಿಗೆ ಕೊಡತಕ್ಕಂಥ ಕೆಲಸವನ್ನು ಮಾಡಿ ತತಕ್ಷಣ ಹಣ ಕೊಡಿಸುವಂಥ ಕೆಲಸವನ್ನು ಮಾಡಬೇಕೆಂದು ಹೇಳುವುದಕ್ಕೆ ಬಯಸುತ್ತೇನೆ. ಮತ್ತೆ ಇವತ್ತಿನ ದಿವಸ ಹಾವು ಕಡಿದು ಸಾಯುತ್ತಿರುವ ಸಂಖ್ಯೆ ಜಾಸ್ತಿಯಾಗಿದೆ. ನನ್ನ ಕ್ಷೇತ್ರದಲ್ಲಿ ಸುಮಾರು 13 ಜನ ಹಾವು ಕಡಿದು ಸತ್ತಿದ್ದಾರೆ. ಇವರಿಗೂ ಕೂಡ ಒಂದು ಲಕ್ಷ ರೂಪಾಯಿಯನ್ನು ಪ್ರಕೃತಿ ವಿಕೋಪ ನಿಧಿಯಿಂದ ಹಣ ಭರಿಸುವುದಕ್ಕೆ ಅವಕಾಶ ಇದ್ದು, ಈ ಹಣ ತಲುಪಬೇಕಾದರೂ ಕೂಡ ಬಹಳ ದಿನಗಳು, ವರ್ಷಗಳೇ ಆಗುತ್ತಿವೆ. ಇಂಥವುಗಳಿಗೆಲ್ಲ ಗಮನ ಕೊಡತಕ್ಕಂಥದು ಅವಶ್ಯಕತೆ ಇದೆ. ಆದರೆ, ಬಹುಶಃ ಇವತ್ತಿನ ದಿವಸ ಏನಾಗಿದೆ ಎಂದರೆ, 14 ಇಲಾಖೆಯ ಖಾತೆಗಳನ್ನು ಇಟ್ಟುಕೊಂಡಿರುವ ಮುಖ್ಯಮಂತ್ರಿಯವರನ್ನು ಬಹುಶಃ ನನ್ನ ಸರ್ವಿಸ್‌ನಲ್ಲಿ ನಾನು ನೋಡಲಿಲ್ಲ. ಒಟ್ಟು 11 ಜನ ಮಂತ್ರಿಗಳಿಗೆ ಈ ಇಲಾಖೆಗಳ ಖಾತೆಯನ್ನು ಹಂಚಬೇಕಾಗಿದೆ. ಈ ರೀತಿಯಾದ ಕಷ್ಟವನ್ನು ಕರ್ನಾಟಕದ ಜನರು ಇನ್ನು ಎಷ್ಟು ದಿವಸ ಸಹಿಸಕೊಳ್ಳಬೇಕೋ ನನಗಂತೂ ಅರ್ಥವಾಗುತ್ತಿಲ್ಲ. ಬಹುಶಃ ಎಲ್ಲೋ ಒಂದು ಕಡೆ ರಾಜಕೀಯವಾದಂಥ ಅಸ್ಥಿರತೆ ಮತ್ತು ಇಚ್ಛಾಶಕ್ತಿಯ ಕೊರತೆ ಕಾಣುತ್ತಿದೆ. ಆದ್ದರಿಂದ, ಇವತ್ತಿನ ದಿವಸ ಜನ ಪರಿತಪ್ಪಿಸತಕ್ಕಂಥ ಸಂದರ್ಭ ಒದಗಿದೆ ಎಂಬ ಮಾತನ್ನು ಹೇಳುವುದಕ್ಕೆ ಬಯಸುತ್ತೇನೆ. ಇವತ್ತಿನ ದಿವಸ ಆತ್ಯಹತ್ಯೆಗೆ ಶರಣಾಗುತ್ತಿರುವ ರೈತರ ಸಾವುಗಳನ್ನು ಕಡಿಮೆ ಮಾಡುವುದಕ್ಕಾಗಿ ಅವರಿಗೆ ಮೂಲಭೂತವಾಗಿ ಬೇಕಾಗಿರುವಂಥ ಕುಡಿಯುವ ನೀರು ಮತ್ತು ದನಗಳಿಗೆ ಮೇವನ್ನು ಒದಗಿಸುವ ಬಗ್ಗೆ ಸರ್ಕಾರ ಮುಂದೆ

ಒಂದು ಪ್ರಾಮಾಣಿಕವಾದಂಥ ಪ್ರಯತ್ನವನ್ನು ಮಾಡಬೇಕು. ಈ ಸುದ್ದಿ ಯಾವಾಗ ಬರುತ್ತದೆಯೋ ನನಗಂತೂ ಅರ್ಥವಾಗುತ್ತಿಲ್ಲ. ಬಹುಶಃ ಇದಕ್ಕೋಸ್ಕರ ನಿಖರವಾಗಿ ಒಬ್ಬ ಮಂತ್ರಿ ಇದ್ದರೆ ಒಳ್ಳೆಯದು. ಆದರೆ, ಇದ್ದರೇನು, ಬಿಟ್ಟರೇನು, ನಮಗೆ ಯಾರ ಮೇಲೂ ನಂಬಿಕೆ ಇಲ್ಲ. ಮಾನ್ಯ ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಇಲಾಖೆಯ ಸಚಿವರು ಇಲ್ಲಿದ್ದರು. ಆದರೆ, ಏನು ಮಾಡುವುದಕ್ಕೆ ಆಗುತ್ತದೆ? ಏಕೆಂದರೆ, ಉದ್ಯೋಗ ಖಾತ್ರಿ ಯೋಜನೆಯಲ್ಲಿ ಇವತ್ತಿನ ದಿವಸ ಏನನ್ನೂ ಸಹ ಸಾಧನೆ ಮಾಡುವುದಕ್ಕೆ ಆಗಿಲ್ಲ. ದೆಹಲಿಯಿಂದ ಯಾವುದೋ ಒಂದು ಪಂಚಾಯಿತಿಗೆ ಪ್ರೈಸ್ ತಂದಿದ್ದೇವೆಂದು ಪತ್ರಿಕೆಗಳಲ್ಲಿ ಪ್ರಚಾರ ಕೊಟ್ಟು ನಾವು ಬಹಳ ಮುಂದೆ ಇದ್ದೇವೆ ಎಂದು ಹೇಳಿಕೊಳ್ಳುತ್ತಿದ್ದಾರೆ. ಬಹುಶಃ ತಾವು ಇಲ್ಲಿಯವರೆಗೆ 1100 ಕೋಟಿ ರೂಪಾಯಿಗಳನ್ನು ಸದರಿ ಯೋಜನೆಯಲ್ಲಿ ಖರ್ಚು ಮಾಡುವುದಕ್ಕೆ ಆಗಿಲ್ಲ. 3850 ಕೋಟಿ ರೂಪಾಯಿಗಳಷ್ಟು ಖರ್ಚು ಮಾಡಬೇಕೆಂದು ಅಂದಾಜು ಇತ್ತು. ಜಾಬ್ ಕಾರ್ಡ್‌ನ ಅನುಗುಣವಾಗಿ ಲೆಕ್ಕ ಹಾಕುವುದಾದರೆ, ಸುಮಾರು 3850 ಕೋಟಿ ರೂಪಾಯಿ ಖರ್ಚಾಗಬೇಕಾಗಿತ್ತು. ಆದರೆ, ಇಲ್ಲಿಯವರೆಗೆ ತಾವು 1100 ಕೋಟಿ ರೂಪಾಯಿ ಮಾತ್ರ ಖರ್ಚು ಮಾಡಿದ್ದೀರಿ. ಇದು ನಿಜಕ್ಕೂ ನಾಚಿಕೆ ಪಡತಕ್ಕಂಥ ಸಂಗತಿ ಎಂದು ಹೇಳುವುದಕ್ಕೆ ಬಯಸುತ್ತೇನೆ. ಇವತ್ತಿನ ದಿವಸ ಅವರು ಅರೆಹೊಟ್ಟೆಯಲ್ಲಿ ಮಲಗುವುದಕ್ಕೆ ನೀವೇ ಕಾರಣಕರ್ತರಾಗಿದ್ದೀರಿ. ಹಾಗೆಯೇ ರೈತರ ಆತ್ಮಹತ್ಯೆಗೆ ಶರಣಾಗುವುದಕ್ಕೂ ಕೂಡ ನೀವೇ ಮೂಲ ಕಾರಣಕರ್ತರಾಗಿದ್ದೀರಿ. ಬಹುಶಃ ಈ ಒಂದು ಶಾಪ ನಿಮಗೆ ತಟ್ಟುವುದಕ್ಕಿಂತ ಮುಂಚಿತವಾಗಿ ಎಚ್ಚೆತ್ತುಕೊಳ್ಳಿ ಎಂಬ ಮಾತನ್ನು ಹೇಳುತ್ತಾ ನಾನು ಹೆಚ್ಚಿಗೆ ಮಾತನಾಡುವುದಕ್ಕೆ ಹೋಗದೇ ನನಗೆ ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಬಂಡೆಪ್ಪ ಖಾಶೆಂಪೂರ್ (ಬೀದರ್ ದಕ್ಷಿಣ) :- ಮಾನ್ಯ ಉಪಾಧ್ಯಕ್ಷರೆ, ಬರಗಾಲ ಮತ್ತು ನೀರಿನ ಸಮಸ್ಯೆ ಬಗ್ಗೆ ಚರ್ಚೆ ಮಾಡುವುದಕ್ಕೆ ನನಗೆ ಅವಕಾಶ ಕೊಟ್ಟಿದ್ದಕ್ಕಾಗಿ ನಾನು ತಮಗೆ ಧನ್ಯವಾದಗಳನ್ನರ್ಪಿಸುತ್ತೇನೆ. ಈಗಾಗಲೇ ವಿರೋಧ ಪಕ್ಷದ ನಾಯಕರು ಮತ್ತು ಉಪ ನಾಯಕರು ಈ ವಿಚಾರದ ಬಗ್ಗೆ ಬಹಳಷ್ಟು ಬೆಳಕನ್ನು ಚೆಲ್ಲಿದ್ದಾರೆ. ಆದರೆ, ಒಂದು ಬೇಜಾರಿನ ವಿಷಯ ಏನೆಂದರೆ, ನಾವುಗಳು ಚರ್ಚೆ ಮಾಡುವುದಕ್ಕೆ ಅಂಕಿ-ಸಂಖ್ಯೆಗಳನ್ನು ತೆಗೆದುಕೊಂಡು ಬಂದಿದ್ದೇವೆ. ಆದರೆ, ನಾವು ಹೇಳುವುದನ್ನು ಬರೆದುಕೊಳ್ಳುವುದಕ್ಕೆ ಮತ್ತು ಕೇಳುವುದಕ್ಕೆ ಯಾರೊಬ್ಬರೂ ಸಹ ಇಲ್ಲ. ಮಾನ್ಯ ಸುರೇಶ್ ಕುಮಾರ್‌ರವರು ಗಂಭೀರವಾದಂಥ ಎರಡು-ಮೂರು ಅಂಶಗಳನ್ನು

ಬರೆದುಕೊಂಡರೆ ಒಳ್ಳೆಯದಾಗುತ್ತದೆಂದು ನಾನು ಹೇಳುವುದಕ್ಕೆ ಬಯಸುತ್ತೇನೆ. ಏಕೆಂದರೆ, ಇದು ಬಹಳ ಸೀರಿಯಸ್ ಆದ ವಿಚಾರವಾಗಿದೆ. ಹಿಂದೆ ಬರಗಾಲದ ಬಗ್ಗೆ ಚರ್ಚೆ ಮಾಡುವಂಥ ಸಂದರ್ಭದಲ್ಲಿ ಮೂರು ಜನ ಮಂತ್ರಿಗಳು ಮನೆಗೆ ಹೋಗಿದ್ದಾರೆ. ಆದ್ದರಿಂದ, ನೀವು ಸೀರಿಯಸ್ ಆಗಿ ಇಲ್ಲದಿದ್ದರೆ ನೀವೂ ಕೂಡ ಮನೆಗೆ ಹೋಗುತ್ತೀರಿ ಎಂಬ ಮಾತನ್ನು ಹೇಳುವುದಕ್ಕೆ ಬಯಸುತ್ತೇನೆ. ಈ ವಿಷಯ ರಾಜ್ಯದ ಜನತೆಗೆ ಗೊತ್ತಾಗಲಿ ಎಂಬ ಉದ್ದೇಶದಿಂದ ಈ ಮಾತನ್ನು ಹೇಳುತ್ತಿದ್ದೇನೆ. ಈ ವಿಚಾರವನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ, ಇಷ್ಟೊಂದು ಗಂಭೀರವಾದಂಥ ಸಮಸ್ಯೆಗಳು ಇವತ್ತಿನ ದಿವಸ ಇದೆ. ನಿನ್ನೆ ದಿವಸ ನಾನು ಬೀದರ್‌ನಿಂದ ಬೆಂಗಳೂರಿನ ಏರ್‌ಪೋರ್ಟ್‌ಗೆ ಬೆಳಿಗ್ಗೆ ಬಂದಾಗ ಇಲ್ಲಿನ ಉಷ್ಣಾಂಶ 13 ಡಿಗ್ರಿ ಇತ್ತು. ಆದರೆ, ಬೀದರ್, ರಾಯಚೂರು, ಗುಲ್ಬರ್ಗಾ ಜಿಲ್ಲೆಯಲ್ಲಿ ಬೆಳಗಿನ ಜಾವ 30 ರಿಂದ 35 ಡಿಗ್ರಿ ಉಷ್ಣಾಂಶ ಕ್ರಾಸ್ ಆಗುತ್ತಿದೆ. ಅಂದರೆ, ಈ ರೀತಿಯಾದ ಒಂದು ಗಂಭೀರವಾದಂಥ ಪರಿಸ್ಥಿತಿ ಇಲ್ಲಿಗಿಂತ ಉತ್ತರ ಭಾಗದ ಕಡೆ ಜಾಸ್ತಿಯಾಗಿದೆ. ರಾಜ್ಯದಲ್ಲಿ 175 ತಾಲ್ಲೂಕುಗಳಿದ್ದು, ಇದರಲ್ಲಿ 123 ತಾಲ್ಲೂಕುಗಳು ಬರಗಾಲಕ್ಕೆ ತುತ್ತಾಗಿವೆ. ಮಾನ್ಯ ಜೀವರಾಜ್‌ರವರು ಬೆಳಿಗ್ಗೆ ಮಾತನಾಡುತ್ತಾ ಇಷ್ಟು ತಾಲ್ಲೂಕುಗಳಲ್ಲದೆ ನಮ್ಮ ಕಡೆಯೂ ಕೂಡ ನೀರಿಗೆ ತೊಂದರೆಯಾಗಿದೆ ಎಂದು ಹೇಳಿದರು. ಅಂದರೆ, ಇಡೀ ರಾಜ್ಯ ನೀರು ಮತ್ತು ಬೇರೆ ಬೇರೆ ರೀತಿಯಲ್ಲಿ ಸಮಸ್ಯೆಯಿಂದ ಕೂಡಿದೆ. ಆದ್ದರಿಂದ ಸರ್ಕಾರ ಬಹಳ ಗಂಭೀರವಾದಂಥ ಚಿಂತನೆಯನ್ನು ಮಾಡಬೇಕಾಗಿದೆ. ನಾನು ಎರಡನೇ ಬಾರಿಗೆ ಎಂಎಲ್‌ಎ ಆಗಿ ಆಯ್ಕೆಯಾಗಿ ಬಂದಿದ್ದೇನೆ. ಇಷ್ಟು ದಿವಸಗಳಿಂದ ನಾವು ಕೂಡ ನೋಡಿಕೊಂಡು ಬಂದಿದ್ದೇವೆ. ಆದರೆ, ನೀರಿಗೋಸ್ಕರ ದುಡ್ಡಿಲ್ಲ ಎಂದು ಮೊದಲನೇ ಬಾರಿಗೆ ಹೇಳಿದಂಥ ಸರ್ಕಾರವೆಂದು ಮಾನ್ಯ ಸುರೇಶ್ ಕುಮಾರ್‌ರವರ ಗಮನಕ್ಕೆ ತರುವುದಕ್ಕೆ ಬಯಸುತ್ತೇನೆ. ನೀರಿಗೆ ದುಡ್ಡಿಲ್ಲ ಎಂದು ಹಿಂದಿನ ಯಾವುದೇ ಸರ್ಕಾರಗಳು ಹೇಳಿರುವುದನ್ನು ನಾನು ನೋಡಿಲ್ಲ. It is shame on the Government ಈ ಮಾತನ್ನು ನಾನು ಏತಕ್ಕೆ ಹೇಳುತ್ತಿದ್ದೇನೆಂದರೆ, ನಮ್ಮ ಮನೆಗಳಿಗೆ ಒಂದು ಬೋರ್‌ವೆಲ್ ಹಾಕಿ ಕೊಡಿ ಎಂದು ನಾವು ಕೇಳುತ್ತಿಲ್ಲ. ಅಥವಾ ಇಂಥ ಕಡೆ ಮಾತ್ರ ಹಾಕಿ ಎಂದು ನಾವು ಶಿಫಾರಸ್ಸು ಮಾಡುತ್ತಿಲ್ಲ. ಶಾಸಕರು ಅಥವಾ ಜಿಲ್ಲಾಪಂಚಾಯತ್‌ನ ಸದಸ್ಯರ ಮಾತುಗಳನ್ನು ಕೇಳದೆ ಎಲ್ಲಿ ಬೋರ್‌ವೆಲ್‌ನ ಅವಶ್ಯಕತೆ ಇರುತ್ತದೆಯೋ ಅಂಥ ಕಡೆ ಬೋರ್‌ವೆಲ್ ಕೊರೆಸಿ ಎಂದು ಕೆಡಿಪಿ ಸಭೆಯಲ್ಲಿ ನಮ್ಮ ಅಧಿಕಾರಿಗೆ ಸ್ಪಷ್ಟವಾಗಿ ಹೇಳಿದ್ದೇವೆ. ಇಂಥ ಸಂದರ್ಭದಲ್ಲಿಯೂ ಕೂಡ ನೀವು ನೀರಿಗೆ ಆದ್ಯತೆ ಕೊಡದೆ ಇದ್ದಾಗ ಇವತ್ತಿನ

ದಿವಸ ಜನತೆಯನ್ನು ಹೇಗೆ ಫೇಸ್ ಮಾಡಬಹುದಾಗಿದೆ ಎಂಬ ಬಗ್ಗೆ ತಾವು ಯೋಚನೆ ಮಾಡಬೇಕಾಗಿದೆ. ಸೆಪ್ಟೆಂಬರ್ ತಿಂಗಳಿಂದ ಇವತ್ತಿನವರೆಗೆ ಒಂದು ಹನಿ ಮಳೆ ಬಂದಿಲ್ಲ. ಮುಂದಿನ ಈ ಎರಡು ತಿಂಗಳಲ್ಲಿ ಮಳೆ ಬೀಳುತ್ತದೆಂಬುದೂ ಸಹ ಗೊತ್ತಿಲ್ಲ. ಕಳೆದ ವರ್ಷ ಬೇಸಿಗೆ ಕಾಲದಲ್ಲಿ ಅಕಾಲಿಕ ಮಳೆ ಬಂತು. ಇದು ಹೇಳದೆ ಕೇಳದೆ ಬಂದು ಬಿಡುತ್ತದೆ. ಈ ರೀತಿಯಾಗಿ ಎರಡು ಮಳೆ ಬಂದು ಸ್ವಲ್ಪ ಮಟ್ಟಿಗೆ ಬೆಳೆಗೆ ಅನುಕೂಲವಾಗಿತ್ತು. ಈ ವರ್ಷ ಅದೂ ಕೂಡ ನಮ್ಮ ಕಣ್ಣಿಗೆ ಕಾಣಿಸುತ್ತಿಲ್ಲ. ಕುಡಿಯುವ ನೀರಿಗೋಸ್ಕರ ನಾವು ಪ್ರತಿ ದಿನ ಸುಮಾರು 50 ದೂರವಾಣಿಗಳನ್ನು ಕ್ಷೇತ್ರದ ಜನರದು ಅಟೆಂಡ್ ಮಾಡುತ್ತಿದ್ದೇನೆ. ಇಂಥ ಒಂದು ಪರಿಸ್ಥಿತಿ ಇರುವಾಗ ಅಧಿಕಾರಿಗಳು war-footing ನಲ್ಲಿ ಇದರ ಕೆಲಸ ಮಾಡಬೇಕಾಗಿದೆ. ಹಿಂದೆ ಟಾಸ್ಕ್‌ಫೋರ್ಸ್ ಮಾಡಲಾಗಿತ್ತು. ಮಾನ್ಯ ಜಯಚಂದ್ರರವರು ಮಾತನಾಡುವಂತ ಸಂದರ್ಭದಲ್ಲಿ ಇದಕ್ಕಾಗಿ 6 ಕೋಟಿ ರೂಪಾಯಿ ಇಡಲಾಗಿತ್ತು ಎಂದು ಹೇಳಿದ್ದರು. ಆದರೆ, ಇವತ್ತಿನ ಸರ್ಕಾರದ ಪರಿಸ್ಥಿತಿ ನೋಡಿಕೊಂಡು ಅದಕ್ಕಾಗಿ ಇಟ್ಟಿರುವ ಹಣವನ್ನು ಕಡಿಮೆ ಮಾಡಿಕೊಂಡು ಬರಲಾಗಿದೆ. 1.5 ಕೋಟಿ ರೂಪಾಯಿಗಳನ್ನು ಟಾಸ್ಕ್‌ಫೋರ್ಸ್‌ನಿಂದ ಡಿ.ಸಿ.ಗೆ ಕಳುಹಿಸಿಕೊಟ್ಟಿದ್ದೇವೆ. ಆದರೆ, ಬೋರ್‌ವೆಲ್ ಕೊರೆದಿರುವುದಕ್ಕೆ ಇವತ್ತಿನವರೆಗೆ ನನ್ನ ಕ್ಷೇತ್ರಕ್ಕೆ ಒಂದು ಸಾರಿ 10 ಲಕ್ಷ ಇನ್ನೊಂದು ಸಾರಿ 8 ಲಕ್ಷ ರೂಪಾಯಿ ಮಾತ್ರ ಬಂದಿದೆ. ಸಿ.ಆರ್.ಎಫ್.ನಿಂದ ಪೈಪ್ ಲೈನ್‌ಗೆ ದುಡ್ಡು ಕೊಡುತ್ತೇವೆಂದು ಡಿ.ಸಿ.ಯವರು ಹೇಳಿದ್ದಾರೆ. ಅಂದರೆ, ನಾವು ಕೊರೆಸುವ ಬೋರ್‌ವೆಲ್‌ಗೆ ಪೈಪ್‌ಲೈನ್‌ಗೆ ಮಾತ್ರ ದುಡ್ಡು ಕೊಡುತ್ತಿದ್ದಾರೆ. ಆದರೆ, ಮೋಟರ್‌ಗೆ ಹಣ ಕೊಡುತ್ತಿಲ್ಲ. ಮೋಟರ್‌ಗೆ ಬೇಕಾಗಿರುವ ಹಣವನ್ನು 13th Finance ನಿಂದ ಪಂಚಾಯಿತಿ ಮೂಲಕ ತೆಗೆದುಕೊಳ್ಳಿ ಎಂದು ಹೇಳುತ್ತಿದ್ದಾರೆ. ಈ ಒಂದು ಕಾರಣದಿಂದ ಅಲ್ಲಿ ಒಂದೊಂದು ವರ್ಷವಾದರೂ ಇನ್ನೂ ಮೋಟರ್ ಕೂರಿಸುವುದಕ್ಕೆ ಆಗಿಲ್ಲ. ಆದ್ದರಿಂದ, ಈ ವಿಚಾರದ ಬಗ್ಗೆ ಬಹಳ ಗಂಭೀರವಾಗಿ ಚರ್ಚೆ ಮಾಡಬೇಕಾಗಿದೆ. ಉದಾಹರಣೆಗೆ ನನ್ನ ಕ್ಷೇತ್ರದ ಬಗ್ಗೆ ಹೇಳಬೇಕಾದರೆ, ಸುಮಾರು 1.21 ಕೋಟಿ ರೂಪಾಯಿಗಳನ್ನು ನಾವು ಟಾಸ್ಕ್‌ಫೋರ್ಸ್‌ನಿಂದ ಮಾಡಿ ಕಳುಹಿಸಿಕೊಟ್ಟಿದ್ದೇವೆ. ಇದರಲ್ಲಿ 52 ಲಕ್ಷ ರೂಪಾಯಿಗಳನ್ನು ಮಾತ್ರ ಪೈಪ್ ಲೈನ್‌ಗೆ ಉಪಯೋಗ ಮಾಡಲಾಗಿದೆ. ಉಳಿದ 10 ಲಕ್ಷ ರೂಪಾಯಿ ಆವತ್ತಿನ ದಿನಾಂಕದಲ್ಲಿ ಬಂದಿದೆ. ಶಾಸಕರ ನಿಧಿಯಿಂದ ನಾನು ಬೋರ್‌ವೆಲ್ ಕೊರೆಯುವುದಕ್ಕೆ 25 ಲಕ್ಷ ರೂಪಾಯಿ ಕೊಟ್ಟಿದ್ದೇನೆ. ಇಂಥ ಒಂದು ಪರಿಸ್ಥಿತಿಯನ್ನು ಸರ್ಕಾರ ತಂದಿದೆ ಎಂದರೆ, ಎಲ್ಲೋ ಒಂದು ಕಡೆ ಕುಡಿಯುವ ನೀರಿಗಿಂಥ ಹೆಚ್ಚಿನ ಆದ್ಯತೆ ಈ ಸರ್ಕಾರಕ್ಕೆ ಯಾವುದು ಇದೆ

ಎಂಬ ಬಗ್ಗೆ ಸರ್ಕಾರ ಸ್ಪಷ್ಟನೆ ಕೊಡಬೇಕಾಗುತ್ತದೆ. ಏತಕ್ಕೆಂದರೆ, ಇವತ್ತಿನ ದಿವಸ ನೀರು ಎಲ್ಲದಕ್ಕಿಂತ ಬಹಳ ಮುಖ್ಯವಾದಂಥದಾಗಿದೆ. ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡುವಾಗ ಬೋರ್‌ವೆಲ್ ಡ್ರಿಲ್ಲಿಂಗ್ ಬಗ್ಗೆ ಸ್ಪಷ್ಟವಾಗಿ ಹೇಳಬೇಕು. ಮೊನ್ನೆ ಸಾಯಂಕಾಲ ನಮ್ಮ ಬೀದರ್ ಜಿಲ್ಲೆಯ in charge Minister ಆಗಿ ರೇವುನಾಯಕ್ ಬೆಳಮಗಿಯವರು ಇದ್ದಾರೆ. ಆದರೆ ಅವರು ಈಗ ಇಲ್ಲ. ಅವರೇ ಒಂದು ಹೇಳಿಕೆಯನ್ನು ರೆಸಾರ್ಟ್‌ನಲ್ಲಿದ್ದೇನೆಂದು ಕೊಟ್ಟಿದ್ದಾರೆ. ಏಕೆ ತಲೆ ಕೆಡಿಸಿಕೊಳ್ಳುತ್ತೀರೆಂದು ಹೇಳಿರುತ್ತಾರೆ. ಹಾಗಾಗಿ ಮೊನ್ನೆ ಸಾಯಂಕಾಲ ಭಾನುವಾರ ಇದ್ದರೂ ಬೇರೆ ಒಂದು ಕ್ರಿಕೆಟ್ ಕಾರ್ಯಕ್ರಮಕ್ಕೆ ಅವರು ಬಂದಿದ್ದರು. ನಾವು ಇದೇ ಒಂದು ಸಮಯ ಎಂದು ಅವರಿಗೆ ಡಿ.ಸಿ. ಆಫೀಸಿಗೆ ಹೋಗಿ ಮೀಟಿಂಗ್ ಮಾಡುವುದಕ್ಕೂ ಸಮಯ ಸಿಗಲಿಲ್ಲ. ಅಲ್ಲಿಯೇ ಸ್ಟೇಡಿಯಂನಲ್ಲಿ ಒಂದು ಮೀಟಿಂಗ್ ಮಾಡಬೇಕು. ಏಕೆಂದರೆ ನೀರಿನ ಆದ್ಯತೆ ಬಹಳ ಇದೆ, ನೀವು ಇಲ್ಲಿಯೇ ಕುಳಿತುಕೊಳ್ಳಿ ಎಂದು ಅವರನ್ನು ಕೂಡಿಸಿ ಒಂದು ಸಭೆಯನ್ನು ಮಾಡಿದೆವು. ಇದು ಯಾವುದೂ ಹಿಂದಿನ information ಅಲ್ಲ. ಅಂದು ನಾವು ಮಾತನಾಡುವಾಗ ಈ 18 ಲಕ್ಷ ರೂ.ಗಳು ಬಿಟ್ಟು ಬೇರೆ ಯಾವ ಹಣವು ಬಂದಿರಲಿಲ್ಲ. ಹಾಗಾಗಿ ನಾವು ಇನ್‌ಚಾರ್ಜ್ ಮಂತ್ರಿಗಳಿಗೆ ಹೇಳಿದೆವು. ಎಲ್ಲಾ ಶಾಸಕರು ನೀವು ಕುಡಿಯುವ ನೀರಿನ ಸಲುವಾಗಿ ದುಡ್ಡು ಬಿಡುಗಡೆ ಮಾಡಿದ್ದೇನೆಂದು ಹೇಳಿದರೆ ಮಾತ್ರ ಬಿಡುತ್ತೇವೆ. ಇಲ್ಲದಿದ್ದರೆ ಬಿಡುವುದಿಲ್ಲವೆಂದು ಎಲ್ಲಾ ಬೀದರ್ ಜಿಲ್ಲೆಯ ಶಾಸಕರು ಕುಳಿತುಕೊಂಡೆವು. ಆಗ ಅವರು ಏನು ಹೇಳಿದರೆಂದರೆ ಹತ್ತು ಬೋರ್‌ವೆಲ್‌ಗಳನ್ನು ಹಾಕಿ ಎಂದು ಹೇಳಿದರು. ಇದು ಯಾವ ಲೆಕ್ಕಕ್ಕೆ ಇದೆ. ಒಂದೊಂದು ಕ್ಷೇತ್ರದಲ್ಲಿ 50 ಲಕ್ಷ ರೂ.ಗಳಿಗೆ ಕೆಲಸ ಮಾಡುವುದಕ್ಕೆ ಅನುಮತಿ ಕೊಡಿ ಎಂದು ಹೇಳಿದಾಗ oral ಆಗಿ ಅನುಮತಿ ಕೊಟ್ಟು ಬಂದರು. ಅದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಎಷ್ಟರಮಟ್ಟಿಗೆ ಸ್ಪಂದಿಸುತ್ತಾರೆ ಅದು ನಮಗೆ ಗೊತ್ತಿಲ್ಲ. ಅಂದರೆ ಎಲ್ಲೋ ಒಂದು ಕಡೆ ಸರ್ಕಾರ ಈ ನೀರಿನ ವಿಷಯದಲ್ಲಿ ಸ್ಪಂದಿಸುವುದರ ಬಗ್ಗೆ ತಮಗೆ ಹೇಳುತ್ತೇನೆ. ಸಿ.ಆರ್.ಎಫ್.ನಲ್ಲಿ ಡಿ.ಸಿ.ಯವರ ಹತ್ತಿರ ಒಂದೂವರೆ–ಎರಡು ಕೋಟಿ ರೂ.ಗಳು ಇದೆ ಎಂದು ಇವತ್ತಿಗೂ ಹೇಳುತ್ತಾರೆ. ಆದರೆ ಅವರು ಬೋರ್‌ವೆಲ್ ಕೊರೆಯುವುದಕ್ಕೆ ದುಡ್ಡು ಕೊಡುವುದಿಲ್ಲ. ಪೈಪ್‌ಲೈನ್ ಮಾಡುವುದಕ್ಕೆ ದುಡ್ಡು ಕೊಡುತ್ತಾರೆ. ಹಾಗಾಗಿ ಇವತ್ತು ಒಂದೊಂದು ಕ್ಷೇತ್ರಕ್ಕೆ ಅರ್ಜೆಂಟಾಗಿ ಮಿನಿಮಮ್ ಒಂದು ಕೋಟಿ ರೂ.ಗಳನ್ನು ಅದು ಬೋರ್‌ವೆಲ್ ಮತ್ತು ಮೋಟಾರಿಗೆ ಕೊಡಬೇಕು. ಬಾಕಿ ಇರುವ ಪೈಪ್‌ಲೈನ್‌ನ್ನು ಡಿ.ಸಿ. ಯವರು ಮಾಡಿಕೊಳ್ಳುತ್ತಾರೆ. ನೀವು ಉತ್ತರ ಕೊಡುವಾಗ ಮಿನಿಮಮ್ 10

ಕೋಟಿ ರೂ.ಗಳಲ್ಲಿ ಒಂದು ಕೋಟಿ ರೂ.ಗಳನ್ನಾದರೂ ಕೊಡಬೇಕು. ಇನ್ನು ಮೇವಿನ ವಿಷಯಕ್ಕೆ ಬಂದರೆ, ಇಡೀ ಕರ್ನಾಟಕದಲ್ಲಿ ನಗೆಪಾಟಲು ಆಗಿದೆ. 34 ಗೋಶಾಲೆಗಳನ್ನು ತೆಗೆದಿದ್ದೇವೆಂದು ಹೇಳುತ್ತಾರೆ, ಆದರೆ ಅವುಗಳು ಎಲ್ಲೆಲ್ಲಿ ಇವೆ ಎಂದು ಗೊತ್ತಿಲ್ಲ. ನಮ್ಮ ಕಡೆ ಒಂದು fodder bank ಇಲ್ಲ, ಗೋಶಾಲೆ ಇಲ್ಲ. ಸರ್ಕಾರದಿಂದ ಎಲ್ಲಾ ಮಂತ್ರಿಗಳು ಗೋರಕ್ಷಣೆ ಮಾಡುತ್ತೇವೆಂದು ಹೇಳುತ್ತೀರಿ. ಎಲ್ಲಿಂದ ಗೋರಕ್ಷಣೆ ಆಗುತ್ತದೆ? ಪತ್ರಿಕೆಯಲ್ಲಿ ನೋಡಿ ಕಡಿಮೆ ರೇಟಿಗೆ ಜನರು ದನಕರುಗಳನ್ನು ಮಾರಿಕೊಂಡು ಹೋಗುತ್ತಿದ್ದಾರೆ. ಏಕೆಂದರೆ ಅವುಗಳಿಗೆ ಮೇವು ಹಾಕುವುದಕ್ಕೆ ದಿಕ್ಕು ಇಲ್ಲ. ನೀರು ಕುಡಿಸುವುದಕ್ಕೆ ಆಗುತ್ತಿಲ್ಲ. ಇಂತಹ ಒಂದು ಪರಿಸ್ಥಿತಿ ಇರುವಾಗ ಗೋರಕ್ಷಣೆ ಬಗ್ಗೆ ಮಾತನಾಡುತ್ತೀರಿ. ಇವತ್ತು ನಿಮಗೆ fodder bankನ ಬಗ್ಗೆ ಹೇಳುವುದಾದರೆ ಅವತ್ತು ಕೂಡ ಮಂತ್ರಿಗಳು ಹೇಳಿದರು. ನಮ್ಮಲ್ಲಿ ಎಲ್ಲಾ ಕಡೆ ಮೇವು ಫುಲ್ ಇದೆ ಎಂದು ಮಂತ್ರಿಗಳು ಹೇಳಿದಾಗ ಎಲ್ಲಿ ಮೇವು ಇದೆ ಯಾವ ಬಣವಿಯಲ್ಲಿ ಇದೆ, ಯಾವ ಕೊಟ್ಟಿಗೆಯಲ್ಲಿದೆ ಅಲ್ಲಿಗೆ ಕರೆದುಕೊಂಡು ಹೋಗಿ ಎಂದು ಹೇಳಿದೆ. ಅವರು ಎರಡು ಲಕ್ಷ ಟನ್‌ಗಿಂತ ಹೆಚ್ಚು ಮೇವು ಇದೆ ಎಂದು ಹೇಳಿದರು. ಮೊನ್ನೆ ಸಾಯಂಕಾಲ ಬೀದರ್‌ನಲ್ಲಿ ಒಂದು ಮೀಟಿಂಗ್ ಮಾಡುವಾಗ ಇನ್ನು ಎರಡು-ಮೂರು ತಿಂಗಳು ಮೇವು ನಮ್ಮಲ್ಲಿ ಫುಲ್ ಇದೆ ಎಂದು ಅವರ ಅಧಿಕಾರಿಗಳು ಕೂಡ ಅದನ್ನೇ ಹೇಳಿದರು. ನಾನು ಎಲ್ಲಿ ಮೇವು ಇದೆ, ಎಷ್ಟು ಇದೆ ಎಂದು ಕೇಳಿದಾಗ ನಮ್ಮಲ್ಲಿ 35000 ಟನ್ ಇದೆ ಎಂದು ಹೇಳಿದರು. ಅಂದರೆ ಇವತ್ತು ರೈತರು ಒಂದು ಬೆಳೆ ಬೆಳೆಯುತ್ತಾರೆ, ಆ ಬೆಳೆ ಬೆಳೆದ ನಂತರ ಆ ಮೇವು ಇವರಿಗೆ ಬರುತ್ತದೆ ಎನ್ನುವ ರೀತಿ ಹೇಳುತ್ತಾರೆ, ಆದರೆ ಅದು ಹಾಗೆ ಇಲ್ಲ. ಇವತ್ತು ನಾವು ಬೇಸಿಕ್ ಆಗಿ ಒಂದು ಲೆಕ್ಕವನ್ನು ಹಾಕೋಣ. ಹಳ್ಳಿಯಲ್ಲಿ ಇವತ್ತು ಕೂಲಿ ಕಾರ್ಮಿಕರು ಬಡವರು ಇದ್ದಾರೆ. ಅವರ ಹತ್ತಿರ ಜಮೀನು ಇಲ್ಲ, ಏನೂ ಇಲ್ಲ. ಕಳೆದ ವರ್ಷದ ಸೆಪ್ಟೆಂಬರ್ ತಿಂಗಳಿನಿಂದ ಇವತ್ತಿನವರೆಗೂ ಒಂದು ಹನಿ ನೀರು ಇಲ್ಲ. ಅವರು ಮೇವು ಎಲ್ಲಿಂದ ತರುತ್ತಾರೆನ್ನುವುದರ ಬಗ್ಗೆ ಮಂತ್ರಿಗಳಾದವರು ಲೆಕ್ಕ ಹಾಕಿದ್ದಾರಾ? ಒಬ್ಬ ಸಣ್ಣ ಹುಡುಗನಿಗೆ ಇವತ್ತು ಮೇವು ಎಲ್ಲಿಂದ ತರಬೇಕೆಂದು ಗೊತ್ತಾಗುತ್ತದೆ. ಅಂತಹ ಪರಿಸ್ಥಿತಿಯಲ್ಲಿ ಇವತ್ತು ರಾಜ್ಯದಲ್ಲಿ ಎಲ್ಲೂ ಕೂಡ fodder bank ಗಳನ್ನು ಹೆಚ್ಚಿನ ಪ್ರಮಾಣದಲ್ಲಿ ಓಪನ್ ಮಾಡಲಿಲ್ಲ. ನಾನು ಎಷ್ಟೋ ಅಧಿಕಾರಿಗಳಿಗೆ ಹೇಳಿದ್ದೇನೆ. ತಾವು ನೇರವಾಗಿ ಹಳ್ಳಿಯ ಕಡೆಗೆ ಹೋಗಿ ಅಲ್ಲಿ ಗ್ರಾಮ ಸಭೆ ನಡೆಸಿ ಸರ್ಕಾರಿ ಸವಲತ್ತುಗಳ ಮೇವು ನಾವು ಕೊಡುತ್ತೇವೆಂದರೆ ಯಾರು ಬೇಡವೆಂದು ಹೇಳುತ್ತಾರೆಂದು ನಾನು ಕೇಳಿದ್ದೇನೆ. ಕೂಲಿ ಕಾರ್ಮಿಕರಿಗೆ ಜಮೀನು ಇಲ್ಲ, ಗೋಮಾಳ

ಜಮೀನಿನಲ್ಲಿ ಇವತ್ತು ಮೇವಿಲ್ಲ, ಅವರು ಮೇವು ಎಲ್ಲಿಂದ ತರಬೇಕು? ಹಾಗಾಗಿ ಅವರಿಗೆ ಯೋಚನೆ ಮಾಡುವುದಕ್ಕೆ ಸಮಯ ಇಲ್ಲ. ಕೆಲವೊಬ್ಬರು ದೆಹಲಿಯಲ್ಲಿ busy ಆಗಿದ್ದರೆ, ಕೆಲವೊಬ್ಬರು ರೆಸಾರ್ಟ್‌ನಲ್ಲಿವ busy ಆಗಿದ್ದಾರೆ ಮತ್ತು ಅಭಿನಂದನೆ ಮಾಡಿಕೊಳ್ಳುವುದರಲ್ಲಿ busy ಆಗಿದ್ದಾರೆ. ಈ ರಾಜ್ಯದ ಬಡಜನತೆಯ ಬಗ್ಗೆ ಯಾರು ಚಿಂತನೆ ಮಾಡಬೇಕು? ಈ ಸರ್ಕಾರ ಎಲ್ಲಾ ಕೆಲಸಗಳಲ್ಲಿ ವಿಫಲವಾಗುತ್ತದೆಂದು ನಾನು ಹೇಳುವುದಕ್ಕೆ ಬಯಸುತ್ತೇನೆ. ಬರಗಾಲದಲ್ಲಿ ನೀರು, ಮೇವು ಮತ್ತು ಕೂಲಿ ಈ ಮೂರು ಸಮಸ್ಯೆಗಳು ಇರುವುದು. ಇವತ್ತು ಕೂಲಿ ಕಾರ್ಮಿಕರ ಬಗ್ಗೆ ನಾವು ಲೆಕ್ಕ ಹಾಕಿದರೆ ಇವತ್ತು NREG ಯಲ್ಲಿ ಕೂಲಿ ಕೊಡುತ್ತೇವೆಂದು ಹೇಳುತ್ತೇವೆ. ಇವತ್ತು ನಾವು ಗ್ರಾಮ ಪಂಚಾಯಿತಿಗೆ ಹೋಗಿ ಆಕ್ಷನ್ ಪ್ಲಾನ್ ನೋಡಿಕೊಂಡು ಮಾಡಿದರೆ ಎಲ್ಲಿಯೂ ಕೆಲಸ ನಡೆಯುತ್ತಿಲ್ಲ. ಎರಡು ತಿಂಗಳು ಮೊದಲು ಒತ್ತಾಯ ಮಾಡಿದಾಗ ಎಲ್ಲೋ ಸ್ವಲ್ಪ ಕೆಲಸ ನಡೆಯಿತು. ಈವಾಗ ಪೂರ್ಣ ಫೇಲಾಗಿದೆ. ಬೇರೆ ಜಿಲ್ಲೆಗಳಲ್ಲಿ ಹೇಗೆ ಇದೆ ನಮಗೆ ಗೊತ್ತಿಲ್ಲ. ಮೊನ್ನೆ ಸಾಯಂಕಾಲ ಇನ್‌ಚಾರ್ಜ್ ಮಂತ್ರಿಗಳನ್ನು ತೆಗೆದುಕೊಂಡು ಒಂದು ಕೆ.ಡಿ.ಪಿ. ಸಭೆಯನ್ನು ಮಾಡಿದ್ದೇವೆ. ಎಲ್ಲಿಯೂ ಕೆಲಸ ನಡೆಯುತ್ತಿಲ್ಲ. ಕಾರ್ಮಿಕರ ಬಗ್ಗೆ ಹೇಗೆ ಲೆಕ್ಕ ಹಾಕುವುದು ಹೇಳಿ. ಅದು ದುಡ್ಡಿನಿಂದ ಅಲ್ಲ. ನರೇಗಾ ಕೇಂದ್ರ ಸರ್ಕಾರದ ಹಣ. ಈಗ ನಿಮಗೆ ಅದನ್ನು ಸರಿಯಾಗಿ ಉಪಯೋಗ ಮಾಡಿಕೊಳ್ಳುವುದಕ್ಕಾಗುತ್ತಿಲ್ಲ. ಅದರ ಸಂಗತಿ ಹೀಗೆ ಇದೆ. ಇವತ್ತು ಎಲ್ಲೋ ಒಂದು ಕಡೆ ಕನಿಷ್ಠ 100 ದಿವಸವಾದರೂ ಕೂಲಿ ಕೆಲಸ ಕೊಡಬೇಕೆಂದು ಇದೆ. ನಾವು ಎಲ್ಲಾ ಪಂಚಾಯಿತಿಗಳಿಗೆ ಹೋಗಿ ವಿಸಿಟ್ ಮಾಡಿ ನೋಡಿದಾಗ ಬಹಳಷ್ಟು ಸಮಸ್ಯೆಗಳು ಅಲ್ಲಿ ಇವೆ. ಎಲ್ಲೂ ಕೆಲಸ ಇಲ್ಲದೆ ಫಾರೆಸ್ಟ್‌ನಲ್ಲಿ ಕೆಲಸ ತೆಗೆದುಕೊಳ್ಳಬೇಕಾದರೆ ಒಬ್ಬರಿಗೊಬ್ಬರಿಗೆ ಹೊಂದಾಣಿಕೆ ಇಲ್ಲ. ಕೂಲಿ ಕಾರ್ಮಿಕರ ಬಗ್ಗೆ ದೊಡ್ಡ ಚಿಂತನೆ ಮಾಡುವುದು ಇದೆ. ಈ ಮೂರು ಸಮಸ್ಯೆಗಳು ಈ ಬರಗಾಲಕ್ಕೆ ಸಂಬಂಧಪಟ್ಟದ್ದು ಇರುವುದರಿಂದ ಇದರ ಬಗ್ಗೆ ಸರ್ಕಾರ ಸ್ಪಷ್ಟನೆ ಕೊಡಬೇಕು. 75% ರೈತರು ಈ ದೇಶ ಮತ್ತು ರಾಜ್ಯದಲ್ಲಿದ್ದಾರೆ. ಇವತ್ತು ರೈತರು ಎಷ್ಟು ಸಂಕಷ್ಟದಲ್ಲಿದ್ದಾರೆ ಗೊತ್ತಾ? ಮಾನ್ಯ ಇಂಧನ ಸಚಿವರು ಇಲ್ಲ. 6 ತಾಸು 3 ಫೇಸ್ ವಿದ್ಯುತ್ ಕೊಡುತ್ತೇವೆಂದು ಹೇಳಿ ಇವತ್ತು ಮೂರುವರೆ–ನಾಲ್ಕು ತಾಸು ಕೊಡುತ್ತಿದ್ದಾರೆ. ನೀವು ಆ ಎರಡು ತಾಸು ವಿದ್ಯುತ್‌ನ್ನು ಏಕೆ ಕಡಿತ ಮಾಡಿದಿರಿ? ಒಂದು ಲಕ್ಷ ಕೋಟಿ ರೂ. ಗಳ ಬಜೆಟ್ ಯಾವ ಪುರುಷಾರ್ಥಕ್ಕೆ ಕೊಡುತ್ತಿದ್ದೀರಿ? ನಿಮಗೆ ಮಾತು ಕೊಟ್ಟಂತೆ ರೈತರಿಗೆ ಕರೆಂಟ್ ಕೊಡುವುದಕ್ಕೆ ನಿಮ್ಮ ಹತ್ತಿರ Capacity ಇಲ್ಲವೆಂದರೆ ಈ ಬಜೆಟ್ ಏಕೆ ಬೇಕು? ಇವತ್ತ

ದಿವಸಕ್ಕೆ ನೀವು 6 ತಾಸು ಕರೆಂಟ್ ಕೊಡುತ್ತಿಲ್ಲ. ಅದರಲ್ಲಿ ಎರಡು ತಾಸು ಲಾಸ್ ಅನ್ನು ರೈತರಿಗೆ ಯಾರು ಕೊಡುತ್ತಾರೆ? ಪುಕ್ಕಟೆ ಕರೆಂಟ್ ಕೊಡುತ್ತೇವೆಂದು ಹೇಳುತ್ತೀರಿ. ಮಾನ್ಯ ಬಂಗಾರಪ್ಪನವರು ಯಾವಾಗ ಅನೌನ್ಸ್ ಮಾಡಿದರು ಅಲ್ಲಿಂದ ಇಲ್ಲಿಯವರೆಗೆ ಯಾವ ಸರ್ಕಾರಗಳು ರೈತರ ಹತ್ತಿರ ಕರೆಂಟಿಗೆ ದುಡ್ಡು ತೆಗೆದುಕೊಂಡಿಲ್ಲ, ಯಾರಾದರೂ ದುಡ್ಡು ತೆಗೆದುಕೊಂಡಿದ್ದಾರಾ? ಹಿಂದೆ ನಾವು ಇದ್ದಾಗ ರೈತರ ಹತ್ತಿರ ದುಡ್ಡು ತೆಗೆದುಕೊಂಡಿದ್ದೇವಾ? ಅವತ್ತು ಪುಕ್ಕಟೆ ಇತ್ತು, ಇವತ್ತು ಪುಕ್ಕಟೆ ಇದೆ. ಅವತ್ತು 12 ತಾಸು ಕರೆಂಟ್ ಕೊಟ್ಟಿದ್ದೇವೆ. 6 ತಾಸು ಕೊಡುತ್ತೇವೆಂದು ನೀವು ಹೇಳಿದ ಮಾತು. ನಾವು ಹೇಳಿದ್ದು ಅಲ್ಲ. 6 ತಾಸಿನಲ್ಲಿ 4 ತಾಸು ಕೊಡುತ್ತೀರೆಂದರೆ, ನೀವು ರೈತರ ಬಗ್ಗೆ ಪ್ರತ್ಯೇಕ ಕೃಷಿ ಬಜೆಟ್ ಮಾಡಿದಿರಿ, ನಾನು ಹಿಂದಿನ ಕೃಷಿ ಮಂತ್ರಿಯಾಗಿ ಹೇಳುತ್ತಿದ್ದೇನೆ, ಇದರಿಂದ ನಾಚಿಕೆ ಬರುತ್ತಿದೆ. 4 ಪುಟ ಕೃಷಿ ಬಗ್ಗೆ ಓದಿದರೆ ಕೃಷಿ ಬಜೆಟ್ ಆಗುವುದಿಲ್ಲ. ಕೃಷಿ ಸಚಿವರಿಗೆ 19000 ಕೋಟಿ ರೂ.ಗಳನ್ನು ಕೊಟ್ಟು ಏನು ಮಾಡುತ್ತೀರಿ ಮಾಡಿ ಎಂದು ಕೊಟ್ಟರೆ ಅದು ಪ್ರತ್ಯೇಕ ಕೃಷಿ ಬಜೆಟ್ ಆಗುತ್ತದೆ. ರೈತರ ಬಗ್ಗೆ ನಾವು ಬಹಳ ಚಿಂತೆ ಮಾಡುತ್ತೇವೆ. 4 ತಾಸು ಕೊಡುವ ವಿದ್ಯುತ್ತಿನಲ್ಲಿ 4 ಸಲ ಪವರ್‌ಕಟ್ ಆಗುತ್ತದೆ. ಡ್ರಿಪ್ ಇರಿಗೇಶನ್‌ಗೆ ಸ್ವಲ್ಪ ಕಡಿತ ಮಾಡಿದ್ದಾರೆ. ಅದರಿಂದ ರೈತರಿಗೆ ಬಹಳಷ್ಟು ಹೊಡೆತ ಬೀಳುತ್ತಿದೆ. ಟ್ರಾನ್ಸ್‌ಫಾರ್ಮರ್ ಸುಟ್ಟಿ ಕೂಡಲೇ replace ಆಗುತ್ತಿಲ್ಲ. ಕುಡಿಯುವ ನೀರಿಗೆ scarcity ಯಲ್ಲಿ ಬೋರ್‌ವೆಲ್ ಹಾಕುತ್ತಿದ್ದಾರೆ. ಅದಕ್ಕೆ immediate ಆಗಿ connection ಸಿಗುತ್ತಿಲ್ಲ. ಅದಕ್ಕೆ ಒಂದೂವರೆ ಎರಡು ತಿಂಗಳ ಟೈಮ್ ತೆಗೆದುಕೊಳ್ಳುತ್ತಿದ್ದಾರೆ. ಟ್ರಾನ್ಸ್‌ಫಾರ್ಮರ್ ಸುಟ್ಟರೆ 12000 ರೂ. ಗಳು ಬೇಕಾಗುತ್ತದೆ. ರೈತರ ಜೇಬು ಒಂದು ಕಡೆ ಕಟ್ ಹೊಡೆಯುವುದು, ಒಂದು ಕಡೆ ರೈತರಿಗೆ ಸಹಾಯ ಮಾಡುತ್ತೇವೆಂದು ಹೇಳುವುದು. ಎಷ್ಟೋ ರೈತರು ನಮಗೆ ಫೋನ್ ಮಾಡಿ ಅಥವಾ ಭೇಟಿ ಆದಾಗ ಸರ್ಕಾರ ಬೇಕಾದರೆ ದುಡ್ಡು ತೆಗೆದುಕೊಳ್ಳಲಿ ನಮಗೆ ಸರಿಯಾಗಿ ಕರೆಂಟ್ ಕೊಡಿ ಎನ್ನುವ ರೀತಿಯಲ್ಲಿ ಅವರ ಭಾವನೆಯನ್ನು ವ್ಯಕ್ತ ಮಾಡಿದ್ದಾರೆ. ಎರಡು ವರ್ಷದ ಹಿಂದೆ ನಮ್ಮ ಬೀದರ್‌ನಲ್ಲಿ ಒಬ್ಬ ರೈತ ಆತ್ಮಹತ್ಯೆ ಮಾಡಿಕೊಂಡರು. ಮಾನ್ಯ ಮುಖ್ಯಮಂತ್ರಿಗಳ ಹೆಸರಿನಲ್ಲಿ ಚೀಟಿ ಬರೆದು ಇಟ್ಟು ಸತ್ತಿದ್ದಾನೆ. ನನಗೆ ಸರಿಯಾಗಿ ಕರೆಂಟ್ ಕೊಡುತ್ತಿಲ್ಲ. ನಾನು ಹಾಕಿದ ಬೆಳೆ ಸರಿಯಾಗಿ ಬರುತ್ತಿಲ್ಲ. ಅದಕ್ಕಾಗಿ ಆ ನೋವು ತಾಳದೆ ನಾನು ಇವತ್ತು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದೇನೆಂದು ಚೀಟಿ ಬರೆದು ಇಟ್ಟಿದ್ದನು. ಈಗಲಾದರೂ ನೀವು ಎಚ್ಚೆತ್ತುಕೊಂಡಿಲ್ಲವಲ್ಲಾ? 24 ತಾಸಿನಲ್ಲಿ ನೀವು 6 ತಾಸು ಕೊಡುತ್ತೇವೆಂದು 4 ತಾಸಿಗೆ ತಂದು ನಿಲ್ಲಿಸಿದ್ದೀರಿ.

ಶ್ರೀ ಸಿದ್ದು ಸವದಿ :- ಮಾನ್ಯ ಉಪಾಧ್ಯಕ್ಷರೆ, ಸುಳ್ಳು ಹೇಳುತ್ತಿದ್ದಾರೆ ...

(ಗೊಂದಲ)

ಶ್ರೀ ಬಂಡೆಪ್ಪ ಖಾಶೆಂಪೂರ್ :- ಆಯಿತು, ಕುಳಿತುಕೊಳ್ಳಿ.

ಶ್ರೀ ಸಿದ್ದು ಸವದಿ :- 9 ಗಂಟೆ 3 ಫೇಸ್ ಕೊಡುತ್ತಾರೆ.

(ಗೊಂದಲ)

ಉಪಾಧ್ಯಕ್ಷರು :- ನೀವು ಕುಳಿತುಕೊಳ್ಳಿ, ಮಾನ್ಯ ಸಚಿವರು ಉತ್ತರ ಕೊಡುತ್ತಾರೆ.

ಶ್ರೀ ಸಿದ್ದು ಸವದಿ :- 9 ತಾಸು 3 ಫೇಸ್ ಕೊಡುತ್ತಾರೆ. ಹಿಂದೆ ಪುಕ್ಕಟೆ ಕರೆಂಟ್ ಕೊಡುತ್ತಿದ್ದರಾ?

(ಗೊಂದಲ)

ಶ್ರೀ ಬಂಡೆಪ್ಪ ಖಾಶೆಂಪೂರ್ :- ಮೊನ್ನೆ ಸಾಯಂಕಾಲ ಮಂತ್ರಿಗಳ ಎದುರುಗಡೆ ಮೀಟಿಂಗ್ ಮಾಡಿದ್ದೇವೆ. 12 ತಾಸು 9 ತಾಸು ಇಲ್ಲಾ ಸ್ವಾಮಿ, ಬರೀ 4 ತಾಸು 3 ಫೇಸ್ ಕೊಡುತ್ತಿದ್ದಾರೆ. ನಾವು ಹೇಳಿದ್ದು ಅಲ್ಲ ನಿಮ್ಮ ಅಧಿಕಾರಿಗಳು 6 ತಾಸು ಕೊಡುತ್ತೇವೆಂದು ಹೇಳಿದ್ದರು. ನಿಮ್ಮ ಅಧಿಕಾರಿಗಳನ್ನು ಕೇಳಿ, ಅದು ಸುಳ್ಳು ಇದ್ದರೆ ನಾನು ಈಗಲೇ ರಾಜೀನಾಮೆ ಕೊಟ್ಟು ಹೋಗಿ ಬಿಡುತ್ತೇನೆ. ಆ ಸಭೆಯಲ್ಲಿ ನಾನು ಒಬ್ಬನೇ ಇರಲಿಲ್ಲ. ಬೀದರ್ ಜಿಲ್ಲೆಯ ಎಲ್ಲಾ ಶಾಸಕರು ಮಾನ್ಯ ರೇವುನಾಯಕ್ ಬೆಳಮಗಿಯವರ ನೇತೃತ್ವದಲ್ಲಿ ಒಂದು ಮೀಟಿಂಗ್ ಮಾಡಿದ್ದೇವೆ. ಏಕೆ ಸಭೆ ಮಾಡಿದ್ದೇವೆಂದರೆ, ನೀವು 6 ತಾಸು 3 ಫೇಸ್ ಕರೆಂಟ್ ಕೊಡುತ್ತೇವೆಂದು ಹೇಳಿದ್ದೀರಿ. ನಮ್ಮ ಬೀದರ್‌ದಲ್ಲಿ ಮಾತ್ರ 4 ತಾಸು ಮಾತ್ರ ಕೊಡುತ್ತಿದ್ದಾರೆ. ಅದನ್ನು ನಾವು ಹೇಳಿದ್ದು ಅಲ್ಲ ನಿಮ್ಮ ಅಧಿಕಾರಿಗಳು ನಮ್ಮೆಲ್ಲರಿಗೆ ಹೇಳಿದ್ದಾರೆ. ಅದರ ಬಗ್ಗೆ ಕೇಳಿ ಎಲ್ಲಾ ಶಾಸಕರಿಗೆ ...

ಉಪಾಧ್ಯಕ್ಷರು :- ಮಾನ್ಯ ಸಚಿವರು ಬಂದಿದ್ದಾರೆ, ಅವರು ಉತ್ತರ ಕೊಡುತ್ತಾರೆ.

ಕು.ಶೋಭಾ ಕರಂದ್ಲಾಜೆ :- ಬೀದರ್ ಜಿಲ್ಲೆಯ ಕೆಲವು ಭಾಗಗಳಲ್ಲಿ ಈ ಸಮಸ್ಯೆ ಇರುವುದು ನಿಜ ಇದೆ.

ಶ್ರೀ ಬಂಡೆಪ್ಪ ಖಾಶೆಂಪೂರ್ :- ಮಂತ್ರಿಗಳು ನಾವು ಹೇಳಿರುವುದನ್ನು ಒಪ್ಪಿಕೊಂಡರಲ್ಲಾ ಸಾಕು.

(ಗೊಂದಲ)

ಶ್ರೀ ಸಿದ್ದು ಸವದಿ :- ಪೂರ್ಣ ಹೇಳುವುದನ್ನು ಕೇಳಿ.

ಕು. ಶೋಭಾ ಕರಂದ್ಲಾಜೆ :- ನೀವು ನೀವೇ ಮಾತನಾಡಿದರೆ ಹೇಗೆ?

ಡಾ: ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ :- ಸಿದ್ದು ಸವದಿಯವರು ಬಂಡೆಪ್ಪ ಖಾಶೆಂಪೂರರವರು ಸುಳ್ಳು ಹೇಳುತ್ತಿದ್ದಾರೆಂದು ಹೇಳಿದರಲ್ಲಾ.

ಉಪಾಧ್ಯಕ್ಷರು :- ಆಯಿತು ಪಾಟೀಲ್‌ರೆ, ಕುಳಿತುಕೊಳ್ಳಿ.

ಕು.ಶೋಭಾ ಕರಂದ್ಲಾಜೆ :- ಏಕೆ ಎಂದು ನೀವು ಕೇಳಬೇಕಲ್ಲವೇ? ಇದು ನೀವು ಮಾಡಿದ ಕರ್ಮಕ್ಕೆ.

(ಗೊಂದಲ)

ಉಪಾಧ್ಯಕ್ಷರು :- ನೀವು ಕುಳಿತುಕೊಳ್ಳಿ. ಮಾನ್ಯ ಸಚಿವರು ಉತ್ತರವನ್ನು ನೀವು ಹೇಳಿ.

ಕು. ಶೋಭಾ ಕರಂದ್ಲಾಜೆ(ಇಂಧನ ಸಚಿವರು) :- ಮಾನ್ಯ ಉಪಾಧ್ಯಕ್ಷರೆ, ಇವತ್ತು ಸಿದ್ದು ಸವದಿಯು ಕ್ಷೇತ್ರ ಮೂರು ಸೇರಿ ಜಮಖಂಡಿ, ತೇರದಾಳ, ಬಾಗಲಕೋಟೆಯ ಹಲವಾರು ಪ್ರದೇಶ ನಮ್ಮ ಗೋವಿಂದ ಕಾರಜೋಳರವರು ಇಲ್ಲಿಯೇ ಇದ್ದಾರೆ. ಮತ್ತು ಬೀದರ್‌ನ ಹಲವು ಭಾಗದಲ್ಲಿ ಇವತ್ತು ನಮ್ಮ ಯಾವುದೇ ರೀತಿಯ ಮೂಲಭೂತ ಸೌಕರ್ಯಗಳು ಪೂರ್ಣವಾಗಿರುವುದಿಲ್ಲ. ಏಕೆಂದರೆ ಅಲ್ಲಿ ಸ್ಟೇಷನ್‌ಗಳ ಕೊರತೆ ಇದೆ ಹಾಗೂ ಲೈನ್‌ಗಳ ಕೊರತೆ ಇದೆ, ಮಹಾಲಿಂಗಪುರ ಸ್ಟೇಷನ್‌ಗೆ ನಾವು 150 ಮೆಗಾವ್ಯಾಟ್ ಕೊಟ್ಟರೆ ಅದನ್ನು ತೆಗೆದುಕೊಂಡು ಹೋಗುವಂತಹ ಶಕ್ತಿ ಆ ಸ್ಟೇಷನ್‌ಗೆ ಇರಲಿಲ್ಲ. ಕೇವಲ ಅಲ್ಲಿ 80 ಮೆಗಾವ್ಯಾಟ್ ಮಾತ್ರ ಹೋಗುತ್ತಿತ್ತು. ಇವತ್ತು ನಾವು ಸ್ಟೇಷನ್‌ಗಳನ್ನು ಹೆಚ್ಚಿಗೆ ಮಾಡಬೇಕು ಮತ್ತು ಲೈನ್‌ಗಳನ್ನು ಸಹ ಹೆಚ್ಚು ಮಾಡಬೇಕಾಗಿದೆ. ಇವತ್ತು ಬೀದರ್ ಜಿಲ್ಲೆಯಲ್ಲಿಯೂ ಕೂಡ ಅದೇ ಸಮಸ್ಯೆ ಇದೆ. ಬೀದರ್ ಜಿಲ್ಲೆಯಲ್ಲಿ ಯಾವಾಗ ನಿರಂತರ ಜ್ಯೋತಿ ಯೋಜನೆ ಪೂರ್ಣವಾಗುತ್ತದೆ ಮತ್ತು ಸ್ಟೇಷನ್‌ಗಳು ಜಾಸ್ತಿ ಬರುತ್ತವೆ ಆಗ ಈ ಸಮಸ್ಯೆಗೆ ಪರಿಹಾರವು ಸಿಗುತ್ತದೆ. ಮೊದಲ ಹಂತದ ನಿರಂತರ ಜ್ಯೋತಿ ಯೋಜನೆ ಈ ವರ್ಷದ ಮಾರ್ಚಿಯ ಕೊನೆಯ ವೇಳೆಯಲ್ಲಿ ಅದು ಪೂರ್ಣವಾಗಬೇಕು ಅಥವಾ ಏಪ್ರಿಲ್ ಎರಡನೇ ವಾರದಲ್ಲಿ ಅದು ಪೂರ್ಣವಾಗುತ್ತದೆ. ಆ ಸಂದರ್ಭದಲ್ಲಿ ಅದರ ಜೊತೆಗೆ ಕಳೆದ ಅಧಿವೇಶನದಲ್ಲಿ ಮತ್ತು ಈ ಒಂದು ಅಧಿವೇಶನದಲ್ಲಿ ಹೇಳಿದ್ದೇನೆ. ಇವತ್ತು ನಾವು 167 ಹೊಸ ಸ್ಟೇಷನ್‌ಗಳನ್ನು ಕಳೆದ ಒಂದು ವರ್ಷದಿಂದ ಮಾಡುತ್ತಿದ್ದೇವೆ. ಹಿಂದೆ ರೇವಣ್ಣನವರು ಇದ್ದಾಗಲೂ ಕೂಡ ಅವರು ಈ ಸಮಸ್ಯೆಯನ್ನು ಅರಿತುಕೊಂಡು ಅವರು ಹೇಳಿದ್ದರು. ಒಂದು ದಿನಕ್ಕೆ ಒಂದು ಸ್ಟೇಷನ್ ಅಂದರೆ 365 ದಿನಕ್ಕೆ 365 ಸ್ಟೇಷನ್ ಮಾಡಬೇಕೆಂದು ಅವರು ಯೋಜನೆಯನ್ನು ಮಾಡಿದ್ದರು. ಅದು ಸತ್ಯ ಇತ್ತು, ಏಕೆಂದರೆ ಅಷ್ಟೊಂದು ಮೂಲಭೂತ ಸೌಕರ್ಯದ ಸಮಸ್ಯೆ ಈ ರಾಜ್ಯದಲ್ಲಿ ಇದೆ. ಅವತ್ತು ಅವರು

ಹೇಳಿದರು ಪಾಪ, ಎಲ್ಲಾ ಸ್ಟೇಷನ್‌ಗಳನ್ನು ಸಹ ಮಾಡುವುದ್ಕಾಗಲಿಲ್ಲ. ಸುಮಾರು 67 ಸ್ಟೇಷನ್‌ಗಳನ್ನು ಮಾಡಿದ್ದರು. 67 ಸ್ಟೇಷನ್‌ಗಳು ಮಾತ್ರ ಪೂರ್ಣವಾಗಿತ್ತು. ಬಾಕಿ ಎಲ್ಲಾ ಕಡೆಯಲ್ಲೂ ಜಮೀನುಗಳನ್ನು ಪಡೆದುಕೊಂಡು ಅದು ಅರ್ಧಂಬರ್ಧ ಶುರುವಾಗಿತ್ತು. ಈ ತರಹ ಹಲವಾರು ಆಗಿತ್ತು, ಈಗ ಅವುಗಳನ್ನು ಕಂಪ್ಲೀಟ್ ಮಾಡಬೇಕಾಗಿದೆ. ಈಗ ಅದರ ಬಗ್ಗೆ technical report ಅನ್ನು ತರಿಸಿಕೊಂಡಿದ್ದೇವೆ. ಯಾವ ಜಿಲ್ಲೆಗೆ ಇಷ್ಟು ಗಂಟೆಗಳ ಕಾಲ ಪವರ್ ಅನ್ನು ಕೊಡುವುದಕ್ಕೆ ಎಷ್ಟು ಮೂಲಭೂತ ಸೌಕರ್ಯದ ಕೊರತೆ ಇದೆ, ಎಷ್ಟು ಸ್ಟೇಷನ್‌ಗಳ ಕೊರತೆ ಇದೆ, ಎಷ್ಟು ಲೈನ್‌ಗಳ ಕೊರತೆ ಇದೆ, ಎಷ್ಟು ಬೇಗ ಸರ್ವೀಸ್ ಸ್ಟೇಷನ್‌ಗಳನ್ನು, 33 ಕೆ.ವಿ. ಸ್ಟೇಷನ್‌ಗಳನ್ನು upgradation ಮಾಡಬೇಕು. ಇವತ್ತು ನಾವು ಆ ಬಗ್ಗೆ ನಿರ್ಧಾರವನ್ನು ತೆಗೆದುಕೊಂಡಿದ್ದೇವೆ. ಈ ರಾಜ್ಯದಲ್ಲಿ ಇಲ್ಲಿ ಎಲ್ಲಿಯೂ ಕೂಡ 33 ಕೆ.ವಿ. ಸ್ಟೇಷನ್ ಮಾಡಬಾರದು. ಅಕ್ರಮ ಪಂಪುಸೆಟ್‌ಗಳು ಮತ್ತು ಸಕ್ರಮ ಪಂಪ್‌ಸೆಟ್‌ಗಳ ಕಾರಣಕ್ಕಾಗಿ ಅದು ತಕ್ಷಣ ಅದಕ್ಕೆ ಓವರ್ ಲೋಡ್ ಆಗುತ್ತದೆ. ಅದಕ್ಕಾಗಿ ಇನ್ಮುಂದೆ ಎಲ್ಲಾ ಸ್ಟೇಷನ್‌ಗಳಲ್ಲಿ 33 ಕೆ.ವಿ. ಸ್ಟೇಷನ್‌ಗಳು ಇದ್ದರೂ ಕೂಡ ಇನ್ನು ಮುಂದೆ 66 ಕೆವಿ ಮಾಡುವುದರ ಬದಲು 110 ಕೆ.ವಿ.ಯನ್ನು ಮಾಡಬೇಕೆಂಬ ನಿರ್ಧಾರವನ್ನು ಸರ್ಕಾರವು ತೆಗೆದುಕೊಂಡಿದೆ. ಇಡೀ ರಾಜ್ಯದಲ್ಲಿ 110 ಕೆ.ವಿ. ಸ್ಟೇಷನ್‌ಗಳು ಹೆಚ್ಚಾಗಬೇಕು ಇದರ ಮೂಲಕ ಮೂಲಭೂತ ಸೌಕರ್ಯ ಸಿಕ್ಕಿದಾಗ ಮಾತ್ರ ನಾವು ಪವರ್ ಅನ್ನು ಕೊಡುವುದಕ್ಕೆ ಸಾಧ್ಯವಾಗುತ್ತದೆ. 8526 ಮೆಗಾವ್ಯಾಟ್ ವಿದ್ಯುತ್ ಅನ್ನು ಕೊಟ್ಟಿದ್ದೇವೆ. ಇವತ್ತು ಪೀಕ್‌ಲೋಡ್ ರಾತ್ರಿ ಅಷ್ಟು ಆಗಿದೆ. ಆದರೂ ಅದನ್ನು ಕೊಡುವುದಕ್ಕೆ ನಮಗೆ ಶಕ್ತಿ ಬೇಕಿದೆಯಲ್ಲಾ? ಅಲ್ಲಿ ಅದನ್ನು ಕೊಟ್ಟ ತಕ್ಷಣ ಅದು ಟ್ರಿಪ್ ಆಗುತ್ತದೆ. ಅಲ್ಲಿ ಟ್ರಿಪ್ ಆಗುವುದರಿಂದ ಎಲ್ಲಾ ಕಡೆಗಳಲ್ಲೂ ವಿದ್ಯುತ್ ನಿಲುಗಡೆಯಾಗುತ್ತದೆ. ಈ ಕಾರಣಕ್ಕಾಗಿ ಮೂಲಭೂತ ಸೌಕರ್ಯವನ್ನು ಅಭಿವೃದ್ಧಿಪಡಿಸಬೇಕಾಗಿದೆ. ನಾನು ಬೀದರ್‌ಗೆ ಹೋದಾಗಲೂ ಕೂಡ ನಮ್ಮ ಖಂಡ್ರೆಯವರು ಸಹ ಇದ್ದರು, ಆಗಲೂ ಸಹ ನಾನು ಅವರಿಗೆ ಹೇಳಿ ಬಂದಿದ್ದೇನೆ. ಸ್ಟೇಷನ್‌ಗಳನ್ನು ಜಾಸ್ತಿ ಮಾಡುತ್ತಿದ್ದೇನೆ, ಅವರ ಊರಿನಲ್ಲಿಯೂ ಸಹ ಸ್ಟೇಷನ್‌ಗಳು ಉದ್ಘಾಟನೆಯಾಯಿತು. ಹೊಸದಾಗಿ ಶಿಲಾನ್ಯಾಸ ಆಗಬೇಕಾಗಿದೆ. ಈಗ ನಾವು ಸ್ಟೇಷನ್‌ಗಳನ್ನು ಮಾಡುತ್ತಿದ್ದೇವೆ. ಇದರ ಜೊತೆಗೆ ನಿರಂತರ ಜ್ಯೋತಿ ಯೋಜನೆಗಳನ್ನು ಪೂರ್ಣ ಮಾಡುವುದಕ್ಕೆ ವಿಶೇಷವಾದಂತಹ ಜವಾಬ್ದಾರಿಯನ್ನು ತೆಗೆದುಕೊಂಡು ಮಾಡುತ್ತಿದ್ದೇವೆ. ಮೊದಲ ಹಂತದ್ದು ಇನ್ನು ಒಂದು ತಿಂಗಳಲ್ಲಿ ಪೂರ್ಣವಾಗುತ್ತದೆ. ಎರಡನೆಯ

ಹಂತದ ನಿರಂತರ ಜ್ಯೋತಿ ಯೋಜನೆಯನ್ನು ಕೂಡ ಈ ವರ್ಷದ ಕೊನೆಯ ಒಳಗಡೆ ಪೂರ್ಣ ಮಾಡುತ್ತೇವೆ.

ಶ್ರೀ ಹೆಚ್.ಡಿ. ರೇವಣ್ಣ (ಹೊಳೆನರಸೀಪುರ) :- ನಮ್ಮ ಇಂಧನ ಸಚಿವರು ಇದನ್ನು ನೀವು ಮಾಡಿದ್ದು ಎಂದು ಹೇಳಿದರು. ಇದು ನಮ್ಮ ಕಾಲದಲ್ಲಿ ಆಗಿಲ್ಲ. ಹಿಂದೆ ಇದನ್ನು ಯಾರು ಮಾಡಿದ್ದರು ಅದು ನನಗೆ ಗೊತ್ತಿಲ್ಲ. ನೀವು 67 ಸಬ್ ಸ್ಟೇಷನ್ ಎಂದು ಹೇಳಿದ್ದೀರಿ. ಅದು 67 ಅಲ್ಲ, 450 ಸಬ್ ಸ್ಟೇಷನ್ ಮಾಡುವುದಕ್ಕೆ ನಾವು ಅನುಮತಿಯನ್ನು ಕೊಟ್ಟಿದ್ದೆವು. ಈ ಬಗ್ಗೆ ಎಷ್ಟೆಷ್ಟು ಮಾಡಿದ್ದೇವೆಂಬ ಬಗ್ಗೆ ತಾವು yearwise ಮಾಹಿತಿಯನ್ನು ತೆಗೆದು ನೋಡಿದರೆ ಎಷ್ಟೆಷ್ಟು ಮಾಡಿದ್ದೇವೆಂದು ತಮಗೆ ಗೊತ್ತಾಗುತ್ತದೆ. 450 ಸಬ್ ಸ್ಟೇಷನ್‌ಗಳಲ್ಲಿ ಮಾನ್ಯ ಶಾಸಕರಾದ ಜಯಚಂದ್ರರವರ ಜಿಲ್ಲೆಯಲ್ಲಿ ಎಷ್ಟು ಮಾಡಿದ್ದೀರೆಂದು ಅವರು ಕೇಳಿದರು. ಅವರ ಜಿಲ್ಲೆಯಲ್ಲಿ ಎಷ್ಟು ಮಾಡಿದ್ದೇವೆಂದು ಈ ಬಗ್ಗೆ ತಾವು ತೆಗೆದು ನೋಡಿ. ನಾನು ಇದ್ದಾಗ 36 ಸ್ಟೇಷನ್‌ಗಳನ್ನು ಮಾಡಿಕೊಟ್ಟಿದ್ದೇನೆ. ಮಾನ್ಯ ಜಯಚಂದ್ರರವರ ತುಮಕೂರು ಜಿಲ್ಲೆಗೆ 36 ಸಬ್‌ಸ್ಟೇಷನ್, ಗುಬ್ಬಿಯಲ್ಲಿ 220 ಸಬ್‌ಸ್ಟೇಷನ್‌ಗಳನ್ನು ಮಾಡಿಕೊಟ್ಟಿದ್ದೇನೆ. ಏಕೆಂದರೆ, ಅದರ ಬಗ್ಗೆ ಹೇಳುವುದಲ್ಲ, ನಾನು ಇನ್ನೊಂದು ವಿಷಯವನ್ನು ಮಾನ್ಯ ಇಂಧನ ಸಚಿವರ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ಕೆಲವು ಟಿ.ಸಿ.ಗಳ ಬಗ್ಗೆ ಹೇಳಿದ್ದೇನೆ. ಇವತ್ತು ಕುಡಿಯುವ ನೀರಿಗೆ ಬರಗಾಲ ಇದೆ. ಅಲ್ಲಿ ಟಿ.ಸಿ.ಗಳನ್ನು ಹಾಕಬೇಕಾದರೆ ಆ ಪರಿಸ್ಥಿತಿಯು ಯಾರಿಗೂ ಬೇಡ. ನಿಮ್ಮ ಇಂಜಿನಿಯರ್‌ಗಳು ಇದ್ದಾರಲ್ಲಾ ನಾನು ಈ ರೀತಿಯಾಗಿ ಹೇಳುತ್ತೇನೆಂದು ತಾವು ಬೇಜಾರು ಮಾಡಿಕೊಳ್ಳಬೇಡಿ. ಅಲ್ಲಿ 2 ರಿಂದ 3 ತಿಂಗಳಾದರೂ ಸಹ ಟಿ.ಸಿ. ಯನ್ನು ಹಾಕುತ್ತಿಲ್ಲ. ಇದರ ಜೊತೆಗೆ ನೀವು ಇರುವ ಕರೆಂಟ್ ಅನ್ನು ಉಪಯೋಗ ಮಾಡುವುದಕ್ಕಾಗುತ್ತಿಲ್ಲ. ತಾವು ಬಂದು 6 ತಿಂಗಳು ಆಗಿದೆ. ಉದಾ : ನಾಗಾರ್ಜುನ 1250 ಮೆಗಾ ವ್ಯಾಟ್, ಬರೀ ಕೇವಲ 500–600 ಮೆಗಾ ವ್ಯಾಟ್ ಅನ್ನು ಉಪಯೋಗಿಸುತ್ತಿದ್ದೀರಿ. ಉಡುಪಿಯಿಂದ ಹಾಸನಕ್ಕೆ ಲೈನ್ ಎಳೆಯುವುದಕ್ಕೆ ಆಗಿದೆಯೇ? ಇವತ್ತಿನವರೆಗೂ ಎಳೆಯುವುದಕ್ಕೆ ಆಗಿಲ್ಲ. 4 ವರ್ಷ ತೆಗೆದುಕೊಂಡಿದ್ದೀರಿ. ಬಳ್ಳಾರಿ ಮೊದಲನೆ ಹಂತ ಇರಬಹುದು, ಎರಡನೇ ಹಂತ ಇರಬಹುದು 1000 ಮೆಗಾ ವ್ಯಾಟ್, ವರಾಹಿ 280 ಯೂನಿಟ್, ರಾಯಚೂರು 8 ಯೂನಿಟ್ ಇವೆಲ್ಲಾ ನಾವು ಮಾಡಿದ್ದೇವೆ. ಅದನ್ನು ಉಪಯೋಗಿಸಿಕೊಳ್ಳಿ. 2000–2,500 ಮೆಗಾ ವ್ಯಾಟ್ ವಿದ್ಯುತ್ ಉತ್ಪಾದನೆ ಮಾಡಿ ಕೊಟ್ಟಿದ್ದೇವೆ. ಮತ್ತೆ ಏನು ಮಾಡಬೇಕೆಂದು ಕಾರ್ಯಸೂಚಿ ಹಾಕಿದ್ದೇವೆ. 2010 ರಿಂದ 2017ರವರೆಗೆ ಏನು ಮಾಡಬೇಕೆಂದು KPTCL

ಮತ್ತು KPCL ಎರಡರಲ್ಲೂ ಮಾಡಿದ್ದೇವೆ. ಅದನ್ನು ಮಾಡಲಿ ಸಾಕು. ದಯಮಾಡಿ ಸಂಬಂಧಪಟ್ಟ ಕಂಪನಿಗಳಿಗೆ ಅದು ಚಾಮುಂಡೇಶ್ವರಿ ಕಂಪನಿ ಇರಬಹುದು, ಮಂಗಳೂರು ಕಂಪನಿ ಇರಬಹುದು, ಗುಲ್ಬರ್ಗಾ ಕಂಪನಿ ಇರಬಹುದು ಅವುಗಳಿಗೆ ಕುಡಿಯುವ ನೀರಿಗೆ ಕೂಡಲೇ ಆದ್ಯತೆ ಕೊಡಬೇಕೆಂದು ಹೇಳಿ. ಉದಾಹರಣೆಗೆ T.C ಬಗ್ಗೆ ಹೇಳುವುದಾದರೆ, ಒಂದು ಲಕ್ಷ ರೂಪಾಯಿ ದುಡ್ಡು ಕಟ್ಟಬೇಕೆಂದು ಹೇಳುತ್ತಾರೆ. Estimate cost ಒಂದು ಲಕ್ಷ ರೂಪಾಯಿ ಬರಗಾಲದಲ್ಲಿ ಕೊಡುವುದಿಲ್ಲ. ಕುಡಿಯುವ ನೀರಿಗೆ ಒಂದು ಲಕ್ಷ ರೂಪಾಯಿಗಳನ್ನು ನಾವು ಎಲ್ಲಿಂದ ಕಟ್ಟೋಣ. ಈ ಪರಿಸ್ಥಿತಿ ಇದೆ. ಅವರಿಗೆ ಹೇಳಿ, ಜಿಲ್ಲಾ ಪರಿಷತ್ತನ್ನು ಹೊಂದಾಣಿಕೆ ಮಾಡಿ ಕುಡಿಯುವ ನೀರಿನ ವ್ಯವಸ್ಥೆಗೆ T.C ಯಿಂದ direct ಆಗಿ ಹಾಕುವುದಕ್ಕೆ instruction ಕೊಡಿ, ಆಮೇಲೆ ಬೇಕಾದರೆ ಬಿಲ್ ಬಂದಾಗ ಮುರಿದುಕೊಳ್ಳಲಿ. ಅದನ್ನು ಬಿಟ್ಟು ಈಗ ಏನಾಗಿದೆ ಎಂದರೆ, ದುಡ್ಡು ಕಟ್ಟಬೇಕು ಇಲ್ಲದೇ ಹೋದರೆ ನೀವೇ ಮಾಡಿಸಿಕೊಳ್ಳಿ ಎಂದು ಮಾಡಿದ್ದಾರೆ. ಆದ್ದರಿಂದ ಕುಡಿಯುವ ನೀರಿಗೆ ಬಹಳ ತೊಂದರೆ ಇದೆ. T.C ಗಳಿಗೆ ಕೂಡಲೇ ಸಂಬಂಧಪಟ್ಟಂತಹ ನಿಮ್ಮ ಇಲಾಖೆಯವರಿಗೆ ಹೇಳಬೇಕು ಎಂದು ಸನ್ಮಾನ್ಯ ಇಂಧನ ಸಚಿವರಿಗೆ ಮನವಿ ಮಾಡುತ್ತೇನೆ.

ಕು. ಶೋಭಾ ಕರಂದ್ಲಾಜೆ (ಇಂಧನ ಸಚಿವರು) :- ಮಾನ್ಯ ಅಧ್ಯಕ್ಷರೆ, ಇವತ್ತು ಕುಡಿಯುವ ನೀರಿನ ಬಗ್ಗೆ ಬೆಳಿಗ್ಗೆ ಒಂದು ಬಾರಿ ಇಲ್ಲಿ ಚರ್ಚೆ ಆಯಿತು. ಗ್ರಾಮೀಣಾಭಿವೃದ್ಧಿ ಇಲಾಖೆಯವರು ಇವತ್ತು ಅವರೇ self initiation ಮಾಡುತ್ತೇವೆ ಕುಡಿಯುವ ನೀರಿಗೆ ಸಂಬಂಧಪಟ್ಟಂತೆ ನಾವೇ ಮಾಡಿಕೊಳ್ಳುತ್ತೇವೆ ಎಂದು ಹೇಳಿದ್ದಾರೆ. ಅದಕ್ಕಾಗಿ ಅವರಿಗೆ ಬಿಟ್ಟಿದ್ದೇವೆ. Technical support ಕೊಡುತ್ತೇವೆ. ಎನ್ನುವ ಒಂದು ತೀರ್ಮಾನವಾಗಿದೆ. ಅದಕ್ಕಾಗಿ ಗ್ರಾಮೀಣಾಭಿವೃದ್ಧಿ ಇಲಾಖೆಯ ಸುತ್ತೋಲೆ ಆಧಾರದ ಮೇಲೆ ಗ್ರಾಮೀಣಾಭಿವೃದ್ಧಿ ಇಲಾಖೆಗೇ ಬಿಟ್ಟಿದ್ದೇವೆ.

ಶ್ರೀ ವೆಂಕಟರಾವ್ ನಾಡಗೌಡ :- Regular system ಗೆ ಮಾಡಿದ್ದೀರಾ?

ಕು. ಶೋಭಾ ಕರಂದ್ಲಾಜೆ (ಇಂಧನ ಸಚಿವರು) :- ಇಲ್ಲ ಅವರು ಕುಡಿಯುವ ನೀರಿಗೆ ಕೇಳಿದ್ದು.

ಶ್ರೀ ವೆಂಕಟರಾವ್ ನಾಡಗೌಡ :- ಕುಡಿಯುವ ನೀರಿಗೆ estimate ಮಾಡಿ ಕೊಡಬೇಕು. Task- force ನಲ್ಲಿ ಮಾಡುವ ಬದಲು ಅದನ್ನು ತಾವೇ estimate ಮಾಡಿ ಅವರಿಗೆ ಕೊಟ್ಟರೆ ಒಳ್ಳೆಯದು.

ಕು. ಶೋಭಾ ಕರಂದ್ಲಾಜೆ (ಇಂಧನ ಸಚಿವರು) :- ನಮ್ಮದೇನೂ ತಕರಾರು ಇಲ್ಲ. ನಮಗೆ ಆದೇಶ ಬಂದರೆ ನಾವು ಮಾಡುತ್ತೇವೆ. ಕುಡಿಯುವ ನೀರಿನ ಆದ್ಯತೆಯಲ್ಲಿಯೇ ಮಾಡುತ್ತಿದ್ದೇವೆ.

ಶ್ರೀ ವೆಂಕಟರಾವ್ ನಾಡಗೌಡ :- ಜಿಲ್ಲಾಧಿಕಾರಿಗಳಿಗೆ letter ಕೊಟ್ಟ ತಕ್ಷಣ implement ಮಾಡಬೇಕು. ಅದನ್ನೇ continue ಮಾಡಬೇಕು.

ಕು. ಶೋಭಾ ಕರಂದ್ಲಾಜೆ (ಇಂಧನ ಸಚಿವರು) :- ಕುಡಿಯುವ ನೀರಿಗೆ ನಮ್ಮದು ಯಾವುದೇ ತಕರಾರು ಇಲ್ಲ. ನಮಗೆ ಏನು ಸುತ್ತೋಲೆ ಇರುತ್ತದೆಯೋ ಅದರ ತಕ್ಕಂತೆ ನಾವು ಮಾಡುತ್ತೇವೆ. ಇವತ್ತು ಕುಡಿಯುವ ನೀರಿಗೆ ಅವರು ಕೇಳಿದ್ದಕ್ಕೆ ಅವರಿಗೆ self initiation ಕೊಟ್ಟಿದ್ದೇವೆ. ಇನ್ನೊಂದು ಮಾನ್ಯ ರೇವಣ್ಣನವರು ಹೇಳಿದರು, ಉಡುಪಿಯ ಎರಡನೇ ಘಟಕದಿಂದ ನಿಮಗೆ 500 ಮೆಗಾವ್ಯಾಟ್ ಮಾತ್ರ ಬರುತ್ತದೆ. ಇನ್ನೂ 500 ಮೆಗಾ ವ್ಯಾಟ್ ಆಗಬೇಕಾಗಿತ್ತು. ಇವತ್ತು ಲೈನ್ ಮಾಡುವುದಕ್ಕೆ ಆಗಿಲ್ಲ ಎಂದು ಹೇಳಿದರು. ಮಾನ್ಯ ಅಧ್ಯಕ್ಷರೆ, ನಾನು ತಮ್ಮ ಗಮನಕ್ಕೆ ತರಲಿಕ್ಕೆ ಇಚ್ಛೆಪಡುವುದೇನೆಂದರೆ, ಕಳೆದ 10 ದಿನಗಳ ತನಕ ಈ ಕೇಸ್ ಸುಪ್ರೀಂಕೋರ್ಟನಲ್ಲಿತ್ತು. 33 ಕಿ.ಮೀ. ದೂರವನ್ನು ಯಾವುದೇ ಕಾರಣಕ್ಕೂ ಕಾಡನ್ನೂ ಕಡೆಯಬಾರದು ನಿರಂತರವಾಗಿ ಸುಪ್ರೀಂಕೋರ್ಟ್‌ನಲ್ಲಿ ವಾದ ನಡೆಯುತ್ತಿತ್ತು. ಕೊನೆಗೆ ಸುಪ್ರೀಂಕೋರ್ಟ್ ಆಗಬಹುದು 600 ಮೆಗಾ ವ್ಯಾಟ್ ಅಲ್ಲಿಂದ ಬರಬೇಕಾಗಿದ್ದು ನಿಂತು ಹೋಗುತ್ತದೆ. ಮಾಡಬೇಕೆಂದು ಸುಪ್ರೀಂಕೋರ್ಟ್ ಹೇಳಿದ ಮೇಲೆ ಮತ್ತೆ ಅವರು Green Tribunal ಗೆ ಹೋದರು. ಆ Green Tribunal ನಲ್ಲಿ ಮತ್ತೆ 5–6 ತಿಂಗಳು ನಡೆಯಿತು. ಈಗ 10 ದಿನಗಳ ಹಿಂದೆಯಷ್ಟೆ ಕೆಲವು condition ಮೇಲೆ, ನೀವು ಮರ ಕಡಿಯಬಾರದು, ಅದರ ಮೇಲೆ ಕಂಬದ ಎತ್ತರ ಇಷ್ಟು ಜಾಸ್ತಿ ಮಾಡಬೇಕು ಈ ಆಧಾರದಲ್ಲಿ ಇವತ್ತು Green Tribunal ಒಪ್ಪಿಕೊಂಡಿದೆ. ಅಲ್ಲಿ ಇವತ್ತು 3,000–3,500 ಜನರು ಕೆಲಸ ಮಾಡುತ್ತಿದ್ದಾರೆ. ಮೇ ಕೊನೆಯೊಳಗಾದರೂ ನಮ್ಮದು 33 ಕಿ.ಮೀ. ಏನು ಬಾಕಿ ಕೆಲಸ ಉಳಿದಿದೆ ಅದನ್ನು ಮಾಡಲೇಬೇಕಾದಂತಹ ತೀರ್ಮಾನವನ್ನು ಸರ್ಕಾರ ತೆಗೆದುಕೊಂಡಿದೆ. ಖಂಡಿತವಾಗಿ June first week ನಿಂದ UPCLನ ಉಡುಪಿಯ ಎರಡನೇ ಘಟಕದ power ಕೂಡ ನಮಗೆ ಸಿಗುತ್ತದೆ ಎನ್ನುವ ವಿಶ್ವಾಸ ನಮಗೆ ಇದೆ. ಇದು ಯಾವುದೇ ಸರ್ಕಾರದ ವಿಳಂಬದ ಕಾರಣಕ್ಕಾಗಿ ಆಗಿಲ್ಲ. ಸಹಜವಾಗಿ ಇದು ಪರಿಸರದ ಕಾರಣಕ್ಕಾಗಿ ನಿರಂತರವಾಗಿ ಅಲ್ಲಿ ಕೆಲವು ಪರಿಸರವಾದಿಗಳು fight ಮಾಡುತ್ತಾ, ಸುಪ್ರೀಂ ಕೋರ್ಟ್ ತನಕ ಹೋಗಿರುವ ಕಾರಣ, ಸುಪ್ರೀಂ

ಕೋರ್ಟ್ ಆದ ಮೇಲೆ Green Tribunal ಮೆಟ್ಟಿಲಿಗೆ ಹೋದ ಕಾರಣಕ್ಕಾಗಿ ಇದು delay ಆಗಿದೆ. ಇದರಲ್ಲಿ ಸರ್ಕಾರ delay ಮಾಡಿದೆ ಎನ್ನುವುದಕ್ಕೆ ಯಾವುದೇ ಆಧಾರ ಇಲ್ಲ.

ಶ್ರೀ ಹೆಚ್.ಡಿ. ರೇವಣ್ಣ :– 10 ದಿನಗಳ ಹಿಂದೆ ಸುಪ್ರೀಂ ಕೋರ್ಟ್‌ಗೆ ಹೋಗಿರುವುದು. ಮೂರು ವರ್ಷದಿಂದ ಏನಾಗಿತ್ತು ಎಂದು ದಯಮಾಡಿ ಸನ್ಮಾನ್ಯ ಸಚಿವರಿಗೆ ಕೇಳುತ್ತೇನೆ.

ಶ್ರೀ ಯು.ಟಿ. ಖಾದರ್ (ಮಂಗಳೂರು) :– ಮಾನ್ಯ ಅಧ್ಯಕ್ಷರೆ, even ಈಗ ಒಂದು ಬೋರ್‌ವೆಲ್‌ಗೂ ಕೂಡ, ಒಂದು ಬೋರ್‌ವೆಲ್ ಕೊರೆದ ತಕ್ಷಣ KEB ಯವರು transformer ಮಾಡಿದ್ದಕ್ಕೆ deposit ಕಟ್ಟಿ ಎಂದು ಹೇಳುತ್ತಾರೆ. ಮೊದಲು ಅದು 50,000 ರೂಪಾಯಿ ಇತ್ತು ಈಗ ಅದನ್ನು double ಮಾಡಿ ಒಂದು ಲಕ್ಷ ರೂಪಾಯಿ ಕಟ್ಟಬೇಕೆಂದು ಮಾಡಿದ್ದಾರೆ. 1.10 ಲಕ್ಷ ರೂಪಾಯಿ ಮಾಡಿದ್ದಾರೆ. ನಿಜವಾಗಿಯೂ ಮಾನ್ಯ ಎಸ್.ಎಂ. ಕೃಷ್ಣ ಸರ್ಕಾರ ಇದ್ದಾಗ scarcity ಇದ್ದಾಗ ಕಟ್ಟಬೇಕೆಂದು ಇಲ್ಲ ಎನ್ನುವ ಕಾನೂನು ಜಾರಿ ಮಾಡಿದ್ದರು. ಈಗ BESCOM ಅಧಿಕಾರಿಗಳು ಒಪ್ಪುವುದಿಲ್ಲ. ಇಲ್ಲ ನಮಗೆ order ಬರಲಿಲ್ಲ ಎಂದು ಹೇಳುತ್ತಾರೆ. ಆದಕಾರಣ ಅದನ್ನು ನೋಡಿಕೊಂಡು scarcity ಯಲ್ಲಿ ಬಹಳ emergency ಇರುವ ಬೋರ್‌ವೆಲ್‌ಗಳಿಗೆ BESCOM ನವರು connection ಕೊಡುವುದಿಲ್ಲ. ಒಂದು ಸ್ಪಷ್ಟವಾದ ನಿರ್ದೇಶನವನ್ನು ಕೊಡಬೇಕು. ಇಷ್ಟು ದಿವಸಗಳಲ್ಲಿ BESCOM ನವರೆಗೆ ವಿದ್ಯುಚ್ಛಕ್ತಿ ಕೊಡವಂತಹ ವ್ಯವಸ್ಥೆ ಮಾಡುವುದಕ್ಕೆ ತಮ್ಮ ಇಲಾಖೆ ಆದೇಶ ಕೊಡಬೇಕು.

ಶ್ರೀ ಸಿ.ಎಸ್. ಪುಟ್ಟೇಗೌಡ (ಶ್ರವಣಬೆಳಗೊಳ) :– ಮಾನ್ಯ ಅಧ್ಯಕ್ಷರೆ, ಒಂದು ನಿಮಿಷ, ಮಾನ್ಯ ಸಚಿವರು ಇದ್ದಾರೆ ಒಂದೇ ಒಂದು ವಿಷಯ. ನಮ್ಮ ಬಯಲುನಾಡಿನ ಪರಿಸ್ಥಿತಿ ಬೇರೆ. ನಿಮ್ಮ ಮಂಗಳೂರು, ಮಲೆನಾಡಿನಲ್ಲಿ ನಮ್ಮಷ್ಟು T.C. ಗಳಿಗೆ ತೊಂದರೆ ಇಲ್ಲ. ನಮ್ಮ ಬಯಲು ನಾಡಿನಲ್ಲಿ ತುಂಬಾ T.C. ಗಳು ಹಾಳಾಗಿ ಖಂಡಿತ ಬಹಳ ಹೂಂಕರಿಸುತ್ತಿದ್ದಾರೆ. ಆ ಕಡೆ ನೀವು ಗಮನಹರಿಸಿ ದಯಮಾಡಿ ಬಯಲು ನಾಡಿನಲ್ಲಿ ಹೊಸ T.C. ಗಳನ್ನು ಕೊಡದೇ ಇದ್ದರೆ, ಖಂಡಿತ ರೈತರೆಲ್ಲಾ ಪರಿಪಾಟಲಾಗುತ್ತಿದ್ದಾರೆ. ಅದರಲ್ಲೂ ಕುಡಿಯುವ ನೀರಿನ ಪರಿಸ್ಥಿತಿ ತುಂಬಾ ಕೆಟ್ಟ ಪರಿಸ್ಥಿತಿಯಲ್ಲಿದೆ. ವಿಶೇಷವಾಗಿ ಬಯಲು ನಾಡಿನ ಭಾಗಕ್ಕೆ ಹೆಚ್ಚಿನ T.C. ಕೊಡಬೇಕೆಂದು ತಮ್ಮ ಗಮನಕ್ಕೆ ತರುತ್ತೇನೆ.

ಶ್ರೀ ವೆಂಕಟರಮಣಪ್ಪ (ಪಾವಗಡ) :– ಮಾನ್ಯ ಅಧ್ಯಕ್ಷರೆ, ಸಮಾಜ ಕಲ್ಯಾಣ ಇಲಾಖೆ ವತಿಯಿಂದ 2–3 ವರ್ಷ ಆದರೂ ಕೂಡ ಬೋರ್‌ವೆಲ್‌ಗೆ

ಸರ್ವೀಸ್ ಕೊಡದೇ ಇದ್ದರೆ ಆ ಬೋರ್‌ವೆಲ್ ಹಾಕಿ ಏನು ಪ್ರಯೋಜನ ಹೇಳಿ? 2 ವರ್ಷ ಆಗಿದೆ. ಒಂದೊಂದು ಬೋರ್‌ವೆಲ್‌ಗೆ ಸರ್ವೀಸ್ ಕೊಡುವುದೇ ಇಲ್ಲ. ಸರ್ಕಾರ ದುಡ್ಡು ಕೊಟ್ಟು ಬೋರ್‌ವೆಲ್ ಕೊರೆಸುತ್ತದೆ. ಬಡವರಿಗೆ ಗಂಗಾ ಕಲ್ಯಾಣ ಯೋಜನೆಯಡಿಯಲ್ಲಿ 2–3 ವರ್ಷ ಆದರೂ ಕೂಡ ಸರ್ವೀಸ್ ಕೊಡುವುದಿಲ್ಲ. ಇವತ್ತು ಸರ್ಕಾರ ಇಷ್ಟು ಹಣ ಖರ್ಚು ಮಾಡಿ ಬೋರ್‌ವೆಲ್ ಕೊರೆಸಿ ಆ ಬಡವರಿಗೆ ಆಗತಕ್ಕಂಥ ಅನ್ಯಾಯ ಯಾರು ಸರಿ ಮಾಡುವುದು? ಇವರು ಬೋರ್‌ವೆಲ್ ಕೊರೆಸುತ್ತಾರೆ. ನೀವು ಕರೆಂಟ್ ಕೊಡುವುದಿಲ್ಲ. ಮೇಡಂ, ಒಂದು ಬೋರ್‌ವೆಲ್‌ಗೆ ಸರ್ವೀಸ್ ಕೊಡುವುದಕ್ಕೆ 2 ವರ್ಷವಾದರೂ ಆಗಿಲ್ಲ. ಆಮೇಲೆ 2 ವರ್ಷ ಆದ ಮೇಲೆ ಬೋರ್ ಒಣಗಿಹೋಗಿದೆ ನೀರು ಬರುವುದಿಲ್ಲ ಎಂದು ಹೇಳುತ್ತಾರೆ. ಆ ಬಡವರಿಗೆ ಆಗುವಂತಹ ಅನ್ಯಾಯ ನೋಡಿ ನಿಮ್ಮ ಇಬ್ಬರಿಗೂ ಶಾಪ ತಪ್ಪುವುದಿಲ್ಲ. ಸರ್ವೀಸ್ ಬೇಗ ಕೊಡದೇ ಇದ್ದರೆ ಇವರು ಬೋರ್ ಕೊರೆಸುತ್ತಾರೆ ಅವರು ಇವತ್ತು ನಾಳೆ ನೀರು ಬರುತ್ತದೆ ಎಂದು ಬಡವರು ಇವರ ಕಡೆಯೇ ನೋಡಿ ನೋಡಿ ಬೋರ್ ಆಯಿತು ಎಂದು ಅವರ ಶಾಪ ನಿಮಗೆ ಆಗುತ್ತದೆ. ಬೇಗ ಸರ್ವೀಸ್ ಕೊಡುವುದಕ್ಕೆ ಏನು ತೊಂದರೆ? ಉತ್ತರ ಕೊಡಿ.

ಶ್ರೀ ಬಿ.ಸಿ. ಪಾಟೀಲ್ (ಹಿರೇಕೆರೂರು) :– ಮಾನ್ಯ ಅಧ್ಯಕ್ಷರೆ, ಪಂಪ್‌ಸೆಟ್ ಏನಾಗಿದೆ ಎಂದರೆ, ಮೊದಲು ಒಂದು T.C. ಹಾಕುವಾಗ 5–10 ಪಂಪ್‌ಸೆಟ್ ಇರುತ್ತಿತ್ತು. ಈಗ ಏನು ಮಾಡಿದ್ದಾರೆಂದರೆ, ಅಕ್ರಮ–ಸಕ್ರಮ ಮಾಡುತ್ತೇವೆಂದು ಹೇಳಿ ಒಂದೊಂದು ಪಂಪ್‌ಸೆಟ್‌ಗೆ 5–10 ಇದ್ದಲ್ಲಿ 15–20–25 ವರೆಗೂ ಆಗಿದೆ. ಆದರೆ T.C. ಏನಿತ್ತು, 25 ಕಿಲೋ ವ್ಯಾಟ್ ಇದ್ದಿದ್ದು 25 ಇದೆ. 65 ಇದ್ದಿದ್ದು 65 ಇದೆ. ಈಗ ಅದೇನು ಆಗುತ್ತದೆ ಎಂದರೆ, over load ಆಗಿ ಅಷ್ಟು T.C. ಗಳು ವಾರಕ್ಕೆ ಎರಡು ಸಾರಿ ಮೂರು ಸಾರಿ ಸುಡುತ್ತಿರುತ್ತವೆ. ಆಮೇಲ ನಾವು K.E.B. ಅಧಿಕಾರಿಗಳಿಗೆ ಕೇಳಿದರೆ ಅವರು ನಮಗೆ ಬಜೆಟ್ ಇಲ್ಲ, expansion ಮಾಡುವುದಕ್ಕೆ ಆಗುವುದಿಲ್ಲ ಎಂದು ಪ್ರತಿ ಬಾರಿ ಅಧಿಕಾರಿಗಳಿಂದ ಉತ್ತರ ಬರುತ್ತಿದೆ. ಆದ್ದರಿಂದ ಈಗ ಏನು ಅಕ್ರಮ – ಸಕ್ರಮ ಮಾಡಿದ್ದೀರಿ ಅಲ್ಲಿ ಆ ಪಂಪ್‌ಸೆಟ್ ಅನುಗುಣವಾಗಿ ಅದಕ್ಕೆ ಎಷ್ಟು ಕಿಲೋವ್ಯಾಟ್ ವಿದ್ಯುತ್ ಅವಶ್ಯಕತೆ ಇದೆ ಆ ಮಟ್ಟದಲ್ಲಿ T.C. ಗಳನ್ನು enhance ಮಾಡಬೇಕು. ಅದರ capacity enhance ಮಾಡಬೇಕೆಂದು ತಮ್ಮ ಮೂಲಕ ಸಚಿವರನ್ನು ವಿನಂತಿಸುತ್ತಿದ್ದೇನೆ.

ಕು. ಶೋಭಾ ಕರಂದ್ಲಾಜೆ (ಇಂಧನ ಸಚಿವರು) :– ಮಾನ್ಯ ಅಧ್ಯಕ್ಷರೆ, ಇವತ್ತು ಇಲ್ಲಿ ಮಾನ್ಯ ಶಾಸಕರು ಕೇಳಿದ ಪ್ರಶ್ನೆಗೆ ಮಾನ್ಯ ಬಿ.ಸಿ. ಪಾಟೀಲರವರೇ ಉತ್ತರ ಕೊಟ್ಟಿದ್ದಾರೆ. ಎಲ್ಲಿ ಅಕ್ರಮ ಪಂಪ್‌ಸೆಟ್‌ಗಳ ಸಂಖ್ಯೆ ಜಾಸ್ತಿಯಾಗುತ್ತದೆ ಸಹಜವಾಗಿ ಅಲ್ಲಿ T.C. ಗಳು ಸುಡುವುದು ಸತ್ಯ ಎನ್ನುವುದು ನಮಗೆ ಗೊತ್ತಿದೆ. ಏಕೆಂದರೆ ನಮ್ಮ ಇಲಾಖೆ ಅಲ್ಲಿ ಸಕ್ರಮ ಪಂಪ್‌ಸೆಟ್ ಎಷ್ಟಿದೆ ಎನ್ನುವ ಆಧಾರದಲ್ಲಿ T.C. ಯನ್ನು ಕೊಡಿಸಿದ್ದಾರೆ. ಈಗ 10 ಪಂಪ್‌ಸೆಟ್ ಇದ್ದರೆ ಆ 10 ಪಂಪ್‌ಸೆಟ್‌ಗೆ ಎಷ್ಟು capacityಯ T.C. ಬೇಕು ಅಷ್ಟನ್ನು ಪೂರೈಸುತ್ತಾರೆ. ಆದರೆ ಅಕ್ರಮ ಪಂಪ್‌ಸೆಟ್‌ಗೆ ಇನ್ನೂ 15 add ಆಗಿರುತ್ತದೆ. ಆಗ ಸಹಜವಾಗಿ ಈ T.C. ಗೆ overload ಆಗುತ್ತದೆ. T.C. ಸುಡುತ್ತದೆ. ಅದಕ್ಕಾಗಿ ನಾನು ಕಳೆದ ಅಧಿವೇಶನದಲ್ಲೂ ಹೇಳಿದೆ ದಯಮಾಡಿ ಅಕ್ರಮ ಪಂಪ್‌ಸೆಟ್‌ಅನ್ನು ನಾವೆಲ್ಲರೂ ಸಕ್ರಮ ಮಾಡಿಕೊಳ್ಳೋಣ ಆಗ ಆ capacity ಆಧಾರದಲ್ಲಿ ನಾವು T.C. ಅನ್ನು ಪೂರೈಸುತ್ತೇವೆ ಎಂದು.

ಶ್ರೀ ವೆಂಕಟರಾವ್ ನಾಡಗೌಡ :– ಮೇಡಂ T.C.ಗೆ ದುಡ್ಡು ಕಟ್ಟಿದ್ದೇವೆ. ಅಕ್ರಮ – ಸಕ್ರಮದಲ್ಲಿ ಅವುಗಳನ್ನಾದರೂ ಕೊಡಿಸಿ.

ಶ್ರೀ ಬಿ.ಸಿ. ಪಾಟೀಲ್ :– ಅಕ್ರಮ–ಸಕ್ರಮದೊಳಗೆ ದುಡ್ಡು ಕಟ್ಟಿಸಿಕೊಂಡಿದ್ದಾರೆ T.C.enhance ಆಗಿಲ್ಲ.

ಕು. ಶೋಭಾ ಕರಂದ್ಲಾಜೆ :– ಕೆಲಸ ನಡೆಯುತ್ತಿದೆ. ಒಂದು ನಿಮಿಷ, ಇನ್ನು ಎರಡನೆಯದು, ಮಾನ್ಯ ಸದಸ್ಯರು ಗಂಗಾ ಕಲ್ಯಾಣದ ಬಗ್ಗೆ ಹೇಳಿದರು. ಕಳೆದ 6–7 ತಿಂಗಳ ಹಿಂದೆ ನಾವು review meeting ತೆಗೆದುಕೊಂಡ ಸಂದರ್ಭದಲ್ಲಿ ಈ ರಾಜ್ಯದಲ್ಲಿ 35,000 ಗಂಗಾ ಕಲ್ಯಾಣ ಯೋಜನೆಗೆ ಬೋರ್‌ವೆಲ್ ಕೊರೆದಿದ್ದು ಬಾಕಿ ಇತ್ತು. 30,000 SC-ST ಮತ್ತು backward classದ್ದು, 5,000 ಅಲ್ಪಸಂಖ್ಯಾತರದ್ದು, ಒಟ್ಟು 35,000 ಬಾಕಿ ಇತ್ತು. ಎಷ್ಟು ವರ್ಷಗಳಿಂದ? ಕಳೆದ 6 ವರ್ಷಗಳಿಂದ accumulate ಆಗಿ ಬಂದಿದೆ. ನಮಗೆ ಗೊತ್ತಿದೆ ಸತ್ಯ. ಕಳೆದ 6 ವರ್ಷಗಳಿಂದ ನೀವು ಬೋರ್‌ವೆಲ್ ಕೊರೆದು ಕರೆಂಟ್ connection ಕೊಡದೇ ನೀರು ತೆಗೆಯದೇ ಇದ್ದರೆ 6 ವರ್ಷಗಳಲ್ಲಿ ಆ ಬೋರ್‌ವೆಲ್‌ನಲ್ಲಿ 50% ಒಣಗಿರುತ್ತದೆ. 50% ನೀರು ಇರುವುದಿಲ್ಲ. ಇದು ಸತ್ಯ. ಅಂದರೆ ನಿರಂತರವಾಗಿ ಬೋರ್‌ವೆಲ್ ಕೊರೆಯುತ್ತಾ ಹೋಗುವುದು ಅದಕ್ಕೆ connection ಕೊಡುವುದಿಲ್ಲ ಇದು ನಿರಂತರವಾಗಿ ನಡೆಯುತ್ತಾ ಇತ್ತು. ಆ ಸಂದರ್ಭದಲ್ಲಿ ಹಿಂದಿನ ಮುಖ್ಯಮಂತ್ರಿಗಳು review meeting ತೆಗೆದುಕೊಂಡ

ಸಂದರ್ಭದಲ್ಲಿ ಮಾನ್ಯ ಅಧ್ಯಕ್ಷರೆ, ಈ ಬೋರ್‌ವೆಲ್‌ಗಳಿಗೆ ಕನಿಷ್ಠ ಪಕ್ಷ 35,000 ದಲ್ಲಿ 25,000 ತನಕವೂ ಎಲ್ಲಾ ಬೋರ್‌ವೆಲ್‌ಗಳಿಗೆ connection ಆಗುವ ತನಕ ದಯಮಾಡಿ ಇದನ್ನು ನೀವು ಪರಿಶೀಲನೆ ಮಾಡಬೇಕು ಮತ್ತು ದೊಡ್ಡ ಯುದ್ಧೋಪಾದಿಯಲ್ಲಿ ಮಾಡಬೇಕು ಅಲ್ಲಿಯತನಕ ಹೊಸ ಬೋರ್‌ವೆಲ್‌ಗಳನ್ನು ಕೊರೆಯಬಾರದೆಂದು ಸೂಚನೆಯನ್ನೂ ಕೊಟ್ಟಿದ್ದರು. ಅದರ ಆಧಾರದ ಮೇಲೆ 25000 ಟಾರ್ಗೆಟ್ ಇಟ್ಟುಕೊಂಡು ಕಳೆದ 10 ತಿಂಗಳುಗಳಿಂದ ನಾವು ಈ ಕೆಲಸವನ್ನು ಮಾಡುತ್ತಿದ್ದೇವೆ. ಸುಮಾರು 25000 ನಾವು ಒಪ್ಪಿಕೊಂಡಿದ್ದೆವು. ಈಗಾಗಲೇ 20000 ಬೋರ್‌ವೆಲ್‌ಗಳಿಗೆ ನಾವು ಕನೆಕ್ಷನ್ ಕೊಟ್ಟಿದ್ದೇವೆ. ಒಟ್ಟು 35000 accumulation ಇತ್ತು. ಇದರಲ್ಲಿ 20000 ಕನೆಕ್ಷನ್ ಕೊಟ್ಟಿದ್ದೇವೆ, ಇನ್ನು 15000 ಬಾಕಿ ಇವೆ. ಅದನ್ನೂ ಸಹ ಇನ್ನು ನಾಲ್ಕೈದು ತಿಂಗಳುಗಳಲ್ಲಿ ನಾವು ಪೂರ್ಣ ಮಾಡುತ್ತೇವೆ. ಆಮೇಲೆ ಹೊಸ ಬೋರ್‌ವೆಲ್‌ಗಳನ್ನು ಕೊರೆದ ತಕ್ಷಣ immediate connection ಕೊಟ್ಟರೆ ಇದಕ್ಕೊಂದು ಪರಿಹಾರ ಸಿಗುತ್ತದೆ. ಇಲ್ಲವಾದರೆ ಇದು ಕಳೆದ ಐದಾರು ವರ್ಷಗಳ ಕಾಲ accumulate ಆಗಿದೆ. ಬೋರ್‌ವೆಲ್ ಕೊರೆದರೆ ಅರ್ಧಕ್ಕೆ ನೀರು ಬರುವುದಿಲ್ಲ. ಆರು ವರ್ಷಗಳಲ್ಲಿ ಅದು ಬತ್ತಿ ಹೋಗಿರುತ್ತದೆ. ಸುಮ್ಮನೆ ಬೋರ್‌ವೆಲ್ ಕೊರೆಯುವುದು ದಂಡವಾಗುತ್ತದೆ. ಅದಕ್ಕಾಗಿ ದಯಮಾಡಿ ಬೋರ್‌ವೆಲ್ ಕೊರೆದ within six months ಇದಕ್ಕೆ ಕನೆಕ್ಷನ್ ಆಗಬೇಕೆನ್ನುವುದನ್ನು ಎಲ್ಲಾ ಇಲಾಖೆಗಳು ಸೇರಿ ನಾವು ಬಹಳ ಸ್ಪಷ್ಟವಾಗಿ ಕಾನೂನು ಪಾಲನೆ ಮಾಡಬೇಕೆಂದು ನನ್ನ ವಿನಂತಿ.

(ಗೊಂದಲ)

ಶ್ರೀ ಎ. ನಾರಾಯಣಸ್ವಾಮಿ (ಸಮಾಜ ಕಲ್ಯಾಣ ಸಚಿವರು) :– 2005-06 ರ ಅರ್ಧ, ಮುಕ್ಕಾಲು ಮೀಟರ್ ಅನ್ನು ಬಿಟ್ಟು ಉಳಿದ 100, 200 ಮೀಟರ್ ಉಳಿದಿರುವ ಎಲ್ಲಾ ಬೋರ್‌ವೆಲ್‌ಗಳಿಗೆ ಕನೆಕ್ಷನ್ ಕೊಟ್ಟಿದೆ.

(ಗೊಂದಲ)

ಉಪಾಧ್ಯಕ್ಷರು :– ಖಾಶೆಂಪುರ್‌ರವರೇ ಮುಂದುವರೆಸಿ. ಇಲ್ಲಿ ಪರಸ್ಪರ ಚರ್ಚೆ ಬೇಡ. ತಾವು ಕುಳಿತುಕೊಳ್ಳಿ.

ಶ್ರೀ ಬಂಡೆಪ್ಪ ಖಾಶೆಂಪೂರ್ :– ನಮ್ಮ ಭಾಗದ ಕಡೆ 6 ತಾಸು ಕರೆಂಟ್ ಕೊಡುವುದಕ್ಕೆ ಇವರೇನು ಹೇಳಿದ್ದರು. ಅದರಲ್ಲಿ ನಮ್ಮ ಕಡೆ 4 ತಾಸು ಕರೆಂಟ್ ಕೊಡುತ್ತಿದ್ದಾರೆ ಎಂದು ಹೇಳಿದೆ, ಇಡೀ ಕರ್ನಾಟಕ ಎಂದು ನಾನು ಹೇಳಿಲ್ಲ. ಬೀದರ್‌ನಲ್ಲಿ ಎಲ್ಲಾ ಭಾಗ. ಅದಕ್ಕೆ ಮೊದಲು ಇಂಧನ ಸಚಿವರಿಗೆ ಧನ್ಯವಾದಗಳನ್ನು ಹೇಳುತ್ತೇನೆ. At least ಅವರು ಸತ್ಯವನ್ನು ಹೇಳಿದ್ದಾರೆ.

ಶ್ರೀ ಹೆಚ್.ಡಿ. ರೇವಣ್ಣ :- ಪಕ್ಕದವರನ್ನು ಕೇಳಿ ಎಂದು ಹೇಳುವಿರಲ್ಲಾ, ನಾನು ಎಷ್ಟು ಗಂಟೆ ಕರೆಂಟ್ ಕೊಡುತ್ತಿದ್ದೆ. ನಾವು 10 ತಾಸು ಕರೆಂಟ್ ಕೊಡುತ್ತಿದ್ದೆವು. ಸಿಟಿಯಲ್ಲಿ 24 ಗಂಟೆ ಕರೆಂಟ್ ಕೊಡುತ್ತಿದ್ದೆವು. ನೀವು ಒಂದು ಬಾರಿ ಕಡತವನ್ನು ಪೂರ್ಣವಾಗಿ ತೆಗೆದು ನೋಡಿ. ಒಂದು ದಿನ ಬೇಕಾದರೆ ಚರ್ಚೆ ಮಾಡೋಣ.

ಕು. ಶೋಭಾ ಕರಂದ್ಲಾಜೆ (ಇಂಧನ ಸಚಿವರು) :- ಕೆಲವು ಕಡೆ 4 ಗಂಟೆ ಕಾಲ ಹಗಲು ಹೊತ್ತಿನಲ್ಲಿ ಕರೆಂಟ್ ಕೊಡುತ್ತೇವೆ. 6 ಗಂಟೆಯಲ್ಲಿ 2 ಗಂಟೆ ರಾತ್ರಿಯ ವೇಳೆಯಲ್ಲಿ ಅದನ್ನು compensate ಮಾಡುವುದಕ್ಕೆ ನಾವು ಕೊಡುತ್ತಿದ್ದೇವೆ.

ಶ್ರೀ ಬಂಡೆಪ್ಪ ಖಾಶೆಂಪೂರ್ :- ಅವರು ಒಂದು ಸತ್ಯವನ್ನು ಒಪ್ಪಿಕೊಂಡಿದ್ದಾರೆ. ಅದಕ್ಕೆ ಅವರಿಗೆ ಧನ್ಯವಾದಗಳು. ಅವರು 4 ತಾಸು, ಮೂರುವರೆ ತಾಸು ಕರೆಂಟ್ ಕೊಡುತ್ತಿದ್ದೇವೆಂದು ಹೇಳಿದ್ದಾರೆ. ಕೆಲವು ಭಾಗಗಳಲ್ಲಿ infrastructure ಇಲ್ಲದಿರುವ ಕಡೆ ಕಡಿಮೆ ಆಗುತ್ತಿದೆ, ಎಂದು ಹೇಳುತ್ತಿದ್ದಾರೆ. ನಾಲ್ಕು ದಿವಸಗಳಲ್ಲಿ infrastructure improve ಆಗುತ್ತದೆ. 6–8 ತಾಸು ಕರೆಂಟ್ ಬರುತ್ತದೆ. ನಾಲ್ಕು ದಿವಸಗಳಲ್ಲಿ infrastructure ಕೆಟ್ಟು ಹೋದರೆ ಮೂರು ತಾಸು ಕರೆಂಟ್ ಬರುತ್ತದೆ. ಇವರ ಹತ್ತಿರ ಖರೀದಿ ಮಾಡಲಿಕ್ಕೆ ಹಣವಿಲ್ಲ. ಅವರು ಅಲ್ಲಿ ಯಾವ allotment ಕೊಡುತ್ತಿದ್ದಾರೆ. ಆ allotment ಕಡಿತವನ್ನು ಇವರು ಇಲ್ಲಿ ಮಾಡುತ್ತಿದ್ದಾರೆ. ಅದು ಸತ್ಯ, ಅದನ್ನು ಒಪ್ಪಿಕೊಳ್ಳಬೇಕು. ಎಲ್ಲಿಯೂ infrastructure ಒಂದೇ ದಿವಸದಲ್ಲಿ improve ಆಗುವುದಿಲ್ಲ. It is a routine procedure. ರೇವಣ್ಣನವರು ಇದ್ದಾಗ ಹೇಗೆ 10 ತಾಸು ಕರೆಂಟ್ ಕೊಟ್ಟರು. ನೀವು ಎರಡು ತಿಂಗಳುಗಳ ಮೊದಲು 6 ತಾಸು ಕರೆಂಟ್ ಹೇಗೆ ಕೊಟ್ಟಿರಿ? ಅದೇ infrastructure ಅಲ್ಲವೇ? ನಾಲ್ಕು ತಾಸಿಗೆ ಹೇಗೆ ತಂದಿರಿ? ಖರೀದಿ ಮಾಡಲಿಕ್ಕೆ ನಿಮ್ಮ ಹತ್ತಿರ ಹಣವಿಲ್ಲ ಎಂದು ನೀವು ಒಪ್ಪಿಕೊಳ್ಳಿ. ಮಾನ್ಯ ಮುಖ್ಯಮಂತ್ರಿಗಳು ಇಲ್ಲೇ ಇದ್ದಾರೆ. ಏಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ, ಮಾನ್ಯ ಮುಖ್ಯಮಂತ್ರಿಗಳೆ, ನಮ್ಮ ಬೀದರ್‌ನಲ್ಲಿ only four hours current ಬರುತ್ತಿದೆ. ರೈತರು ಹಗಲು ರಾತ್ರಿ ನಮಗೆ ಫೋನ್ ಮಾಡಿ ಬಹಳಷ್ಟು ಅವರ ಸಂಕಟವನ್ನು ಹೇಳಿಕೊಳ್ಳುತ್ತಿದ್ದಾರೆ. ಹಾಗಾಗಿ ಇದರ ಬಗ್ಗೆ ಸರ್ಕಾರ ಬಹಳ ಗಂಭೀರವಾಗಿ ಚಿಂತನೆ ಮಾಡಬೇಕು. ಕೃಷಿ ಇಲಾಖೆಯ ಮಂತ್ರಿಗಳು ಇಲ್ಲೇ ಇದ್ದಾರೆ. ಕೃಷಿ ಇಲಾಖೆಯಿಂದ crops loss ಸುಮಾರು ನಾಲ್ಕು ಸಾವಿರ ಕೋಟಿ ಚಿಲ್ಲರೆ ಆಗಿದೆಯೆಂದು ನೀವು ಅಂದಾಜು ಮಾಡಿದ್ದೀರಿ.

ಇವತ್ತು ಒಂದು ರೂಪಾಯಿಯನ್ನು crop compensation ಕೊಟ್ಟಿರುವಿರಾ? ಕೇಂದ್ರ ಸರ್ಕಾರ ಏಕೆ? ನೀವು ಮೊದಲು ರಾಜ್ಯ ಸರ್ಕಾರದವರು ಧಾವಿಸಿರಿ. Agriculture ಬಜೆಟ್ ಬೇರೆ ಯಾವುದೇ ರಾಜ್ಯದಲ್ಲಿಯೂ ಬರುತ್ತಿಲ್ಲ. Only Karnataka. ಅದು ಬಿಜೆಪಿ ಸರ್ಕಾರದವರು ಮುಂದೆ ಬಂದು ನಾವು ರೈತರ ಪರವಾಗಿ ಇದ್ದೇವೆ ಎಂದು ತೋರಿಸಬೇಕು. ಎಲ್ಲದಕ್ಕೂ ಕೇಂದ್ರ ಸರ್ಕಾರವನ್ನೇಕೆ ತೋರಿಸುತ್ತೀರಿ. ಇವತ್ತು ಸರ್ಕಾರ 75% ನಷ್ಟು ಕೇಂದ್ರ ಸರ್ಕಾರದ ಬಜೆಟ್ ಮೇಲೆ ನಡೆಯುತ್ತಿದೆ. ಏಕೆಂದರೆ ನಾವು ಕೊಪ್ಪಳದಲ್ಲಿ by-election ಚುನಾವಣೆಗೆ ಹೋದಾಗ ಅಲ್ಲಿ ಯಾವ ರೀತಿಯ ಬಿತ್ತನೆಯೂ ಆಗಿರಲಿಲ್ಲ. ನಾನು ಖರೀಫ್ ಬೆಳೆ ತೆಗೆದು ರಬಿ ಬೆಳೆ ಸಿದ್ಧ ಮಾಡಿರುವಿರಾ ಎಂದು ಕೇಳಿದೆ. ಅಲ್ಲಿ ಖರೀಫ್ ಬೆಳೆಯೂ ಇಲ್ಲ, ರಬಿ ಬೆಳೆ ಬೆಳೆಯೂ ಇಲ್ಲ. ಅಲ್ಲಿ ಅವರು ಬೆಳೆಯನ್ನೇ ಬಿತ್ತಿಲ್ಲ. ಅಂಥ ಜಾಗದಲ್ಲಿ ಕೇಂದ್ರ ಸರ್ಕಾರದವರ ನೆರವು ಬರುತ್ತದೋ ಬಿಡುತ್ತದೋ ಗೊತ್ತಿಲ್ಲ. ಒಂದು ಲಕ್ಷದ ಎರಡು ಸಾವಿರ ಕೋಟಿ ಬಜೆಟ್ ಮಾಡಿದಂಥ ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಸದಾನಂದಗೌಡರು ದೊಡ್ಡ ಮನಸ್ಸು ಮಾಡಿ ಉತ್ತರದಲ್ಲಿ ಎಕರೆಗೆ 10,000 ರೂಪಾಯಿಗಳಂತೆ ಇಡೀ ಬರಗಾಲದಲ್ಲಿ ರೈತರಿಗೆ ಕೊಡುವುದಾಗಿ announce ಮಾಡಬೇಕೆಂದು ನಾನು ಹೇಳಬಯಸುತ್ತೇನೆ. ಇಲ್ಲಿಯವರೆಗೆ ಒಂದು ಲಕ್ಷ ಕೋಟಿ ರೂಪಾಯಿಗಳಷ್ಟು ಯಾರೂ ಘೋಷಣೆ ಮಾಡಿಲ್ಲ. ತಾವು ಘೋಷಣೆ ಮಾಡಿದ್ದೀರಿ ಅದಕ್ಕಾಗಿ ಈ ಮಾತನ್ನು ಹೇಳುತ್ತಿದ್ದೇನೆ. ಎಲ್ಲೆಲ್ಲಿ ಬರಗಾಲ ಘೋಷಣೆ ಮಾಡಿದ್ದೀರಿ, ಅಲ್ಲಿನ ಬ್ಯಾಂಕ್‌ಗಳಲ್ಲಿ Short Term Loan ಇರಲಿ, Medium Term Loan ಇರಲಿ, ಆ loans ಈ ವರ್ಷ ಮಾತ್ರ ವಸೂಲಾತಿ ಮಾಡಬಾರದೆಂದು ನಾವು ಪದೇ ಪದೇ ಹೇಳಿದ್ದೇವೆ. ಆದರೆ ಎಲ್ಲಾ ಕಡೆ ವಸೂಲಾಗಿದೆ. Automatic ಆಗಿ ಅವರ ಅಕೌಂಟ್‌ನಲ್ಲಿ ಹಣ ಕಟ್ ಆಗಿ ಅವರ ಹಣ ವಾಪಾಸ್ಸು ಬರುತ್ತಿದೆ. ಅಂದರೆ ನೀವು ಯಾವ ರೀತಿ ಇವತ್ತು ರೈತರಿಗೆ ಬರಗಾಲದಲ್ಲಿ ಸಹಾಯ ಮಾಡುತ್ತಿರುವಿರಿ? 1% ಬಡ್ಡಿ ಎಂದು ಹೇಳಿದ್ದೀರಿ. ಈಗ 0% ಬಡ್ಡಿ ಎಂದರೂ ಆ ರೈತ ಇಂಥ ಸಂಕಷ್ಟದಲ್ಲಿದ್ದಾಗ ಅವನ ಸಾಲವನ್ನು ಮುಂದಿನ ವರ್ಷಕ್ಕೆ ಹಾಕಿ ಎಂದು ಹೇಳಿ ಎಂದು ಎಲ್ಲಾ ಕಡೆ ಆದೇಶ ಹೋಗಿದೆ. ಯಾವುದೇ ಬಿ.ಸಿ.ಸಿ, ಬ್ಯಾಂಕ್, ಕೋ-ಆಪರೇಟಿವ್ ಬ್ಯಾಂಕ್‌ಗಳಾಗಲಿ ಇದಕ್ಕೆ ಸ್ಪಂದಿಸಿಲ್ಲ. ಅದರ ಬಗ್ಗೆ ನೀವು ಗಂಭೀರವಾಗಿ ಒಂದು ರಿಪೋರ್ಟ್ ತರಿಸಿಕೊಂಡು ಅದರ ಮೇಲೆಯೂ ಸ್ವಲ್ಪ ಚಿಂತನೆ ಮಾಡಬೇಕೆಂದು ಸನ್ಮಾನ್ಯ ಮುಖ್ಯಮಂತ್ರಿಗಳಲ್ಲಿ ನಾನು ಹೇಳಬಯಸುತ್ತೇನೆ. ವಿಶೇಷವಾಗಿ ಇವತ್ತು crop insurance ಇದೆ. Crop

insurance ಅದರದೆ ಆದಂಥ ಒಂದು procedure ನಲ್ಲಿ ಆಗುತ್ತದೆ. ಆದರೆ ಇಂಥ ಒಂದು ಸಮಯದಲ್ಲಿ ಸರ್ಕಾರ ಇದರ ಬಗ್ಗೆ ಮುತುವರ್ಜಿ ವಹಿಸಿ ಆ crop cutting experiments ಎಲ್ಲಾ ಬೇಗ ಮಾಡಿ...

ಶ್ರೀ ಉಮೇಶ್ ಕತ್ತಿ (ಕೃಷಿ ಸಚಿವರು) :- ಅವರು ಕೃಷಿ ಸಚಿವರಾಗಿದ್ದರು. ಕೃಷಿಯಲ್ಲಿ ಬರಗಾಲದ ತೊಂದರೆಯಲ್ಲಿ 4000 ಘೋಷಣೆ ಮಾಡಿ ಬಡ್ಡಿಯನ್ನು ವಸೂಲು ಮಾಡಿದ್ದೀರಿ ಎಂದು ಜೋರಾಗಿ ಹೇಳುತ್ತಿದ್ದಾರೆ. ಅವರಿದ್ದಾಗ ಏನು ಮಾಡಿದ್ದರು ಎಂದು ಹೇಳಿಬಿಟ್ಟು ಮಾತನಾಡಿದರೆ ಒಳ್ಳೆಯದು.

ಶ್ರೀ ಬಂಡೆಪ್ಪ ಖಾಶೆಂಪೂರ್ :- ಮಾನ್ಯ ಸಚಿವರಿಗೆ ನಾನು ಹೇಳಬಯಸುತ್ತೇನೆ. ನಾನು ಇದ್ದಾಗ ಇದೇ Crop Insurance ಎರಡು ಸಲ put up ಮಾಡಿದ್ದೆನು. ಬರಗಾಲದಲ್ಲಿ ಅಲ್ಲ, in general ಆಗಿ ಮಾಡಿದ್ದೆನು, ಸ್ವಲ್ಪ ಕೇಳಿ. ಎರಡು ಸಲ ಎಷ್ಟು crop cutting experiment ಆಯಿತು? ಇರುವ staff ನಲ್ಲಿ 20% excess crop cutting ಆಗಬೇಕೆಂದು ಆದೇಶವನ್ನು ಕೊಟ್ಟಿದ್ದೆವು. ಅದರಂತೆ ಏನು ಮೂರು ತಿಂಗಳುಗಳ ಕಾಲದ ಖರೀಫ್ ಬೆಳೆ ಇದೆ, ಉದ್ದು ಮತ್ತಿತರೆ ಬೆಳೆ ಇವೆ, ಅವು ಡಿಸೆಂಬರ್‌ವರೆಗೆ ಅವರಿಗೆ ಎಷ್ಟು loss ಆಗಿರುತ್ತದೆ ಅಷ್ಟು ಹಣ ಅವರಿಗೆ ಹೋಗಬೇಕು, ಮೊದಲನೆ ಕಂತು ಹಣ ಹೋಗಬೇಕು ಎಂದು ಮಾಡಿದ್ದೆನು. ಎರಡನೆಯದು Long term crop ಏನಿರುತ್ತವೆ, ಈಗ ತೊಗರಿ ಇತ್ಯಾದಿಗಳಿಗೆ ಏಪ್ರಿಲ್-ಮೇ ತಿಂಗಳವರೆಗೆ ಕೊಡಬೇಕು. ಅದನ್ನು ನಾನು ಕೃಷಿ ಸಚಿವನಾಗಿದ್ದಾಗಲೇ ಮಾಡಿದ್ದೆನು. ನೀವು ಬಂದ ಮೇಲೆ ಅದನ್ನೆಲ್ಲಾ ತೆಗೆದು ಹಾಕಿ ಅವನ್ನೆಲ್ಲಾ ಒಂದು ವರ್ಷ ಮುಂದಕ್ಕೆ ಹಾಕಿದ್ದೀರಿ. ಹಾಗಾಗಿ ಇಂಥ ಒಂದು ಸಮಸ್ಯೆಯ ಬಗ್ಗೆ ತಾವು ಗಂಭೀರವಾಗಿ ತೆಗೆದುಕೊಳ್ಳಬೇಕು. ಆಗ ನಾವು normal time ನಲ್ಲಿ ಎರಡು ಸಲ ಮಾಡಿದ್ದೇವೆ. ಇವತ್ತು ಇಂಥ serious time ನಲ್ಲಿ ನೀವ್ಯಾಕೆ ಸ್ವಲ್ಪ special ಆಗಿ depute ಮಾಡಿ immediate Insurance amount ಅನ್ನು ರೈತರಿಗೆ ಕೊಡುವಂಥ ಪ್ರಯತ್ನವನ್ನು ನೀವು ಏಕೆ ಮಾಡುತ್ತಿಲ್ಲ? We are already in March. ಇದನ್ನು ಡಿಸೆಂಬರ್ ತಿಂಗಳಿನಲ್ಲೇ ಕೊಡಬೇಕಾಗಿತ್ತು. ಎಲ್ಲೋ ಒಂದು ಕಡೆ ನಿರ್ಲಕ್ಷ್ಯ ಮಾಡಿ ಸ್ವಲ್ಪ ಜನರಿಗೆ ದೆಹಲಿಯಲ್ಲಿ ಬಿಟ್ಟು ಅಲ್ಲಿ ಸ್ವಲ್ಪ ಇಲ್ಲಿ ಸ್ವಲ್ಪ ಕೊಟ್ಟು, ಯೋಚನೆ ಮಾಡುವುದಕ್ಕೆ time ಇಲ್ಲ. ನಮ್ಮ ಮಾನ್ಯ ಕೃಷಿ ಮಂತ್ರಿಗಳು ಇತ್ತೀಚೆಗೆ ಟಿ.ವಿ.ಯಲ್ಲಿ ಹೆಚ್ಚಾಗಿ ಕಾಣಿಸಿಕೊಳ್ಳುತ್ತಿಲ್ಲ.

ದೆಹಲಿಗೆ ಅಲ್ಲಿ ಇಲ್ಲಿ ಹೋಗಿಲ್ಲವೆಂದು ಅನಿಸುತ್ತದೆ. ಮಾನ್ಯ ಅಧ್ಯಕ್ಷರೆ crop insurance system ನಲ್ಲಿ ಸರ್ಕಾರ ಬಹಳಷ್ಟು ಮುತುವರ್ಜಿ ವಹಿಸಿ ಅಗತ್ಯವಾದ ಕೆಲಸ ಮಾಡುವ ಪ್ರಯತ್ನವನ್ನು ಇಂಥ ಸಮಯದಲ್ಲಿ ಮಾಡಬೇಕೆಂದು ನಾನು ಹೇಳುವುದಕ್ಕೆ ಬಯಸುತ್ತೇನೆ. ವಿಶೇಷವಾಗಿ ಬಹಳಷ್ಟು ರೈತರು ದೊಡ್ಡ ಪ್ರಮಾಣದಲ್ಲಿ ರೈತರ ಸಾಲವನ್ನು ಮನ್ನಾ ಮಾಡುತ್ತಾರೆ ಎಂಬ ನಿಟ್ಟಿನಲ್ಲಿ ನಿರೀಕ್ಷೆ ಇಟ್ಟುಕೊಂಡಿದ್ದರು. ಆದರೆ ಮಾನ್ಯ ಮುಖ್ಯಮಂತ್ರಿಗಳು 0% ಎಂದು ಹೇಳಿ ಎಲ್ಲದಕ್ಕೂ ತೆರೆ ಎಳೆದರು. ರೈತರು ಇವತ್ತು ಬರಗಾಲದ ಸ್ಥಿತಿಯಲ್ಲಿದ್ದಾರೆ. At least ಬರಗಾಲದಲ್ಲಿರುವ ರೈತರಿಗಾದರೂ ಸಾಲ ಮನ್ನಾ ಮಾಡಿ, 10,000 ರೂ. ಗಳಂತೆ ಕೊಡಿ ಯಾವುದರಲ್ಲಾದರೂ this way or that way. ವಿಶೇಷವಾಗಿ ಹಿಂದೆ ನಾವೆಲ್ಲ Task force chairman ಆಗಿ ಬರಗಾಲದ ಯಾವುದೋ ಒಂದು ಯೋಜನೆ ಮಾಡಿದಾಗ ಚೆಕ್ ಡ್ಯಾಂ, ಗೋ ಕಟ್ಟೆ ಇಂಥದ್ದೆಲ್ಲಾ ಬಹಳಷ್ಟು ತೆಗೆದುಕೊಳ್ಳುತ್ತಿದ್ದೆವು. ಇವತ್ತು ಕುಡಿಯುವ ನೀರಿಗೆ ಬಿಟ್ಟು no check dam, no ಗೋ ಕಟ್ಟೆ, ಏನಿಲ್ಲ. ಏಕೆಂದರೆ ನಾವು ಮುಂದಿನದನ್ನು ಆಲೋಚನೆ ಮಾಡಿ ಇವತ್ತು ಗಿಡ ಹಚ್ಚುವ ಕಾರ್ಯಕ್ರಮವಾಗಲಿ, ಚೆಕ್ ಡ್ಯಾಂ ಆಗಲಿ, ನೀರಿನ ಟ್ಯಾಂಕ್ ಕಟ್ಟುವಂತಹ ಯೋಜನೆಗಳನ್ನಾಗಲಿ ವಿಶೇಷವಾಗಿ ಈ ಒಂದು ಸಮಯದಲ್ಲಿ ತೆಗೆದುಕೊಳ್ಳಬೇಕೆಂದ ನಿಟ್ಟಿನಲ್ಲಿ ಹೇಳುತ್ತಿದ್ದೇನೆ. ವಿಶೇಷವಾಗಿ ಇವತ್ತಿನ ದಿನದಲ್ಲಿ 24 hours ಎಲ್ಲಾ ಅಧಿಕಾರಿಗಳು ಹಳ್ಳಿಗಳಲ್ಲಿ ಇರಬೇಕೆಂಬ ಆದೇಶವನ್ನು ಮಾನ್ಯ ಮುಖ್ಯಮಂತ್ರಿಗಳು ಕೊಡಬೇಕು. ಕಾರ್ಯದರ್ಶಿಗಳಾಗಿರಬಹುದು, ಪಿ.ಡಿ.ಓ ಗಳಾಗಿರಬಹುದು, ಎಲ್ಲರೂ ಕೂಡ ಹಳ್ಳಿಗಳಲ್ಲಿರಬೇಕು, ಯಾರ್‍ಯಾರು ಹಳ್ಳಿಗಳಲ್ಲಿರುವುದಿಲ್ಲವೋ ಅವರನ್ನು ತಕ್ಷಣ ಸಸ್ಪೆಂಡ್ ಮಾಡುತ್ತೇವೆಂಬ ಸಂದೇಶ ಹೋಗಬೇಕು. ಏಕೆಂದರೆ ಇದರಿಂದ ಸ್ವಲ್ಪ ಬಿಗುವಾಗುತ್ತದೆ. ಜನರಿಗೆ ನೀರು ಕೊಡದಿದ್ದರೂ ಅಧಿಕಾರಿಗಳು ಹಳ್ಳಿಗೆ ಬಂದು ಸ್ವಲ್ಪ ಮಾತನಾಡಿಸುತ್ತಾರೆಂದು ಸಮಾಧಾನಪಟ್ಟುಕೊಳ್ಳುತ್ತಾರೆ. ಮಾತನಾಡುವವರು ಇಲ್ಲಾ, ನೀರು ಕುಡಿಸುವವರು ಇಲ್ಲ ಅಂದರೆ ಪರಿಸ್ಥಿತಿ ತುಂಬಾ ವಿಕೋಪಕ್ಕೆ ಹೋಗುತ್ತದೆ. ಬಿ.ಪಿ. ಜಾಸ್ತಿಯಾಗುತ್ತದೆ. ಏಕೆಂದರೆ ಎಲ್ಲಾ ಪತ್ರಿಕೆಗಳಲ್ಲಿ ನೋಡಿ ನಮ್ಮ ಕಡೆಯವರು ಕೂಲಿ ಏನೂ ಇಲ್ಲವೆಂಬ ನಿಟ್ಟಿನಲ್ಲಿ ಬಹಳಷ್ಟು ಜನ ಬಾಂಬೆ, ಹೈದರಾಬಾದ್, ಗೋವಾ ಹೀಗೇ ವಲಸೆ ಹೋಗುತ್ತಿದ್ದಾರೆ. ಬದುಕು ಕಟ್ಟಿಕೊಳ್ಳಲು ಭೂಮಿ ಮಾರುತ್ತಿರುವ ರೈತರು ಎಂದು ಪತ್ರಿಕೆಯಲ್ಲಿ ಬಂದಿದೆ. ಇಂತ ಪರಿಸ್ಥಿತಿಯಲ್ಲಿ ಕೆಲವು ಏರಿಯಾಗಳಲ್ಲಿ ನಿಮ್ಮ ಬಿಜಾಪುರದಲ್ಲಿ ಮೂರು ರೂಪಾಯಿಗೆ ಒಂದು

ಕೊಡ ನೀರು ಕೊಡುತ್ತಿದ್ದಾರೆ. ಈ ಪರಿಸ್ಥಿತಿಯನ್ನು ಇಂಥ ಸರ್ಕಾರದಲ್ಲಿ ನೋಡಬೇಕಾಗಿತ್ತಾ? ಇಷ್ಟು ದಿವಸ ಏನು ಆಗಿದೆಯೋ ಆಗಲಿ ಈಗಲಾದರೂ ತಕ್ಷಣ ಸರ್ಕಾರ ಇದರ ಮೇಲೆ action plan ಮಾಡಿ 24 hours ನೀರು, ಮೇವು ಹಾಗು ಉದ್ಯೋಗ ಈ ಮೂರರ ಬಗ್ಗೆ ಚಿಂತನೆ ಮಾಡಿ ತಕ್ಷಣ ಈ ರಾಜ್ಯದ ಪರವಾಗಿ ಹಾಗೂ ಜನರ ಪರವಾಗಿ ಇವರು ಕೆಲವು ಕಾರ್ಯಕ್ರಮಗಳನ್ನು ಹಮ್ಮಿಕೊಂಡರೆ ಈಗಲಾದರೂ ಸ್ವಲ್ಪ ಸುಧಾರಣೆಯಾಗುತ್ತದೆಯೆಂದು ಹೇಳಿ ವಿಶೇಷವಾಗಿ ತಮಗೆ ಧನ್ಯವಾದಗಳನ್ನು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಉಪಾಧ್ಯಕ್ಷರು :– ಈಗ ಗಮನ ಸೆಳೆಯುವ ಸೂಚನೆ. ಶ್ರೀ ಯು.ಟಿ. ಖಾದರ್‌ರವರು.

ಶ್ರೀ ಯು.ಟಿ. ಖಾದರ್ :– ಮಾನ್ಯ ಉಪಾಧ್ಯಕ್ಷರೆ, ...

ಉಪಾಧ್ಯಕ್ಷರು :– Reply ಈಗ ಮಾಡೋಣವೇ?

(ಗೊಂದಲ)

ಶ್ರೀ ಹೆಚ್.ಡಿ. ರೇವಣ್ಣ (ಹಾಸನ) :– ಬಜೆಟ್ ಶುರು ಮಾಡುವುದು ನಾಳೆ ಬೆಳಿಗ್ಗೆ 10.00 ಗಂಟೆಗೆ ನಾವೇನು ಮಾತನಾಡಬಾರದ? ಹೋದ ಬಾರಿ ಮಾನ್ಯ ಮುಖ್ಯಮಂತ್ರಿಗಳು ದೆಹಲಿಗೆ ನಿಯೋಗ ಕರೆದುಕೊಂಡು ಹೋಗುತ್ತೇವೆ ಎಂದಿದ್ದರು. ಆದರೆ ಯಾವ ನಿಯೋಗವು ಇಲ್ಲ, ಏನೂ ಇಲ್ಲ. ಬರಗಾಲದ ಬಗ್ಗೆ ನಾವು ನಿಯಮ 60 ರಲ್ಲಿ ಕೊಟ್ಟು ಇವತ್ತಿನವರೆಗೆ ಚರ್ಚೆ ಆಗಿಲ್ಲ. ಬಿ.ಎ.ಸಿ ಯಲ್ಲಿ ತೀರ್ಮಾನವಾಗಿರುವಂತೆ ನಾಳೆ ಮಾಡಿಲಿ, ನಾನೇನು ಬೇಡ ಎನ್ನುವುದಿಲ್ಲ. ಬೇಕಾದರೆ ರಾತ್ರಿ 2.00 ಗಂಟೆವರೆಗೆ ಕುಳಿತುಕೊಳ್ಳೋಣ.

ಶ್ರೀ ಟಿ.ಬಿ. ಜಯಚಂದ್ರ (ಶಿರಾ) :– ಉಪಾಧ್ಯಕ್ಷರೆ, ನಮಗೆ ದಿನಾಂಕ : 28 ಮತ್ತು 29 ಎರಡೇ ದಿವಸ ಸಿಕ್ಕುವುದು.

ಶ್ರೀ ಡಿ.ವಿ. ಸದಾನಂದಗೌಡ (ಮುಖ್ಯಮಂತ್ರಿಗಳು) :– ಅದಕ್ಕೆ ನಾಳೆ ಬೆಳಿಗ್ಗೆ ಶುರು ಮಾಡೋಣ.

ಶ್ರೀ ಹೆಚ್.ಡಿ. ರೇವಣ್ಣ (ಹಾಸನ) :– ಇಲ್ಲಾ ಸಾರ್, ದಯವಿಟ್ಟು ನಾಳೆ ಬೆಳಿಗ್ಗೆ ಮಾತನಾಡಿ. ಪತ್ರಿಕೆಗಳಿಗೆಲ್ಲಾ ಕವರ್ ಆಗಬೇಕು.

ಶ್ರೀ ಡಿ.ವಿ. ಸದಾನಂದಗೌಡ :– ಇವತ್ತು ಸ್ವಲ್ಪ ಸಮಯ ಬೇಕಾದರೆ ಒಂದೆರಡು ಜನ ಮಾತನಾಡಲಿ ನಾನು reply ಕೊಟ್ಟು ಮುಗಿಸಿಬಿಡುತ್ತೇನೆ.

ಶ್ರೀ ಹೆಚ್.ಡಿ. ರೇವಣ್ಣ (ಹಾಸನ) :– ಉಪಾಧ್ಯಕ್ಷರೆ, ಇನ್ನೂ ನಾನು ಮಾತನಾಡಬೇಕು. ಶ್ರೀ ಶಿವಲಿಂಗೇಗೌಡರು ಮಾತನಾಡುವವರಿದ್ದಾರೆ.

ಉಪಾಧ್ಯಕ್ಷರು :– ಶ್ರೀ ರೇವಣ್ಣನವರೇ ಬಹಳ ಸುದೀರ್ಘವಾಗಿ ಮಾತನಾಡಿದ್ದೀರಿ.

ಶ್ರೀ ಹೆಚ್.ಡಿ. ರೇವಣ್ಣ :– ಕುಡಿಯುವ ನೀರಿನ ಬಗ್ಗೆ ಕೊಟ್ಟಿದ್ದೇವಲ್ಲ? ಅದರ ಬಗ್ಗೆ ನಾವು ಮಾತನಾಡಬೇಕು.

(ಮಾನ್ಯ ಸಭಾಧ್ಯಕ್ಷರು ಪೀಠವನ್ನು ಅಲಂಕರಿಸಿದರು)

ಅಧ್ಯಕ್ಷರು :– ಶ್ರೀ ರೇವಣ್ಣನವರೇ ನೀವು ಮಾತನಾಡಿ. ಬೆಳಿಗ್ಗೆ ಅದನ್ನೇ ಕೇಳಿದ್ದು Calling attention ಆದ ನಂತರ ಕರೆಯುತ್ತೇನೆ. ಇವತ್ತು ಮುಗಿಸುತ್ತೇನೆ. ಬೆಳಿಗ್ಗೆ ಬಿ.ಎ.ಸಿ. ಯಲ್ಲಿ ತೀರ್ಮಾನವಾಗಿದೆ. ರಾತ್ರಿ 8.00 ಗಂಟೆಯವರೆಗೆ ಅಧಿವೇಶನವನ್ನು ನಡೆಸುವುದೆಂದು.

ಶ್ರೀ ಹೆಚ್.ಡಿ. ರೇವಣ್ಣ :– ಮಾನ್ಯ ಸಭಾಧ್ಯಕ್ಷರೆ, 123 ತಾಲ್ಲೂಕುಗಳಲ್ಲಿ ಬರಗಾಲ ಇನ್ನೊಂದು ಕಡೆ ಸರ್ಕಾರವೇ ಘೋಷಣೆ ಮಾಡಿದೆ, ನಾವಲ್ಲ. ಸರ್ಕಾರ 123 ತಾಲ್ಲೂಕುಗಳಲ್ಲಿ ಬರಗಾಲ ಘೋಷಣೆ ಮಾಡಿ ಈಗಾಗಲೇ ಸುಮಾರು ಎರಡು ತಿಂಗಳುಗಳಾಗಿದೆ. ನಾವು ಹಿಂದೆ ನಿಯಮ 60 ರಡಿಯಲ್ಲಿ ತಂದು ನಿಯಮ 69 ರಡಿಯಲ್ಲಿ ಚರ್ಚೆಗೆ ಕೊಟ್ಟರು. ಸನ್ಮಾನ್ಯ ಮುಖ್ಯಮಂತ್ರಿಗಳು ಬರಗಾಲದ ಬಗ್ಗೆ ನಾವು ಈ ರಾಜ್ಯದಲ್ಲಿ ಏನು ತೀರ್ಮಾನಗಳನ್ನು ತೆಗೆದುಕೊಳ್ಳಬೇಕು ಮತ್ತು ಕೇಂದ್ರ ಸರ್ಕಾರಕ್ಕೆ ಒತ್ತಾಯ ಮಾಡುವುದಕ್ಕಾಗಿ ನಿಯೋಗ ಹೋಗೋಣವೆಂದು ಹೇಳಿದರು. ಆದರೆ ಇಲ್ಲಿಯವರೆಗೆ ಒಂದು ಚಕಾರ ಕೂಡ ಇಲ್ಲ. ಇವತ್ತು 123 ತಾಲ್ಲೂಕುಗಳಲ್ಲಿ ಒಂದು ಕಡೆ ಬರಗಾಲ ಇದ್ದರೆ ಇನ್ನೊಂದು ಕಡೆ ಕುಡಿಯುವ ನೀರಿನದು, ಮತ್ತೊಂದು ಕಡೆ electricity ಯದು, ಕೆಲವು ಕಡೆ ರೈತರು ಹಾಕಿದ ಬೆಳೆಗೆ ಇವತ್ತು ಕನಿಷ್ಟ ಬೆಲೆ ತೆಗೆದುಕೊಳ್ಳುವುದಕ್ಕಾಗುತ್ತಿಲ್ಲ. ಇವತ್ತು ಕೆಲವು ಕಡೆ ನಾವು ಹೇಳುವುದಲ್ಲ ನೀವೇ ಪತ್ರಿಕೆಗಳಲ್ಲಿ ನೋಡುತ್ತಿದ್ದೀರಿ. ಕುಡಿಯುವ ನೀರಿನ ಪರಿಸ್ಥಿತಿ ಏನಿದೆ ಮತ್ತೆ ಅದರ ಜೊತೆಗೆ ಬರಗಾಲ. ಇವತ್ತು ನಮ್ಮ ರಾಜ್ಯದಲ್ಲಿ ಕುಡಿಯುವ ನೀರಿನ ಪರಿಸ್ಥಿತಿ ಏನಾಗಿದೆ ಎಂದರೆ ಕೆಲವು ಕಡೆ 15–20 ಲಕ್ಷ ಕೊಟ್ಟಿದ್ದಾರೆ. ಇನ್ನೂ ಕೆಲವು ಬಿ.ಜೆ.ಪಿ ಎಂ.ಎಲ್.ಎ. ಗಳು ಇರುವ ಕಡೆ ಪ್ರಭಾವಿಗಳು ಇರುವ ಕಡೆ ಒಂದೊಂದು ಕೋಟಿ ಕೊಟ್ಟಿದ್ದೀರಿ. ನಮಗೆಲ್ಲಾ ರೂ. 10–20 ಲಕ್ಷ ಕೊಟ್ಟು ಬೋರ್ ಹೊಡೆಸಿ ಎಂದರೆ ಎಲ್ಲಿ ತೆಗೆಸುವುದು.

ಶ್ರೀ ಆರ್.ಅಶೋಕ್ :– ಮಂಡ್ಯದಲ್ಲಿ ರೂ. 30 ಲಕ್ಷ ಕೊಟ್ಟಿದ್ದೇವೆ.

ಶ್ರೀ ಹೆಚ್.ಡಿ. ರೇವಣ್ಣ :– ಮಂಡ್ಯದಲ್ಲಿ ಶಕ್ತಿ ಇದೆ ಕೊಟ್ಟಿದ್ದೀರಿ. ಬೇಕಾದರೆ ಶ್ರೀ ಶಿವಲಿಂಗೇಗೌಡರವರನ್ನು ಕೇಳಿ 15–20 ಲಕ್ಷ ಕೊಟ್ಟಿದ್ದಾರೆ. ನಾವು 20 ಲಕ್ಷಕ್ಕೆ, ನನಗೆ ಮೂರು ತಾಲ್ಲೂಕುಗಳು ಬರುತ್ತವೆ. ಮೂರು

ತಾಲ್ಲೂಕುಗಳಲ್ಲಿ ಉದಾಹರಣೆಗೆ ಹೇಳುವುದಾದರೆ ಈ ಮೂರು ತಾಲ್ಲೂಕುಗಳು dry land ಆಗಿದೆ. ಹಾಸನದಲ್ಲಿ ಎರಡು ತಾಲ್ಲೂಕು, ಚನ್ನರಾಯಪಟ್ಟಣದಲ್ಲಿ ಒಂದು ತಾಲ್ಲೂಕು ಹಾಗೂ ಹೊಳೆನರಸೀಪುರದಲ್ಲಿ ಒಂದು ತಾಲ್ಲೂಕು ನನಗೆ ಬರುತ್ತವೆ. ಇವೆಲ್ಲಾ ನೀರಾವರಿ ಇಲ್ಲದಿರುವ ಪ್ರದೇಶಗಳು. ಕುಡಿಯುವ ನೀರಿಗೆ ಕನಿಷ್ಠ ಎರಡು ಕೋಟಿಗಳನ್ನಾದರೂ ಕೊಡದಿದ್ದರೆ ಹೇಗೆ? ಒಂದು ವಿಧಾನಸಭಾ ಕ್ಷೇತ್ರಕ್ಕೆ ಅಂದರೆ ಎಲ್ಲಿ ಬರಗಾಲ ಇದೆ ಅಲ್ಲಿಗೆ ಕೊಡಿ. ಬರಗಾಲದ ಪ್ರದೇಶಗಳು 123 ತಾಲ್ಲೂಕುಗಳು ಮಾತ್ರ ಅಲ್ಲ. ಕೆಲವು ಕಡೆ ಶ್ರೀ ಜೀವರಾಜ್ ರವರು ಹೇಳಿದರು. ಈಗ ಅವರಿಲ್ಲ ಎಲ್ಲೋ ಹೊರಗಡೆ ಹೋಗಿರಬಹುದು. ಕೆಲವು ಕಡೆ ನೀರಿಲ್ಲ. ಎಲ್ಲಾ ಕಡೆ ಕುಡಿಯುವ ನೀರನ್ನು ಕೊಡುವುದಕ್ಕೆ ಏನು ತೊಂದರೆಯಾಗಿದೆ? Supplementary ಬಜೆಟ್‌ನಲ್ಲಿ 100 ಕೋಟಿ ಇಟ್ಟಿದ್ದರೆ ಏನಾಗುತ್ತಿತ್ತು? ಈಗಲೂ ಸಮಯ ಮೀರಿಲ್ಲ ದಯಮಾಡಿ ಮಾನ್ಯ ಮುಖ್ಯಮಂತ್ರಿಗಳೇ ಇಷ್ಟೇ ಸಾಲ ಮಾಡಿದ್ದೀರಿ. ಸುಮಾರು 21,000 ಸಾವಿರ ಕೋಟಿ ಸಾಲವಾಗಿದೆ. ಕುಡಿಯುವ ನೀರಿಗೋಸ್ಕರ ಇನ್ನೊಂದು 200 ಕೋಟಿ ಸಾಲ ಮಾಡಿ ಏನಾಗುತ್ತದೆ? ಒಂದು ಕಡೆ ಉದ್ಯೋಗ ಖಾತರಿ ಹಣ ಇಲ್ಲಾ. ಉದ್ಯೋಗ ಖಾತರಿ ಹಣ ಸುಮಾರು 300 ಕೋಟಿ ಬಾಕಿ ಇದೆ ನಮ್ಮಲ್ಲಿ. ಬರಗಾಲದಲ್ಲಿ ಉದ್ಯೋಗ ಖಾತರಿ ಹಣ ಬಂದಿದೆಯೇ? ಒಂದೊಂದು ಜಿಲ್ಲಾ ಪಂಚಾಯತ್‌ನಲ್ಲಿ ಉದ್ಯೋಗ ಖಾತರಿಯಲ್ಲಿ ಕೆಲಸ ಮಾಡಿಸಿ ಇವತ್ತು ಸುಮಾರು 20, 30, 40 ಕೋಟಿ pending ಇದೆ. ಕೇಂದ್ರ ಸರ್ಕಾರಕ್ಕೆ ನಮ್ಮ ಗ್ರಾಮೀಣಾಭಿವೃದ್ಧಿ ಕಾರ್ಯದರ್ಶಿಗಳು ಸುಮಾರು ಮೂರು ಬಾರಿ ಪತ್ರ ಬರೆದಿದ್ದಾರೆ. ಮೂರು ಬಾರಿ ಪತ್ರ ಬರೆದಿದ್ದಾರೆಂದು, ಬಜೆಟ್ ಪ್ರತಿ ತರಿಸಿದ್ದೇನೆ. ಮೂರು ಸಾರಿಯಿಂದ 300 ಕೋಟಿ ರೂ.ಗಳು ಬಾಕಿಯಿದೆ. 300 ಕೋಟಿ ರೂ. ಗಳು ಬಾಕಿಯಿರುವುದು ಇವತ್ತಿನವರೆಗೆ ಇದೆಯೇ? ಉದ್ಯೋಗ ಖಾತರಿಯಲ್ಲೂ ಹಣವಿಲ್ಲ. ಕುಡಿಯುವ ನೀರಿಗೂ ಹಣವಿಲ್ಲ. ಮತ್ತೆ ಬರಗಾಲದ ಕಾಮಗಾರಿ ಏನು ತೆಗೆದುಕೊಂಡಿದ್ದೀರಿ? ಉದಾಹರಣೆಗೆ ಕುಡಿಯುವ ನೀರಿಗೆ ಕೇಂದ್ರ ಸರ್ಕಾರದ ಗೈಡ್‌ಲೈನ್ಸ್ ಪ್ರಕಾರ ಹೋದರೆ ಯಾವ ಹಳ್ಳಿಯಲ್ಲೂ ಒಂದು ಬೋರ್‌ವೆಲ್ ತೆಗೆಸುವುದಕ್ಕೆ ಆಗುವುದಿಲ್ಲ. ಮಿನಿ ವಾಟರ್ ಸಪ್ಲೈ ಹಾಗೂ ಮೇಜರ್ ವಾಟರ್ ಸಪ್ಲೈ ಮಾಡುವುದಕ್ಕಾಗುವುದಿಲ್ಲ. 2011-12ನೇ ಸಾಲಿನಲ್ಲಿ 1500 ಕೋಟಿ ಕುಡಿಯುವ ನೀರಿಗೆ ಕ್ರಿಯಾ ಯೋಜನೆ ಮಾಡಿ ಕೇಂದ್ರ ಸರ್ಕಾರಕ್ಕೆ ಕಳುಹಿಸಿಕೊಟ್ಟಿದೇವೆಂದು ಹೇಳುತ್ತಾರೆ. 1500 ಕೋಟಿಯಲ್ಲಿ 1424 ಕೋಟಿ ರೂ.ಗಳ ಅನುದಾನ ಕೇಂದ್ರ ಸರ್ಕಾರದಿಂದ ಬಿಡುಗಡೆಯಾಗಿದೆಯೆಂದು ಹೇಳುತ್ತಾರೆ. ಕೊಟ್ಟಿರುವ ಹಣದಲ್ಲಿ ಸುಮಾರು 806 ಕೋಟಿ ಮಾತ್ರ ಖರ್ಚು

ಮಾಡಿ ಬಾಕಿ ಹಣವನ್ನು ಖರ್ಚು ಮಾಡಿಲ್ಲ. ಏಕೆ ಖರ್ಚು ಮಾಡಿಲ್ಲವೆಂದರೆ ಕೇಂದ್ರ ಸರ್ಕಾರದ ಗೈಡ್‌ಲೈನ್ ಪ್ರಕಾರ ಮಾಡುವುದಕ್ಕಾಗುವುದಿಲ್ಲ. ಆದುದರಿಂದ ದಯಮಾಡಿ ಕೆಲವು ಗೈಡ್‌ಲೈನ್ಸ್‌ಗಳನ್ನು ಸಡಿಲ ಮಾಡಬೇಕೆಂದು ಕೇಂದ್ರ ಸರ್ಕಾರಕ್ಕೆ ಮನವರಿಕೆ ಮಾಡಬೇಕಾಗುತ್ತದೆ. ಗೈಡ್‌ಲೈನ್ಸ್ ಅನ್ನು ಸಡಿಲ ಮಾಡದಿದ್ದರೆ ಎಲ್ಲೂ ಕುಡಿಯುವ ನೀರಿನ ವ್ಯವಸ್ಥೆ ಮಾಡುವುದಕ್ಕಾಗುವುದಿಲ್ಲ. ಕೇಂದ್ರ ಸರ್ಕಾರ ನಿಮಗೆ ಎಷ್ಟು ಹಣ ಕೊಟ್ಟರೂ ಮಾಡುವುದಕ್ಕಾಗುವುದಿಲ್ಲ. ಅದಕ್ಕಾಗಿ ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರ ಗಮನಕ್ಕೆ ಹಾಗೂ ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತರುತ್ತಿದ್ದೇನೆ. ಅಷ್ಟೇ ಅಲ್ಲದೆ non-plan ನಲ್ಲಿ ಕೇಂದ್ರ ಸರ್ಕಾರದಿಂದ ಅಪ್ರೂವಲ್ ಆಗಿ ಬರುವಷ್ಟರಲ್ಲಿ ನಮ್ಮ ರೈತರೆಲ್ಲಾ ಸತ್ತು ಹೋಗಿರುತ್ತಾರೆ. ಸ್ವಲ್ಪ ಹಣವನ್ನು non-plan ನಲ್ಲಿಯಾದರೂ ಕೊಡಿ. ಬೋರ್‌ವೆಲ್ ತೆಗೆಸುವುದಕ್ಕೆ ಒಂದೊಂದು ಮತಕ್ಷೇತ್ರಕ್ಕೆ 50 ಲಕ್ಷ ರೂ.ಗಳಂತೆ ಕನಿಷ್ಠ 2 ಕೋಟಿ ರೂಪಾಯಿಗಳನ್ನಾದರೂ ಕೊಡಿ. Irrespective of the party ಕೊಡಿ. ಕಾಂಗ್ರೆಸ್ ಇರಬಹುದು, ಬಿಜೆಪಿ ಇರಬಹುದು, ಜೆಡಿ(ಎಸ್) ಇರಬಹುದು. ಬೆಂಗಳೂರು ನಗರದಲ್ಲಿ ಮಾನ್ಯ ಸುರೇಶ್ ಕುಮಾರ್ ಅವರು ಇದ್ದಾರೆ. ಬೆಂಗಳೂರಿನಲ್ಲಿ ಕುಡಿಯುವ ನೀರು ಬಂದು 3 ತಿಂಗಳಾಗಿದೆ ಎಂದು ಪೇಪರ್‌ನಲ್ಲಿ appear ಆಗಿದೆ. ಗ್ರಾಮೀಣ ಪ್ರದೇಶದ ಪರಿಸ್ಥಿತಿ ಏನಾಗಿದೆ ಎಂದರೆ ಅಲ್ಲಿನ ಸ್ಥಿತಿಯನ್ನು ಯಾರೂ ಪತ್ರಿಕೆಯಲ್ಲಿ ಬರೆಸುವುದಕ್ಕಾಗುವುದಿಲ್ಲ. ಬೆಂಗಳೂರಿನಲ್ಲಿ ಬೆಳಗಾದರೆ 100 ಜನ ಕುಡಿಯುವ ನೀರಿಗಾಗಿ ಬಿಂದಿಗೆ ಹಿಡಿದುಕೊಂಡು ಹೋಗುವುದರಿಂದ ಪೇಪರ್‌ನಲ್ಲಿ ಬರೆಸುತ್ತಾರೆ. ಉದಾಹರಣೆಗೆ ನಮ್ಮ ರೈತರದು ಆ ರೀತಿಯಾಗುವುದಿಲ್ಲ. "ರಾಮನಗರದ ಬದುಕು ರೇಷ್ಮೆ ಅಲ್ಲ" ರಾಮನಗರದಲ್ಲಿ ಸಂಪೂರ್ಣವಾಗಿ ರೇಷ್ಮೆ ಬೆಳೆ ಬೆಳೆದಿರುವ ರೈತರು ಸಂಪೂರ್ಣವಾಗಿ ಸತ್ತು ಹೋಗಿದ್ದಾರೆ. ರಾಮನಗರ ಡ್ರೈ ಏರಿಯಾ ಆಗಿರುವುದರಿಂದ ಅಲ್ಲಿನ ರೇಷ್ಮೆ ಬೆಳೆಯುವ ರೈತರ ಪರಿಸ್ಥಿತಿ ಏನಾಗಿದೆ ಗೊತ್ತೇ? ಹಾಸನದಲ್ಲಿ ಶುಂಠಿ, ಚಾಮರಾಜ ನಗರದಲ್ಲಿ ಶುಂಠಿ, ಅರಿಶಿನ ಬೆಳೆದ ರೈತರು, ಕಷ್ಟದಲ್ಲಿದ್ದಾರೆ. ಶುಂಠಿ ಕ್ವಿಂಟಾಲ್‌ಗೆ 1400 ರೂ. ಇದ್ದದ್ದು, ಈಗ 200–300 ಆಗಿದೆ. ರೈತರು ಇಂದು ಗದ್ದೆಯಲ್ಲಿ ಬೆಳೆದ ಬೆಳೆ ತೆಗೆಯುವುದಕ್ಕಾಗುತ್ತಿಲ್ಲ. ಜಮೀನಿನಲ್ಲಿ ಬೆಳೆದಂತಹ ಶುಂಠಿ ಬೆಳೆಯನ್ನು ತೆಗೆಯುವುದಕ್ಕಾಗುತ್ತಿಲ್ಲ. ಒಂದು ಕಡೆ ಬರಗಾಲ ಪರಿಸ್ಥಿತಿ. ಹೆಚ್ಚಿನ ಬೆಲೆ ನೀಡಿ ಜಿಲ್ಲಾಧಿಕಾರಿಗಳು ಖರೀದಿ ಮಾಡಿದ್ದಾರಾ ಎಂಬುದನ್ನು ದಯಮಾಡಿ ನೀವೇ ಹೇಳಿ, ಶುಂಠಿಯಾಗಲಿ, ಅರಿಶಿನವಾಗಲಿ,

ಆಲೂಗಡ್ಡೆಯಾಗಲಿ, ಇವತ್ತು 77 ಸಾವಿರ ಹೆಕ್ಟೇರ್ ಪ್ರದೇಶದಲ್ಲಿ ಆಲೂಗೆಡ್ಡೆ ಬೆಳೆದರು. ಮೂರು ವರ್ಷದಿಂದ ಸಂಪೂರ್ಣ 250 ಕೋಟಿ ರೂ. ಗಳು ನಷ್ಟವಾಯಿತು. ಈಗ ಆಲೂಗೆಡ್ಡೆ ಬೆಳೆ ಬಿಟ್ಟರು. ಶುಂಠಿ ಹಾಕುವುದಕ್ಕೆ ಹೋದರು. ಆದರೂ ಪರಿಸ್ಥಿತಿ ಏನಾಗಿದೆ ಕ್ವಿಂಟಾಲ್‌ಗೆ 1400 ರೂ.ಇದ್ದದ್ದು ರೂ. 200–300 ಆಗಿದೆ. 200–300 ರೂ.ಗಳಿಗೆ ಕೇಳುವವರೇ ಇಲ್ಲ. ಮಾನ್ಯ ಸಭಾಧ್ಯಕ್ಷರೆ, ಪೇಪರ್‌ನಲ್ಲಿ ಏನು ಹೇಳುತ್ತಿದ್ದಾರೆಂದರೆ ಆಂಧ್ರದಲ್ಲಿ ಹೊಗೆಸೊಪ್ಪು ಬೆಳೆಗಾರರಿಗೆ ಬೆಲೆ 250 ರೂ.ಗಳಂತೆ. ಕರ್ನಾಟಕದಲ್ಲಿ ಬೆಳೆದಂತಹ ರೈತರಿಗೆ ಆ ಬೆಲೆ ಇಲ್ಲ. ನೋಡಿ, ಇದು ಪತ್ರಿಕೆಯ ವರದಿಯಾಗಿರುವುದರಿಂದ ನಿಮಗೆ ಹೇಳುತ್ತಿದ್ದೇನೆ. ಇದು ತಪ್ಪು ವರದಿನೋ, ಏನೋ ನನಗೆ ಗೊತ್ತಿಲ್ಲ.

ಶ್ರೀ ಕೆ. ವೆಂಕಟೇಶ್ :– 110 ರೂ. ಗಳನ್ನು ಕೊಡುತ್ತಾರೆ.

ಶ್ರೀ ಹೆಚ್.ಡಿ. ರೇವಣ್ಣ :– ನಮ್ಮಲ್ಲಿ 100 ರೂ. ಗಳನ್ನು ಹಾಗೂ 70 ರೂ.ಗಳನ್ನು ಕೊಡುತ್ತಿದ್ದಾರೆ. ನಾನು ಹೇಳುವುದು ಪತ್ರಿಕಾ ಹೇಳಿಕೆ ಪ್ರಕಾರವಾಗಿ ಅದರಲ್ಲಿ ಸುಳ್ಳಿದ್ದರೆ ಗೊತ್ತಿಲ್ಲ. ಆಂಧ್ರದಲ್ಲಿ Tobacco Board ಕಂಟ್ರೋಲ್ ಮಾಡುತ್ತಿದ್ದು, ಹಾಗೆ ಮಾಡಿದರೆ ತೊಂದರೆಯಿಲ್ಲ. ಬರಗಾಲದ ಬಗ್ಗೆ ಸರ್ಕಾರದ ವತಿಯಿಂದ ಏನು ಕೆಲಸ ತೆಗೆದುಕೊಂಡಿದ್ದಾರೆ. ಎಷ್ಟು ಹಣವನ್ನು ಕೊಟ್ಟಿದ್ದಾರೆ. ಉದ್ಯೋಗ ಖಾತ್ರಿ ಯೋಜನೆಯಲ್ಲಿ ಬಂದಿರುವುದು ಬಿಟ್ಟರೆ ಬರಗಾಲಕ್ಕೆ ಸರ್ಕಾರದಿಂದ ವಿಶೇಷವಾದ ಅನುದಾನವನ್ನೇನಾದರೂ ಕೊಟ್ಟಿದ್ದಾರೆಯೇ? 123 ತಾಲ್ಲೂಕುಗಳಲ್ಲಿ ಯಾವ್ಯಾವ ಜಿಲ್ಲೆಗೆ ಎಷ್ಟೆಷ್ಟು ಕೊಟ್ಟಿದ್ದಾರೆಂದು ಹೇಳಿ. ದೊಡ್ಡವರ ಮನೆಯಲ್ಲಿ ನಾಯಿಗಳಿಗೆ ಬಿಸ್ಕೇಟ್ ಹಾಕಿ, ಸಾಕುವ ರೀತಿಯಲ್ಲಿ MLA ಗಳಿಗೆ 5 ಲಕ್ಷ, 10 ಲಕ್ಷ ಎಂದು ಕೊಡುತ್ತಿದ್ದಾರೆ. ಅದಕ್ಕೆ ಬದಲಾಗಿ ದಯಮಾಡಿ ಹೇಳಿ, ಈ ರಾಜ್ಯದಲ್ಲಿ ಬರಗಾಲದ ಕೆಲಸ ತೆಗೆದು ಕೊಳ್ಳುವುದಕ್ಕಾಗುವುದಿಲ್ಲ. ನಮ್ಮಲ್ಲಿ ಕೆಲಸ ತೆಗೆದುಕೊಳ್ಳುವುದಕ್ಕೆ ಹಣ ಇಲ್ಲ, ಸರ್ಕಾರಕ್ಕೆ ಈಗಾಗಲೇ 21 ಸಾವಿರ ಕೋಟಿ ನಷ್ಟವಾಗಿದೆ, ಸಾಲದಲ್ಲಿದ್ದೇವೆ, ಈ ವರ್ಷ ಸಾಲ ಮಾಡಿದ್ದೇವೆ. ಅದರಿಂದಾಗಿ ಏನೇ ಆಗಲಿ, ರೈತರು ಸತ್ತರೂ ಪರವಾಗಿಲ್ಲ ಎಂದು ಹೇಳಿ ವಿಶೇಷವಾಗಿ ಮಾನ್ಯ ಮುಖ್ಯಮಂತ್ರಿಯವರು ಕೃಷಿ ಬಜೆಟ್‌ನ್ನು ಮಾಡಿದರು. ಆ ಕೃಷಿ ಬಜೆಟ್‌ನಲ್ಲಿ ಬರ ಪೀಡಿತವಾದಂತಹ 123 ತಾಲ್ಲೂಕುಗಳಲ್ಲಿರುವ ರೈತರಿಗೆ ವಿಶೇಷವಾದಂತಹ ಕೊಡುಗೆ ಕೊಡುತ್ತಾರೆಂದು ನೋಡಿದ್ದೆ. ರೈತರ ಸಾಲ ಮನ್ನಾ ಮಾಡೋದು ಇರಬಹುದು, ಸಣ್ಣ ಹಿಡುವಳಿದಾರರಿಗಾದರೂ ಸಾಲ ಮನ್ನಾ ಮಾಡಿ. ಈಗಲಾದರೂ ಮಾಡಿ. ಇವತ್ತಾದರೂ announance ಮಾಡಿ. ಆ ರೀತಿ ಮಾಡುತ್ತಾರೆಂದು ನನಗೆ ನಂಬಿಕೆ ಇತ್ತು, ಅದನ್ನು ಮಾಡಲಿಲ್ಲ. ರೈತರ ಸಾಲ ಮನ್ನಾ ಮಾಡಲಿಲ್ಲ. ಮಾನ್ಯ

ಮುಖ್ಯಮಂತ್ರಿಗಳು ರೈತರ ಸಾಲ ಮನ್ನಾ ಮಾಡುವುದಕ್ಕೆ ಗುರುತು ಹಾಕಿಕೊಳ್ಳುತ್ತಿದ್ದಾರೆ. ಅವಕಾಶ ಇದ್ದರೆ ಮಾಡಿ ಸಾರ್, ನಮ್ಮದೇನಿಲ್ಲ. ಬೇಡವೆಂದರೆ ನಾವೇನೂ ಮಾಡುವುದಕ್ಕಾಗುವುದಿಲ್ಲ. ಏಕೆಂದರೆ, ಶ್ರೀ ಸದಾನಂದ ಗೌಡರು ಬಂದು ಕೇವಲ ಆರು ತಿಂಗಳಾಗಿರುವುದರಿಂದ, ಕಳೆದ 3 ವರ್ಷ 8 ತಿಂಗಳುಗಳಿಂದ ರೈತರ ಸಾಲ ಮನ್ನಾ ಮಾಡಿ ಎಂದು ನಾವು ಸರ್ಕಾರಕ್ಕೆ ಕೇಳುತ್ತಿದ್ದೇವೆ. ರೈತರ ಹೆಸರಿನಲ್ಲಿ ನೀವು ಅಧಿಕಾರವನ್ನು ತೆಗೆದುಕೊಂಡಿದ್ದೀರಿ. ಆದಕಾರಣ ರೈತರಿಗೆ ನಿಮ್ಮ ಕೊಡುಗೆ ಏನು? ಟಿ.ಸಿ. ಕೇಳಿದರೆ ಟಿ.ಸಿ. ಇಲ್ಲ ಎಂದು ಹೇಳುತ್ತಾರೆ. ಸಾಲ ಕೇಳಿದರೆ ಸಾಲ ಇಲ್ಲವೆಂದು ಹೇಳುತ್ತಾರೆ. ರೈತರು ಬೆಳೆದಂತಹ ಬೆಳೆಗೆ ಇವತ್ತು ಉತ್ತಮವಾದಂತಹ ಮಾರುಕಟ್ಟೆ ಇಲ್ಲ ಹಾಗೂ transformers ಖರೀದಿ ಮಾಡುವುದಕ್ಕೇ ದುಡ್ಡೇ ಇಲ್ಲ. Transformers ಖರೀದಿಗೆ ಏಕೆ ಹೋದರು? ಉದಾಹರಣೆಗೆ ಹೇಳುವುದಾದರೆ ಏನೇನು ನಡೆದಿತ್ತು ಎನ್ನುವುದನ್ನು ದಯಮಾಡಿ ಕೆಲವು ವಿಷಯಗಳನ್ನು ತಾವು ತರಬೇಕಾಗುತ್ತದೆ. ಈ ರಾಜ್ಯದಲ್ಲಿ ಕಳೆದ ಎರಡು ತಿಂಗಳುಗಳಿಂದ ಇದ್ದಂತಹ ಭೀಕರವಾದಂತಹ ಬರಗಾಲ ಯಾವತ್ತೂ ಬಂದಿರುವುದಿಲ್ಲ. ಮುಂದೆ ಆಲೂಗೆಡ್ಡೆ ಬಿತ್ತನೆ ಮಾಡುವ ಕಾರಣದಿಂದ ಸನ್ಮಾನ್ಯ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ಒಂದು ಮೀಟಿಂಗ್ ಮಾಡಬೇಕಾಗುತ್ತದೆ. ಹಾಸನ ಜಿಲ್ಲೆಯಲ್ಲಿ ಮಾತ್ರವಲ್ಲದೆ ಚಿಕ್ಕಮಗಳೂರು, ಧಾರವಾಡ ಜಿಲ್ಲೆಗಳಲ್ಲಿ, ಮೈಸೂರು ಜಿಲ್ಲೆಯ ಕೆ.ಆರ್. ನಗರದಲ್ಲಿಯೂ ಆಲೂಗೆಡ್ಡೆ ಬೆಳೆಯನ್ನು ಬೆಳೆಯಬಹುದು. ಆದಕಾರಣ ಈ ಸಂಬಂಧ ಸನ್ಮಾನ್ಯ ಮುಖ್ಯಮಂತ್ರಿಗಳು ಹಾಗೂ ಮಾನ್ಯ ತೋಟಗಾರಿಕಾ ಮಂತ್ರಿಗಳು ರೈತರನ್ನು ಕರೆದು ಅವರ ಸಮಸ್ಯೆಯ ಕುರಿತು ಒಂದು ಸಭೆ ಮಾಡಬೇಕು. ಇದರ ಜೊತೆಗೆ ನಾನು ಸಚಿವನಾಗಿದ್ದಾಗ ಎಷ್ಟು ಗಂಟೆಗಳ ಕಾಲ ಕರೆಂಟ್ ಕೊಡುತ್ತಿದ್ದೆ ಎಂಬುದರ ಬಗ್ಗೆ ಮಾನ್ಯ ಇಂಧನ ಮಂತ್ರಿಗಳು ಕೇಳುತ್ತಿದ್ದಾರೆ. ನಾನು ಇದರ ಬಗ್ಗೆ ಅವರ ಗಮನಕ್ಕೆ ತರುವುದೇನೆಂದರೆ ಎಷ್ಟು ಗಂಟೆಗಳ ಕಾಲ ನೀನು ಸಚಿವನಾಗಿದ್ದಾಗ ಕರೆಂಟು ಕೊಡುತ್ತಿದ್ದೆ ಹಾಗೂ ಈಗಿನ ಪರಿಸ್ಥಿತಿ ಏನಾಗಿದೆ ಎಂಬುದನ್ನು ಹೇಳುತ್ತೇನೆ. ನಗರ ಪ್ರದೇಶದಲ್ಲಿ 24 ಗಂಟೆಗಳ ಕಾಲ ಕರೆಂಟ್ ಕೊಟ್ಟು ಒಂದು ದಿನವೂ ಲೋಡ್ ಶೆಡ್ಡಿಂಗ್ ಇಲ್ಲದೆ ಮಾಡಿದ್ದೆ. ಕರೆಂಟ್ ರೇಟ್ ಜಾಸ್ತಿ ಮಾಡಿಲ್ಲ. 365 ದಿನಗಳು ಹಾಗೂ 24 ಗಂಟೆಗಳ ಕರೆಂಟ್ ಕೊಡುವ ಕಾರ್ಯಕ್ರಮವನ್ನು ಜಾರಿಗೆ ತಂದಿದ್ದೆ. ಗ್ರಾಮೀಣ ಪ್ರದೇಶಗಳಲ್ಲಿ 9 ರಿಂದ 9 ಗಂಟೆವರೆಗೆ ಸಿಂಗಲ್ ಫೇಸ್‌ನಲ್ಲಿ ಕರೆಂಟ್ ಕೊಡುತ್ತಿದ್ದೆವು. ಆದರೆ ಈಗ ಗ್ರಾಮೀಣ ಪ್ರದೇಶಗಳ ಪರಿಸ್ಥಿತಿ ಏನಾಗಿದೆ? 2008 ರಲ್ಲಿ ಇಂದಿನ ಮಾನ್ಯ ಇಂಧನ ಮಂತ್ರಿಗಳು ಕೊಟ್ಟಿರುವ ಹೇಳಿಕೆ ಏನೆಂದರೆ

ಕೇವಲ 6 ಗಂಟೆಗಳ ಕಾಲ ಕರೆಂಟ್ ಕೊಡುತ್ತಿದ್ದೇವೆ. ಕೇವಲ 6 ಗಂಟೆ ಮಾತ್ರ ಏಕೆಂದರೆ ಇವರ ಹತ್ತಿರ ಕರೆಂಟ್ ಖರೀದಿ ಮಾಡುವುದಕ್ಕೆ ದುಡ್ಡಿಲ್ಲ. 2006–07ನೇ ಸಾಲಿನಲ್ಲಿ ಹೈಕ್ಲಾಸ್ ಕರೆಂಟ್ ಖರೀದಿ ಮಾಡಿರುವುದು 33 ಕೋಟಿ 24 ಲಕ್ಷ ರೂ. ಗಳು ಮಾತ್ರ ಎಂಬುದನ್ನು ಸನ್ಮಾನ್ಯ ಮುಖ್ಯಮಂತ್ರಿಗಳು ಹಾಗೂ ಇಂಧನ ಸಚಿವರ ಗಮನಕ್ಕೆ ಸದನದ ಮುಖಾಂತರ ತರಬಯಸುತ್ತೇನೆ. ಕೆಲವು ಕಡೆ ಏನಾಗಿದೆಯೆಂದರೆ ಹಿಂದಿನ ಸರ್ಕಾರ ಮಾಡಿದಂತಹ ತಪ್ಪಿಗೆ, ತಣ್ಣೀರುಬಾವಿಯವರಿಗೆ ಕರೆಂಟ್ ತೆಗೆದುಕೊಂಡರೂ 10.5 ರೂ.ಗಳಂತೆ ಕೊಡಬೇಕು, ತೆಗೆದುಕೊಳ್ಳಲಿಲ್ಲವೆಂದರೆ 2.50 ರೂ.ಗಳನ್ನು ಕೊಡಬೇಕೆಂದು ಮಾಡಿದ್ದರು. ನಾನು ಸಚಿವನಾಗಿದ್ದಾಗ ತಣ್ಣೀರುಬಾವಿಯವರ ಹತ್ತಿರ ಎರಡೂವರೆ ವರ್ಷಗಳ ಕಾಲ ಕರೆಂಟನ್ನು ಖರೀದಿ ಮಾಡಲಿಲ್ಲ. ನಾವು 50 ಪೈಸೆ ಯಿಂದ ಎರಡುವರೆ ರೂಪಾಯಿಗಳಿಗೆ ಕರೆಂಟ್ ಖರೀದಿ ಮಾಡಿದ್ದೇವೆ. ಇಂದು 5 ರೂ.ಗಳಿಂದ 10 ರೂ.ಗಳವರೆಗೆ ಕರೆಂಟ್ ಖರೀದಿ ಆಗುತ್ತಿದೆ. ಆದರೂ ನಮ್ಮ ರೈತರಿಗೆ ಸರಿಯಾದ ಸಮಯಕ್ಕೆ ಕರೆಂಟ್ ಒದಗಿಸುವುದಕ್ಕಾಗುತ್ತಿಲ್ಲ. ಈ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ನಾಲ್ಕೈದು ಕಂಪನಿಗಳಿಂದ ಸುಮಾರು 3–4 ಸಾವಿರ ಕೋಟಿ ರೂ. ಕರೆಂಟ್ ಖರೀದಿ ಮಾಡಿದ್ದಾರೆ. ಇದರಿಂದ ನಷ್ಟ ಎಷ್ಟಾಗಿದೆ? ಕೆ.ಇ.ಆರ್.ಸಿ. ಮುಂದೆ ಅರ್ಜಿ ಹಾಕಿರುವುದು ನಾನಲ್ಲ. ಸುಮಾರು 4 ಸಾವಿರ ಕೋಟಿ ರೂ. ನಷ್ಟವಾಗಿದೆ. ಬೆಂಗಳೂರು ಕಂಪನಿ ಒಂದರಲ್ಲೇ ಎರಡೂವರೆ ಸಾವಿರ ಕೋಟಿ ರೂ. ನಷ್ಟವಿದೆ. ನಾವು ಅಧಿಕಾರದಲ್ಲಿದ್ದಂತಹ ಕಾಲದಲ್ಲಿ ಬೆಂಗಳೂರು ಕಂಪನಿ ಒಂದರಲ್ಲೇ 500 ಕೋಟಿ ರೂ.ಗಳ FD ಯನ್ನು ಇಟ್ಟಿದ್ದೆವು. ಏಕೆ ನಷ್ಟವಾಗಿದೆ, ಕಾರಣವೇನು? ನಿರಂತರ ಜ್ಯೋತಿ ಎಂಬ ಯೋಜನೆಯಲ್ಲಿ ಸುಮಾರು 40 ಸಾವಿರ ಕಿ.ಮೀ. ವರೆಗೆ ಲೈನ್ ಎಳೆಯುತ್ತೇವೆಂದು ಹೇಳಿ ಎಷ್ಟು ಕಿ.ಮೀ. ಮಾಡಿದ್ದಾರೆ? ಈ ಯೋಜನೆಗೆ ಅನುದಾನ ತೆಗೆದುಕೊಂಡಿರುವುದು ನಾಲ್ಕೂವರೆ ಸಾವಿರ ಕೋಟಿ ರೂ. ಗಳು. ಇವರು 40 ಸಾವಿರ ಕಿ.ಮೀ. ನಲ್ಲಿ 10 ಸಾವಿರ ಕಿ.ಮೀ. ಮಾತ್ರ ಮಾಡಿರಬಹುದು, ಅದನ್ನು ಸರಿಯಾಗಿ ಮಾಡಿಲ್ಲ. ಏನಾದರೂ ಕೇಳಿದರೆ ಹಿಂದಿನ ಸರ್ಕಾರ ಮಾಡಿದರು ಎಂದು ಹೇಳುತ್ತಾರೆ. ಆಯಿತು, ಹಿಂದಿನವರದು ಬಿಟ್ಟು ಹಾಕಿ. ಈಗ ನೀವು ಮಾಡಬೇಡಿ ಎಂದು ನಾವೇನಾದರೂ ಹಿಡಿದುಕೊಂಡಿದ್ದೇವೆಯೇ? ಉತ್ಪಾದನೆ ಬಗ್ಗೆ ಈ ಸರ್ಕಾರ ಗಮನ ಕೊಟ್ಟಿದೆಯೇ? ಇಂದು ಯಾವ್ಯಾವ ಕಂಪನಿಗಳಲ್ಲಿ ಎಷ್ಟೆಷ್ಟು ನಷ್ಟವಿದೆ ಎಂಬುದನ್ನ ನಾವು ಹೇಳಬೇಕಾಗುತ್ತದೆ. ಉಡುಪಿ power plant ನಲ್ಲಿ 1200 ಮೆ.ವ್ಯಾಟ್, agreement ಪ್ರಕಾರ ಕರೆಂಟ್ ತೆಗೆದುಕೊಳ್ಳಲಿ, ಬಿಡಲಿ ಅವರಿಗೆ

500 ಮೆ.ವ್ಯಾ ವಿದ್ಯುತ್ತಿಗೆ ದುಡ್ಡು ಕೊಡಬೇಕಾಗಿತ್ತು. ನಾಲ್ಕು ವರ್ಷಗಳ ಕಾಲ ಮಾಡಬೇಡಿ ಎಂದು ಯಾರಾದರೂ ನಿಮ್ಮನ್ನು ಹಿಡಿದು ಕೊಂಡಿದ್ದಾರಾ? ಇದು 10 ತಿಂಗಳ ಹಿಂದಿನಿಂದ ಮಾನ್ಯ ಸರ್ವೋಚ್ಛ ನ್ಯಾಯಾಲಯದಲ್ಲಿತ್ತು, 15 ದಿವಸಗಳ ಹಿಂದೆಯಷ್ಟೇ ಕ್ಲಿಯರ್ ಆಗಿದೆ ಎಂದು ಮೇಡಂ ಅವರು ಹೇಳಿದರು. ಮಾನ್ಯ ಸಭಾಧ್ಯಕ್ಷರೆ, ನಾಲ್ಕು ವರ್ಷಗಳ ಕಾಲ ಮಾಡಬೇಡಿ ಎಂದು ಯಾರಾದರೂ ಇವರನ್ನು ಹಿಡಿದು ಕೊಂಡಿದ್ದಾರಾ? ಮಾನ್ಯ ಸಭಾಧ್ಯಕ್ಷರೆ, ಇವತ್ತು ನಾನು ದಯಮಾಡಿ ಸನ್ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತರುವುದೇನೆಂದರೆ ರೈತರಿಗೆ ಇವತ್ತು ಬಹಳ ಕಷ್ಟವಿದೆ. ಒಂದು ಕಡೆ ಕೂಲಿ ಸಿಗುತ್ತಿಲ್ಲ. ಆಮೇಲೆ ಇನ್ನೊಂದು ಕಡೆ ಬರಗಾಲದ ಜೊತೆಗೆ old-age pension ಒಂದೂವರೆ ವರ್ಷದಿಂದ ಕೊಟ್ಟಿಲ್ಲ. Widow pension, old-age pension ಕೊಡುವುದಕ್ಕೆ ಆಗಿಲ್ಲ. ಅದರಲ್ಲಾದರೂ ಜೀವನ ಮಾಡುತ್ತೇವೆಂದರೆ ಅದು ಇಲ್ಲ. Pension 400 ಕೋಟಿ ಏನೋ ಕೊಡಬೇಕು. ಆಮೇಲೆ ಏನು ಮಾಡಿದ್ದಾರೆಂದರೆ, old-age pension ಗೆ ಮೊನ್ನೆ ನೀವು 2 ಸಾವಿರ old-age pensioner's ಇದ್ದರೆ, 250 ಮಾಡಿ ಅಂಥ ಹೇಳಿದ್ದೀರಿ. ಅದಕ್ಕೊಂದು ಈಗ ceiling limit ಹಾಕಿದ್ದಾರೆ. old-age pension, widow pension ಮಾಡುವುದಕ್ಕೆ ceiling limit ಹಾಕಿದ್ದಾರೆ. 2 ಸಾವಿರ old-age pensioners ಇದ್ದರೆ, 250 ಜನಕ್ಕೆ ಕೊಡಿ ಅಂಥ ಹೇಳಿ, ಮಾನ್ಯ ತಹಶೀಲ್ದಾರರುಗಳಿಗೆ ಹೇಳಿದ್ದಾರೆ. ತೆಗೆಸಿ ನೋಡಿ. ನಿಮ್ಮ constituency ನಲ್ಲಿ ಬಂದಿದೆಯೋ ಏನೋ ಗೊತ್ತಿಲ್ಲ. ನಮ್ಮ ಕ್ಷೇತ್ರಗಳಿಗೆಲ್ಲಾ ಬಂದಿದೆ. ಮತ್ತೆ ಮಾನ್ಯ ಸಭಾಧ್ಯಕ್ಷರೆ, ಇವತ್ತು ಬರಗಾಲದ ಬಗ್ಗೆ ಕೇಂದ್ರ ಸರ್ಕಾರಕ್ಕೆ ನಿಯೋಗ ತೆಗೆದುಕೊಂಡು ಹೋಗಬೇಕಾಗಿದೆ. ಇವತ್ತು ನೀವು ಬರಗಾಲವೆಂದು announce ಮಾಡಿದ ಮೇಲೆ, ಎಷ್ಟು ಹಣ ಬೇಕು? ರಾಜ್ಯದಿಂದ ಬೇಡಿಕೆ ಏನಿದೆ, ಕುಡಿಯುವ ನೀರಿಗೆ ಏನಿದೆ? ಬರಗಾಲ ಕಾಮಗಾರಿ ತೆಗೆದುಕೊಳ್ಳುವುದಕ್ಕೆ ಏನಿದೆ? ರಾಜ್ಯ ಸರ್ಕಾರದಿಂದ ಎಷ್ಟು ಹಣ ಇಟ್ಟಿದ್ದೀರಿ? ಕುಡಿಯುವ ನೀರಿಗೆ ಎಷ್ಟಿದ್ದೀರಿ? ಮತ್ತು ಬರಗಾಲ ಕಾಮಗಾರಿಗಳನ್ನು ತೆಗೆದುಕೊಳ್ಳುವುದಕ್ಕೆ ಯಾವ ಯಾವ ಇಲಾಖೆಯಲ್ಲಿ ಎಷ್ಟು ಹಣ ಇಟ್ಟಿದ್ದೀರಿ? ದಯಮಾಡಿ ತಿಳಿಸಬೇಕು. ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡುವಂಥ ಸಂದರ್ಭದಲ್ಲಿ. ಏಕೆಂದರೆ ಈಗ ಕಳೆದ 2 ತಿಂಗಳಿಂದ ಅವರಿಗೂ ಒಂದು ನಿಮಿಷನೂ ಬಿಡುವು ಇಲ್ಲ. ಅವರು ಬಜೆಟ್ ಮಂಡನೆ ಮಾಡುತ್ತಾರೋ, ಇಲ್ಲವೋ ಜಿಜ್ಞಾಸೆ ಇತ್ತು. ಅದಕ್ಕೆ ನೀವು ನೋಡಿದ್ದೀರಲ್ಲಾ, ವೈಷ್ಣೋವಿ ದೇವಿಯಿಂದ ಹಿಡಿದು ಎಲ್ಲಾ ಕಡೆ ಹೋಗಿ

ಬಂದರು ಆದರೂ ಅನುಗ್ರಹ ಸಿಕ್ಕಿಲ್ಲ. ಆದರೂ ಮುಖ್ಯಮಂತ್ರಿಗಳು ಏನು ಮಾಡಿಸಿದ್ದಾರೋ ಏನೋ ಗೊತ್ತಿಲ್ಲ ನನಗೆ. 2 ತಿಂಗಳು ಆದರೂ ಇವತ್ತಿನವರೆಗೆ ಬರಗಾಲ ಕಾಮಗಾರಿ ಬಗ್ಗೆ, ನೀವು ಮಾತನಾಡುವುದಿಲ್ಲ. ಕುಡಿಯುವ ನೀರಿನ ಬಗ್ಗೆ ತಮಗೆ ಕಾಳಜಿ ಇಲ್ಲ. ರೈತರು ಬೆಳೆದಂಥ ಪದಾರ್ಥಗಳಿಗೆ ಸರಿಯಾದ ರೀತಿಯಲ್ಲಿ ಬೆಲೆ ಸಿಗುವುದಿಲ್ಲ. ಒಂದು ಕಡೆ ಬರಗಾಲ ಇನ್ನೊಂದು ಕಡೆ ರೈತರು ಕಷ್ಟಪಟ್ಟು ಏನೋ ಬೋರ್‌ವೆಲ್‌ಗಳಲ್ಲಿ ಬೆಳೆದಂಥ ಬೆಳೆಗೂ ಇವತ್ತು ಉತ್ತಮವಾದಂತಹ ಬೆಲೆ ಇಲ್ಲ. ಅದರಿಂದ ದಯಮಾಡಿ ಕೂಡಲೇ ಇವತ್ತು ಬರಗಾಲಕ್ಕೆ ವಿಶೇಷವಾಗಿ ಕೇಂದ್ರ ಸರ್ಕಾರದ ಮೇಲೂ ಒತ್ತಾಯ ತರಬೇಕು. ರಾಜ್ಯ ಸರ್ಕಾರವು ತಾವು ಏನು ಕಾರ್ಯಕ್ರಮವನ್ನು ರೂಪಿಸುತ್ತೇವೆ ಎನ್ನುವುದನ್ನು ಕೂಡಲೇ ಹೇಳಬೇಕು. ಏಕೆಂದರೆ ನಾಳೆ, ನಾಡಿದ್ದರಲ್ಲಿ 30ನೇ ತಾರೀಖಿನಂದು Assembly ಮುಗಿಯುತ್ತದೆ. ಮಾರ್ಚ್, ಏಪ್ರಿಲ್, ಮೇ ವರೆಗೆ ಮಳೆ ಆಗುತ್ತದೆಯೋ ಇಲ್ಲವೋ ಗೊತ್ತಿಲ್ಲ. ಮಾನ್ಯ ಸಭಾಧ್ಯಕ್ಷರೆ, ಅದರಿಂದ ಕೂಡಲೇ ಕನಿಷ್ಠ ಒಂದು ತಾಲ್ಲೂಕಿಗೆ ಕುಡಿಯುವ ನೀರಿನ ವ್ಯವಸ್ಥೆಗೆ 1 ರಿಂದ 2 ಕೋಟಿ ರೂಪಾಯಿಗಳನ್ನು ಕೊಡಬೇಕೆಂದು ಸನ್ಮಾನ್ಯ ಮುಖ್ಯಮಂತ್ರಿಗಳಲ್ಲಿ ನಾನು ಒತ್ತಾಯ ಮಾಡುತ್ತೇನೆ. ಕೇಂದ್ರ ಸರ್ಕಾರದಿಂದ ಹಣ ಬರುವವರೆಗೆ ರಾಜ್ಯ ಸರ್ಕಾರದ ಅನುದಾನ ಕೊಡಿ. ಕೇಂದ್ರ ಸರ್ಕಾರದಿಂದ ಹಣ ಬಂದ ಮೇಲೆ ಬೇಕಾದರೆ ಅದನ್ನು ವಜಾ ಹಾಕಿಕೊಳ್ಳಿ. ಮತ್ತು ಅದರ ಜೊತೆಗೆ ಬರಗಾಲದ ಕಾಮಗಾರಿ, ಉದ್ಯೋಗ ಖಾತರಿ ಯೋಜನೆ ಮಾಡುವುದಕ್ಕೆ ಹಣ ಕೊಡಿ. ಉದ್ಯೋಗ ಖಾತರಿ ಯೋಜನೆಯಲ್ಲಿ ಕೆಲವು ಕಡೆ excess ಆಗಿದೆ, ಎಷ್ಟೋ ಕಡೆ ಇನ್ನೂ ಕಾಮಗಾರಿ ತೆಗೆದುಕೊಳ್ಳುತ್ತಿಲ್ಲ. ನಮ್ಮ ರಾಜ್ಯ ಸರ್ಕಾರದ ಅನುದಾನದಲ್ಲೇ ಬರಗಾಲಕ್ಕೆ ಕನಿಷ್ಠ ಒಂದು ತಾಲ್ಲೂಕಿಗೆ 50.00 ಲಕ್ಷ ರೂಪಾಯಿಗಳ ಕೆಲಸವನ್ನು ಬರಗಾಲ ಇರುವ ಪ್ರದೇಶದಲ್ಲಿ ತೆಗೆದುಕೊಳ್ಳಬೇಕೆಂದು ನಾನು ಸನ್ಮಾನ್ಯ ಮುಖ್ಯಮಂತ್ರಿಗಳಲ್ಲಿ ಒತ್ತಾಯ ಮಾಡುತ್ತೇನೆ. ಮತ್ತು ಅದರ ಜೊತೆಗೆ ಮುಂದೆ ರೈತರಿಗೆ ಮಳೆ ಬಂದರೆ ಬರಗಾಲ ಆಯಿತು. Next ಮಳೆ ಏನಾದರೂ ಬಿದ್ದು, ಈ ವರ್ಷ ಏನೋ ಹೇಳಿದ್ದಾರಲ್ಲಾ ಸ್ವಾಮಿ, ಕೆಲವು ಜ್ಯೋತಿಷ್ಯದವರು ಒಳ್ಳೆಯ ಮಳೆ ಆಗುತ್ತೆ, ಬೆಳೆ ಆಗುತ್ತೆಂಬ ಭಾವನೆಯನ್ನು ವ್ಯಕ್ತಪಡಿಸಿದ್ದಾರೆ. ಅದಕ್ಕೋಸ್ಕರ ಈಗಲೇ ಬಿತ್ತನೆ ಬೀಜ ಇರಬಹುದು, ಗೊಬ್ಬರ ಇರಬಹುದು ಅದಕ್ಕೆಲ್ಲಾ ಸಕಲ ಸಿದ್ಧತೆಗಳನ್ನು ಮಾಡಿ ಕೃಷಿ ಸಚಿವರು ಇಲ್ಲ, ಏಕೆಂದರೆ ಅವರು ಎಲ್ಲಿ ಹೋದರೋ ಏನೋ ಗೊತ್ತಿಲ್ಲ. ಬರಗಾಲದ ಬಗ್ಗೆ ಮತ್ತು ಅವರ ಇಲಾಖೆಯ ಬಗ್ಗೆ ಮಾ ಾಡುವಾಗ ಇರಬೇಕಿತ್ತು. ಇದರ ಜೊತೆಗೆ ತೋಟಗಾರಿಕೆ ಸಚಿವರಿಗೂ ಹೇಳಬೇಕು, ಕೃಷಿ

ಸಚಿವರಿಗೂ ಹೇಳಬೇಕು. ಸನ್ಮಾನ್ಯ ಮುಖ್ಯಮಂತ್ರಿಗಳು ಒಂದು ಸಭೆ ಮಾಡಿ, ಎಲ್ಲೆಲ್ಲಿ ರೈತರು ಮುಂದೆ ಬೆಳೆ ಬೆಳೆಯುತ್ತಾರೆ? ಯಾವ ಬೆಳೆ ಬೆಳೆಯುತ್ತಾರೆ? ಬಿತ್ತನೆ ಬೀಜ ಇರಬಹುದು, ಗೊಬ್ಬರ ಇರಬಹುದು ಅದಕ್ಕೆ ಸಕಲ ಸಿದ್ಧತೆ ಮಾಡಬೇಕು. ಮತ್ತು ಕೆಲವು ಕಡೆ ಈಗ ತೊಗರಿಬೇಳೆ, ಗುಲಬರ್ಗಾದಲ್ಲಿ ಇವತ್ತು ತೊಗರಿಬೇಳೆ ಬಿತ್ತುವ ರೈತರೆಲ್ಲಾ ರೋಡಿಗೆ ಬಂದು ನಿಂತಿದ್ದಾರೆ. ಮತ್ತೆ ಭತ್ತದ ಬೆಲೆ ಬಿದ್ದು ಹೋಯಿತು. ಕೇಂದ್ರ ಸರ್ಕಾರಕ್ಕೆ ಮಾನ್ಯ ದೇವೇಗೌಡರು, ಮಾನ್ಯ ನಾಡಗೌಡರು, ನಾವೆಲ್ಲರೂ ಸೇರಿ, ಪ್ರಧಾನ ಮಂತ್ರಿಗಳಿಗೂ ಅಪೀಲು ಕೊಟ್ಟು ಆಗಿದೆ. ಮನವಿ ಕೊಟ್ಟಿದ್ದೇವೆ. ಸನ್ಮಾನ್ಯ ಮುಖ್ಯಮಂತ್ರಿಗಳಿಗೂ ಮನವಿ ಕೊಟ್ಟಿದ್ದೇನೆ. ಆ ಬೆಲೆ ಬಗ್ಗೆ ಯಾರೂ ಏನೂ ಮಾತನಾಡುವುದಿಲ್ಲ. ಅರಿಶಿನದ್ದೂ ಇಲ್ಲ, ಆಲೂಗೆಡ್ಡೆದೂ ಇಲ್ಲ, ಶುಂಠಿದೂ ಇಲ್ಲ, ಭತ್ತದ್ದೂ ಇಲ್ಲ, ತೊಗರಿದೂ ಇಲ್ಲ. ಅದರಿಂದ ದಯಮಾಡಿ ಇವತ್ತಾದರೂ ಉತ್ತರ ಕೊಡುವಾಗ ಸನ್ಮಾನ್ಯ ಮುಖ್ಯಮಂತ್ರಿಗಳು ಆ ಬೆಲೆ ಏನು ಕುಸಿದಿದೆ ಅದಕ್ಕೆ ದಯಮಾಡಿ, ಯಾವುದೇ ಬೆಳೆ ಇರಲಿ, ಕೊಡಬೇಕು. ಆವರ್ತ ನಿಧಿಯಲ್ಲಿ 1 ಸಾವಿರ ಕೋಟಿ ಹಣ ಇಟ್ಟಿದ್ದೇವೆಂದು ಹೇಳುತ್ತೀರಿ. ಯಾವುದೇ ಬೆಳೆ ಇರಲಿ, ಮತ್ತು A.P.M.C ನಿಮ್ಮ ಕಡೆನೇ ಇದೆ. A.P.M.C ಯ ಕಾರ್ಯದರ್ಶಿಗಳಿಗೆ ಮತ್ತು ಜಿಲ್ಲಾಧಿಕಾರಿಗಳಿಗೆ ಕೂಡಲೇ ನಾಳೆ direction ಕೊಡಬೇಕು. ಒಂದು ಕಡೆ ಬೆಳೆ ಬಿದ್ದು ಹೋಗಿರುವ ಬೆಳೆಗೆ ಉತ್ತಮವಾದಂಥ ಬೆಲೆ ಕೊಡಿಸಬೇಕು ಮತ್ತು ರೈತರಿಗೆ ಬೇಕಾದಂಥ ಬಿತ್ತನೆ ಬೀಜ ಇರಬಹುದು, ಗೊಬ್ಬರ ಇರಬಹುದು ಮತ್ತು ಕುಡಿಯುವ ನೀರು ಇರಬಹುದು ಮತ್ತು ಬರಗಾಲ ಕಾಮಗಾರಿಗಳ ಕೆಲಸ ಕೊಡಬೇಕೆಂದು ನಾನು ಸನ್ಮಾನ್ಯ ಮುಖ್ಯಮಂತ್ರಿಗಳಿಗೆ ಒತ್ತಾಯ ಮಾಡಿ ನನ್ನ ಒಂದೆರಡು ಮಾತನ್ನು ಮುಗಿಸುತ್ತೇನೆ.

ಶ್ರೀ ಡಿ.ವಿ. ಸದಾನಂದಗೌಡ (ಮುಖ್ಯಮಂತ್ರಿಗಳು) :- ಮಾನ್ಯ ಸಭಾಧ್ಯಕ್ಷರೆ, ನಮ್ಮ ವಿರೋಧ ಪಕ್ಷದ ನಾಯಕರಾದಂಥ ಮಾನ್ಯ ಸಿದ್ದರಾಮಯ್ಯನವರು, ಮಾನ್ಯ ಹೆಚ್.ಡಿ. ರೇವಣ್ಣನವರು ಮತ್ತು ಎಲ್ಲ ಸದಸ್ಯರುಗಳು ಬರಪೀಡಿತ ಪ್ರದೇಶಗಳ ಕಾಮಗಾರಿಗಳ ಬಗ್ಗೆ, ಕುಡಿಯುವ ನೀರಿನ ಬಗ್ಗೆ ಇತರ ಸಮಸ್ಯೆಗಳ ಬಗ್ಗೆ ಒಂದಷ್ಟು ಬೆಳಕನ್ನು ಚೆಲ್ಲಿದ್ದಾರೆ. ಪ್ರಾಯಶಃ 123 ತಾಲ್ಲೂಕುಗಳಲ್ಲಿ ಬರಪೀಡಿತ ಅಂತ ನಾವು ಘೋಷಣೆ ಮಾಡಿದ ನಂತರ, ನಾನು ಸುಮಾರು 25 ಜಿಲ್ಲೆಗಳ ಪ್ರವಾಸ ಮಾಡಿದ್ದೇನೆ. ಎಲ್ಲ ಕಡೆ ನಾನು ಹೋದಲೆಲ್ಲಾ ಅಲ್ಲಿಯ ಅಧಿಕಾರಿಗಳ ಜೊತೆ ಸಮಾಲೋಚನಾ ಸಭೆಗಳನ್ನು ಮಾಡಿದ್ದೇನೆ. ಜನಪ್ರತಿನಿಧಿಗಳ ಜೊತೆ ಕೂಡ ಸಮಾಲೋಚನೆಗಳನ್ನು ಮಾಡುವಂಥ ಕೆಲಸ ಕಾರ್ಯಗಳನ್ನು ನಾನು

ಮಾಡಿದ್ದೇನೆ. ಜಿಲ್ಲಾಧಿಕಾರಿಗಳು ಮತ್ತು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಸಭೆಯನ್ನು ಪ್ರಥಮ ಬಾರಿಗೆ ನಾನು ಬೆಂಗಳೂರಿನಲ್ಲಿ ಕರೆದು, ಅವರಿಗೆ ಈ ಬಗ್ಗೆ ಪರಿಹಾರ ಕಾಮಗಾರಿಗಳನ್ನು ತೆಗೆದುಕೊಳ್ಳುವುದಕ್ಕೆ ಯುದ್ಧೋಪಾದಿಯಲ್ಲಿ ಮುಂದೆ ಹೋಗಬೇಕೆಂಬ ಸೂಚನೆಗಳನ್ನು ಕೊಟ್ಟಿರುವುದು ಎಲ್ಲರಿಗೂ ಗೊತ್ತಿರುವಂಥ ಸಂಗತಿಗಳು. ಜನವರಿ 6 ಮತ್ತು ಫೆಬ್ರವರಿ 22 ಈ ಎರಡು ದಿನಗಳ ಕಾಲ ಜಿಲ್ಲಾಧಿಕಾರಿಗಳ ಮತ್ತು ಮುಖ್ಯ ಕಾರ್ಯದರ್ಶಿಗಳ ಜೊತೆ ನೇರವಾದಂಥ ವಿಡಿಯೋ ಸಂವಾದಗಳನ್ನು ನಡೆಸುವಂಥ ಕೆಲಸ ಕಾರ್ಯಗಳನ್ನು ಮಾಡಿದ್ದೇನೆ. ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಪ್ರತಿ ತಿಂಗಳು ಬರ ಪರಿಸ್ಥಿತಿಯ ವಿಮರ್ಶಾ ಸಭೆಗಳನ್ನು ನಡೆಸಿ, ಪರಿಹಾರ ಕಾರ್ಯಕ್ರಮಗಳನ್ನು ಕೈಗೆತ್ತಿಕೊಳ್ಳುವಂಥದ್ದು ಮತ್ತು ವರದಿಗಳನ್ನು ಸರ್ಕಾರ ಪಡೆದುಕೊಳ್ಳುವಂಥದ್ದನ್ನು ನಿರಂತರವಾಗಿ ಮಾಡಿದ್ದೇವೆ. ಎಲ್ಲಾ 24 ಜಿಲ್ಲೆಗಳಲ್ಲಿ ಜಿಲ್ಲಾಧಿಕಾರಿಗಳು ಪ್ರತಿ ಶುಕ್ರವಾರ ಬರಗಾಲ ಪೀಡಿತ ಪ್ರದೇಶಗಳಲ್ಲಿ ವಿಮರ್ಶಾ ಸಭೆಗಳನ್ನು ನಡೆಸಬೇಕು ಅನ್ನುವಂಥ ಸೂಚನೆಗಳನ್ನು ಕೊಟ್ಟಂಥ ಹಿನ್ನೆಲೆಯಲ್ಲಿ ಇದುವರೆಗೆ ಸುಮಾರು 135ಕ್ಕೂ ಹೆಚ್ಚು ಸಭೆಗಳನ್ನು ನಡೆಸಿ ಪರಿಸ್ಥಿತಿಯ ಅವಲೋಕನಗಳನ್ನು ಮಾಡಿ, ಪರಿಹಾರವನ್ನು ಒದಗಿಸುವಂಥ ಕೆಲಸ ಕಾರ್ಯಗಳನ್ನು ನಿರಂತರವಾಗಿ ಮಾಡಿದ್ದೇವೆ. ಈಗ ನಮಗೆ ಗೊತ್ತಿದೆ, ಸುಮಾರು 74.65 ಹೆಕ್ಟೇರ್ ಪ್ರದೇಶದಲ್ಲಿ ಕೃಷಿ ಬಿತ್ತನೆ ಗುರಿ ಹೊಂದಿದ್ದರೂ ಕೂಡ, ಮಳೆಯ ಕೊರತೆಯಿಂದಾಗಿ, ಸುಮಾರು 22.56 ಲಕ್ಷ ಹೆಕ್ಟೇರ್‌ನಲ್ಲಿ ನಾವು ರೈತರು ಬೆಳೆದಂಥ ಬೆಳೆ ನಮ್ಮ ಕೈಗೆ ಸಿಗುವಂಥ ಕೆಲಸ ಕಾರ್ಯಗಳು ಆಗಿಲ್ಲ. ಒಟ್ಟು ಸುಮಾರು 4245.84 ಕೋಟಿಗಳಷ್ಟು ಅಂದಾಜಿನ ಬೆಳೆ ಹಾನಿಯಾಗಿರುವಂಥದ್ದು ನಮ್ಮ ಗಮನಕ್ಕೆ ಬಂದಿದೆ. ಮತ್ತು ಈಗಾಗಲೇ ಮುಂಗಾರಿನಲ್ಲೂ ಕೂಡ ಇದೇ ರೀತಿಯ ತೊಂದರೆಗಳಾಗಿರುವಂಥದ್ದೂ, ಹಿಂಗಾರಿನಲ್ಲಿಯೂ ಕೂಡ ಇದೇ ರೀತಿ ತೊಂದರೆಗಳು ಆಗಿರುವಂಥದ್ದನ್ನು ನಾನು ಕಂಡಿದ್ದೇನೆ. ಹಿಂಗಾರಿನಲ್ಲಿ ಸುಮಾರು 35.55 ಲಕ್ಷ ಹೆಕ್ಟೇರ್ ಪ್ರದೇಶಗಳಲ್ಲಿ ಕೃಷಿ ಬಿತ್ತನೆ ಆಗಬೇಕಾಗಿತ್ತು. ಆದರೆ ಕೇವಲ 12.12 ಲಕ್ಷ ಹೆಕ್ಟೇರ್‌ನಲ್ಲಿ ಮಾತ್ರ ಆ ಬಿತ್ತನೆಯಲ್ಲಿ ತುಂಬಾ ವಿಶೇಷವಾದಂಥ ಲುಕ್ಸಾನ್ ಆಗಿರುವಂಥದ್ದು ಆಗಿದೆ. ಅದಕ್ಕೆ ಒಂದು ಪೂರಕವಾಗಿ ಆ ಸಂದರ್ಭಗಳಲ್ಲಿ ಕೂಡ ಏನೇನು ಮಾಡಬೇಕು ಆ ಎಲ್ಲಾ ಕೆಲಸಕಾರ್ಯಗಳನ್ನು ನಾವು ಮಾಡಿದ್ದೇವೆ. 2011-12ರ ಮುಂಗಾರು ಹಂಗಾಮಿನಲ್ಲಿ ಸುಮಾರು 5.13 ಲಕ್ಷ ಕ್ವಿಂಟಾಲ್ ಮತ್ತು ಹಿಂಗಾರು ಬೇಸಿಗೆಯಲ್ಲಿ ಸುಮಾರು 1.90 ಲಕ್ಷ ಕ್ವಿಂಟಾಲ್ ಬಿತ್ತನೆ ಬೀಜಗಳನ್ನು ಸುಮಾರು 99.80 ಕೋಟಿ ರೂಪಾಯಿಗಳ ವೆಚ್ಚದಲ್ಲಿ

29.93 ಲಕ್ಷ ರೈತರಿಗೆ ವಿತರಿಸುವಂಥ ಕೆಲಸ ಕಾರ್ಯಗಳನ್ನು ಮಾಡಿದ್ದೇವೆ. ರಸಗೊಬ್ಬರಗಳ ಬೇಡಿಕೆ ಇದ್ದಾಗೆಲ್ಲಾ ನಾವು ಆ ಬೇಡಿಕೆಯನ್ನು ಈಡೇರಿಸುವಂಥ ಕೆಲಸಕಾರ್ಯಗಳನ್ನು ಮಾಡಿದ್ದೇವೆ. ಮುಂಗಾರು ಹಂಗಾಮಿನಲ್ಲಿ ಸುಮಾರು 23.35 ಲಕ್ಷ ಟನ್ ವಿವಿಧ ರಸಗೊಬ್ಬರಗಳ ಬೇಡಿಕೆ ಇದ್ದು, 19.86 ಲಕ್ಷ ಟನ್‌ನಷ್ಟು ಸರಬರಾಜು ನಾವು ಮಾಡಿದ್ದೇವೆ. ತೋಟಗಾರಿಕೆ ಬೆಳೆಗಳಲ್ಲಿ ಕೂಡ ವಿಶೇಷವಾದಂಥ ತೊಂದರೆಗಳು, ಲುಕ್ಸಾನ್‌ಗಳು ಆಗಿರುವಂಥದ್ದನ್ನು ನಾವು ಕಂಡಿದ್ದೇವೆ. ಸುಮಾರು 20.37 ಲಕ್ಷ ಹೆಕ್ಟೇರ್‌ನಲ್ಲಿ ತೋಟಗಾರಿಕೆ ಬೆಳೆ ಬಿತ್ತನೆ ಆಗಿದ್ದು, 69,704 ಹೆಕ್ಟೇರ್ ಪ್ರದೇಶದ ಬೆಳೆ ಮಳೆ ಕೊರತೆಯಿಂದ ಒಣಗಿ, ಅಂದಾಜು ಸುಮಾರು 299 ಕೋಟಿ ರೂಪಾಯಿಗಳ ತೋಟಗಾರಿಕೆ ಬೆಳೆ ಹಾನಿಯಾಗಿರುವುದನ್ನು ಕೂಡ ನಾವು estimate ಮಾಡಿದ್ದೇವೆ. ವಿಶೇಷವಾಗಿ ಮಳೆಯ ಕೊರತೆಯಿಂದಾಗಿ ಸುಮಾರು 3,475 ಸಣ್ಣ ಕೆರೆಗಳಲ್ಲಿ ಸುಮಾರು 1,242 ಕೆರೆಗಳಿಗೆ ನೀರೇ ಬಂದಿಲ್ಲ. 1,294 ಕೆರೆಗಳಿಗೆ ಶೇಕಡ 50ರಷ್ಟು ಮಾತ್ರ ತುಂಬಿವೆ. ಕೇವಲ 195 ಕೆರೆಗಳು ಮಾತ್ರ ಪೂರ್ತಿ ತುಂಬಿರುವುದನ್ನು ನಾವು ಕಂಡಿದ್ದೇವೆ. ಈಗಾಗಲೇ 123 ತಾಲ್ಲೂಕುಗಳನ್ನು ಬರ ಪೀಡಿತ ಎಂದು ಘೋಷಿಸಲಾಗಿದೆ. ನಾವು ಜಿಲ್ಲಾಧಿಕಾರಿಗಳ ಸಮನ್ವಯದಲ್ಲಿ ಜಿಲ್ಲಾ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ಒಂದಷ್ಟು ಬೇರೆ ಬೇರೆ ಹೆಜ್ಜೆಗಳನ್ನಿಟ್ಟು ಕುಡಿಯುವ ನೀರು ಇರಬಹುದು, ಬೇರೆ ಬೇರೆ ವ್ಯವಸ್ಥೆಗಳನ್ನು ನೀರಿಗೆ ಸಂಬಂಧಪಟ್ಟಂತೆ ಮಾಡಬೇಕೆಂದು ಹೇಳಿ ಕಾರ್ಯಾಚರಣೆಯನ್ನು ಮಾಡಿ, ಖಾಸಗಿ ದೂರವಾಣಿಗಳ ಸೇವೆಯನ್ನು ಬೇರೆ ಬೇರೆ ಕಡೆ ಪಡೆಯುವಂಥದ್ದು, ಸಾಗಾಣಿಕೆ ಮುಖಾಂತರ ನೀರು ಪೂರೈಕೆ ಮಾಡುವಂಥದ್ದು, ಹೈಡ್ರಾಫ್ರಾಕ್ಚರಿಂಗ್ ಮಾಡುವಂಥದ್ದು, ದುರಸ್ತಿ ಮತ್ತು ಪುನಃಶ್ಚೇತನ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳುವುದು, ಅನಿವಾರ್ಯ ಇದ್ದಂತಹ ಸಂದರ್ಭಗಳಲ್ಲಿ ಕೊಳವೆ ನೀರಿನ ಬಾವಿಗಳನ್ನು ಕೊರೆಯುವ ಕೆಲಸ ಕಾರ್ಯಗಳನ್ನು ಮಾಡಿದ್ದೇವೆ. ದಿನಾಂಕ : 28.09.2011 ರಿಂದಲೇ ಇದಕ್ಕೆ ಬೇಕಾದಂಥ ಎಲ್ಲಾ ಪ್ರಯತ್ನಗಳನ್ನು ಮಾಡಿದ್ದೇವೆ. ಅದಕ್ಕೆ ಬೇಕಾದಂಥ ಕಂಟ್ರೋಲ್ ರೂಮುಗಳನ್ನು ಪ್ರತಿ ತಾಲ್ಲೂಕಿನಲ್ಲಿ ನಾವು ತೆಗೆದು ಅದನ್ನು ಚುರುಕುಗೊಳಿಸಿದ್ದು, ದೂರು ಸ್ವೀಕೃತಿಯಾದ ತಕ್ಷಣ 24 ಗಂಟೆಯೊಳಗೆ ಸ್ಪಂದಿಸಿ ಕುಡಿಯುವ ನೀರಿನ ಸಮಸ್ಯೆಯನ್ನು ಬಗೆಹರಿಸುವಂಥ ಪ್ರಯತ್ನಗಳನ್ನು ಮಾಡುವಂಥ ಕಟ್ಟುನಟ್ಟಿನ ನಿರ್ದೇಶನ ಕೊಟ್ಟಿದ್ದೇವೆ ಮತ್ತು ಅನುಷ್ಠಾನ ಕೂಡಾ ಆಗಿದೆ.

ಶ್ರೀ ಸಿದ್ದರಾಮಯ್ಯ (ವಿರೋಧ ಪಕ್ಷದ ನಾಯಕರು) :- ಕಂಟ್ರೋಲ್ ರೂಮ್ ಎಲ್ಲೆಲ್ಲಿ ಮಾಡಿದ್ದೀರಿ? ಹೇಳಿ ಸ್ವಾಮಿ. ಏಕೆಂದರೆ record straight

ಆಗಿರಬೇಕು. ಯಾವ ಯಾವ ತಾಲ್ಲೂಕುಗಳಲ್ಲಿ? ನಾವು ನೀವು ಹೋಗೋಣ ನಡೆಯಿರಿ, ಯಾವ ಯಾವ ತಾಲ್ಲೂಕುಗಳಲ್ಲಿ ಕಂಟ್ರೋಲ್ ರೂಮುಗಳಿದೆ?

ಶ್ರೀ ಬಂಡೆಪ್ಪ ಖಾಶೆಂಪೂರ್ :– ನಾಳೆಯೇ ಹೋಗೋಣ

ಶ್ರೀ ಡಿ.ವಿ. ಸದಾನಂದಗೌಡ :– ಎಲ್ಲಾ ತಾಲ್ಲೂಕುಗಳಲ್ಲಿ ಕಂಟ್ರೋಲ್ ರೂಮುಗಳನ್ನು ತೆರೆಯುವಂತೆ ಸೂಚನೆಯನ್ನು ಕೊಟ್ಟಿದ್ದೇವೆ. ಸುಮಾರು 292 ಗ್ರಾಮಗಳಿಗೆ ಕುಡಿಯುವ ನೀರನ್ನು ಟ್ಯಾಂಕರ್‌ಗಳಲ್ಲಿ ಪೂರೈಸುವ ಅನಿವಾರ್ಯತೆ ಬಂದು, ಅದನ್ನು ಸಮಸ್ಯಾತ್ಮಕ ಗ್ರಾಮಗಳಲ್ಲಿ ಟ್ಯಾಂಕರ್‌ಗಳಲ್ಲಿ ಕೊಡುವಂಥ ಕೆಲಸ ಕಾರ್ಯಗಳನ್ನು ಮಾಡಿದ್ದೇವೆ. ಶಾಸಕರ ಅಧ್ಯಕ್ಷತೆಯಲ್ಲಿ ಇರುವಂಥ ಕಾರ್ಯಪಡೆ, ಅದರ ಸಮಿತಿಯ ಶಿಫಾರಸ್ಸುಗಳನ್ವಯ ಜಿಲ್ಲಾ ಪಂಚಾಯಿತಿಗಳಿಗೆ ರೂ. 127 ಕೋಟಿ ಮೊತ್ತದ ಹಣವನ್ನು ಬಿಡುಗಡೆ ಮಾಡಿದ್ದೇವೆ. 2487 ಹೊಸ ಬೋರ್‌ವೆಲ್‌ಗಳನ್ನು ಕೊರೆಯುವ ಕೆಲಸ ಕಾರ್ಯಗಳನ್ನು ಬರಪೀಡಿತ ಪ್ರದೇಶಗಳಲ್ಲಿ ಈಗಾಗಲೇ ಮಾಡಲಾಗಿದೆ. ಕುಡಿಯುವ ನೀರಿನ ಸಮಸ್ಯಾತ್ಮಕ ಗ್ರಾಮಗಳಿಗೆ ಒಂದು ಪಂಪು ಮತ್ತು ಮೋಟಾರು ಪೈಪ್‌ಲೈನ್ ಇದರ ದುರಸ್ತಿ ಕಾರ್ಯಗಳಿಗೆ STRF ನಿಧಿಯಿಂದ ರೂ. 182.25 ಕೋಟಿ ಬಿಡುಗಡೆ ಮಾಡುವ ಕೆಲಸಕಾರ್ಯಗಳನ್ನು ಮಾಡಿದ್ದೇವೆ. ನಗರಾಭಿವೃದ್ಧಿ ಇಲಾಖೆಯಿಂದ ಕೂಡಾ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಕುಡಿಯುವ ನೀರಿನ ಸಮಸ್ಯೆ ಪರಿಹರಿಸುವುದಕ್ಕೆ STRF ನಿಧಿಯಿಂದ ರೂ. 10 ಕೋಟಿ ಅನುದಾನ ಬಿಡುಗಡೆ ಮಾಡಿದ್ದೇವೆ. ಪದೇ ಪದೇ ನೀರಿನ ವ್ಯತ್ಯಯ ಎಲ್ಲೆಲ್ಲಿ ಆಗುತ್ತಿದೆ ಅಂಥ ಜಿಲ್ಲೆಗಳಲ್ಲಿ ದಿ: 01.10.2011 ರಲ್ಲಿ ಸಮಸ್ಯಾತ್ಮಕ ಜನವಸತಿಗಳಿಗೆ ಶಾಶ್ವತ ಹಾಗೂ ಸುರಕ್ಷಿತ ಕುಡಿಯುವ ನೀರು ಕಲ್ಪಿಸುವುದಕ್ಕೆ ಬೇಕಾದಂಥ ಸುಮಾರು ರೂ. 2590 ಕೋಟಿ ಅಂದಾಜಿನ 217 ಯೋಜನೆಗಳು, on going ಅದೆಲ್ಲವನ್ನೂ 23 ಜಿಲ್ಲೆಗಳಲ್ಲಿ ಕೈಗೊಳ್ಳುವುದಕ್ಕೆ ರಾಜ್ಯ ಮಟ್ಟದ ಯೋಜನಾ ಮಂಜೂರಾತಿ ಸಭೆಯಲ್ಲಿ ಅನುಮೋದನೆಯನ್ನು ಕೊಡಲಾಗಿದೆ. ಇದರಿಂದಾಗಿ ಸುಮಾರು 4112 ಜನ ವಸತಿಗೆ ಅನುಕೂಲವಾಗುವಂಥ ಕೆಲಸ ಕಾರ್ಯಗಳು ಆಗಿದೆ. ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆ ರಾಜ್ಯ ಮತ್ತು ಕೇಂದ್ರ ವಲಯದ ರಾಷ್ಟ್ರೀಯ ಕುಡಿಯುವ ನೀರಿನ ಸರಬರಾಜು ಯೋಜನೆಯಡಿಯಲ್ಲಿ ಸುಮಾರು 27,765 ಕುಡಿಯುವ ನೀರಿಗೆ ಸಂಬಂಧಪಟ್ಟಂಥ ಕಾಮಗಾರಿಗಳನ್ನು ಸುಮಾರು ಒಂದೂವರೆ ಸಾವಿರ ಕೋಟಿ ಅಂದಾಜಿನ ಕ್ರಿಯಾ ಯೋಜನೆ ಅನುಮೋದಿಸಿ, ಈ ತನಕ ರೂ. 1424 ಕೋಟಿ ಇದಕ್ಕೆ ಬಿಡುಗಡೆ ಮಾಡಿದ್ದೇವೆ. ಇದರಲ್ಲಿ ರೂ. 806 ಕೋಟಿ ವೆಚ್ಚ ಆಗಿದೆ ಮತ್ತು ಕೆಲವು ಅನುಮೋದನೆಯಲ್ಲಿ ಬಾಕಿ ಕಾಮಗಾರಿಗಳು ನಡೆಯುತ್ತಿವೆ. ವಿಶೇಷವಾಗಿ ಗುಳೆ ಹೋಗುವ ಬಗ್ಗೆ

ಪ್ರಸ್ತಾಪ ಮಾಡಿದ್ದಾರೆ. ಗುಳೆ ಹೋಗದ ರೀತಿಯಲ್ಲಿ ಅವರಿಗೆ ಉದ್ಯೋಗ ಒದಗಿಸುವಂಥ ಕೆಲಸವನ್ನು ಅತ್ಯಂತ ಯಶಸ್ವಿಯಾಗಿ ರಾಜ್ಯದಲ್ಲಿ ಮಾಡುವಂಥ ಪ್ರಯತ್ನಗಳನ್ನು ನಾವು ಮಾಡಿದ್ದೇವೆ. ಉದ್ಯೋಗ ಖಾತರಿಯಲ್ಲಿ ಸುಮಾರು 2 ಲಕ್ಷ 99 ಸಾವಿರದ 286 ಕಾಮಗಾರಿಗಳನ್ನು ರಾಜ್ಯಾದ್ಯಂತ ಬರ ಪೀಡಿತ ಪ್ರದೇಶಗಳಲ್ಲಿ ಕೈಗೆತ್ತಿಕೊಂಡಿದ್ದೇವೆ. ಇಲ್ಲಿಯ ತನಕ ಸುಮಾರು 11 ಲಕ್ಷದ 22 ಸಾವಿರದ 209 ಕುಟುಂಬಗಳಿಗೆ ಸುಮಾರು 1671 ಕೋಟಿ ಮೊತ್ತದ ಉದ್ಯೋಗವನ್ನು ಒದಗಿಸುವಂಥ ಕೆಲಸ ಕಾರ್ಯವನ್ನು ಮಾಡಿದ್ದೇವೆ. ರಾಜ್ಯದಲ್ಲಿ ಒಟ್ಟು 1 ಕೋಟಿ 39 ಲಕ್ಷ 52 ಸಾವಿರದ 974 ಮೇವು ಅವಲಂಬಿತ ಜಾನುವಾರುಗಳಿದ್ದು, ಇದರಲ್ಲಿ 91 ಲಕ್ಷದ 64 ಸಾವಿರದ 820 ಟನ್‌ಗಳ ಮೇವು ಲಭ್ಯವಿದೆ. ಇದು ಮುಂದಿನ 20 ವಾರಗಳಿಗೆ ಸಾಕಾಗುವಷ್ಟು ಮೇವು ನಮ್ಮಲ್ಲಿ ಇನ್ನೂ ಸ್ಟಾಕ್ ಇದೆ. 24 ಜಿಲ್ಲೆಗಳಲ್ಲಿ ಸುಮಾರು 34 ಗೋಶಾಲೆಗಳನ್ನು ಸ್ಥಾಪಿಸಲಾಗಿದೆ. ಇದರಲ್ಲಿ ಸುಮಾರು 16600 ಜಾನುವಾರುಗಳನ್ನು ಸಂರಕ್ಷಿಲಾಗಿದೆ. 2 ಮೇವಿನ ಬ್ಯಾಂಕ್‌ಗಳನ್ನು ಗದಗ ಜಿಲ್ಲೆಯಲ್ಲಿ ಮತ್ತು ಚಾಮರಾಜ ಜಿಲ್ಲೆಗಳಲ್ಲಿ ಸ್ಥಾಪಿಸಲಾಗಿದೆ. ಪಶುಸಂಗೋಪನಾ ಇಲಾಖೆಯಿಂದ ವಿಶೇಷ ಅನುದಾನದಲ್ಲಿ ಮೇವಿನ ಬೀಜದ ಪೊಟ್ಟಣವನ್ನು ಸುಮಾರು ರೂ. 177 ಲಕ್ಷಗಳ ವೆಚ್ಚದಲ್ಲಿ ರೈತರಿಗೆ ಪೂರೈಸುವ ಕೆಲಸಕಾರ್ಯಗಳನ್ನು ನಾವು ಮಾಡಿದ್ದೇವೆ. ಕಂದಾಯ ಇಲಾಖೆಯ STRF ನಿಧಿಯಡಿಯಲ್ಲಿ ಜಾನುವಾರುಗಳಿಗೆ ರೋಗ ನಿರೋಧಕ ಲಸಿಕೆ, ಗೋಶಾಲೆಗಳ ಸ್ಥಾಪನೆ, ಮೇವು ಖರೀದಿಗೆ ಸಂಬಂಧಿಸಿದಂತೆ ಸುಮಾರು ರೂ. 653 ಲಕ್ಷ ವೆಚ್ಚಗಳನ್ನು ಇದರಲ್ಲಿ ಕೂಡಾ ನಾವು ಮಾಡಿದ್ದೇವೆ. ವಿಶೇಷವಾಗಿ ನಾವು ಮೇವು ಖರೀದಿಗೆ ಸಂಬಂಧಪಟ್ಟಂತೆ ದರಪಟ್ಟಿಯನ್ನು ಅದು 6 ವರ್ಷಗಳಿಂದ ಪರಿಷ್ಕರಣೆ ಆಗಿರಲಿಲ್ಲ. ಈ ಅವಶ್ಯಕತೆಯನ್ನು ಮನಗಂಡ ಸರ್ಕಾರ ದರಪಟ್ಟಿಯನ್ನು ಕೂಡಾ ಪರಿಷ್ಕರಣೆ ಮಾಡುವಂಥ ಕೆಲಸಕಾರ್ಯವನ್ನು ಮಾಡಿದ್ದೇವೆ. ಮೇವಿನ ಕೊರತೆ ಎದುರಿಸಲಿಕ್ಕೆ ಈಗಾಗಲೇ ನಾವು ತೆಗೆದುಕೊಂಡಂಥ ಕ್ರಮಗಳಲ್ಲಿ ರಾಜ್ಯದಲ್ಲಿ ಲಭ್ಯವಿರುವ ಮೇವನ್ನು ಅಂತರ್ ಜಿಲ್ಲಾ ಸಾಗಾಣಿಕೆ ಮೂಲಕ ನಿರ್ವಹಿಸುವ ಕೆಲಸಕಾರ್ಯಗಳನ್ನು ಕೈಗೆತ್ತಿಕೊಳ್ಳುವಂಥದ್ದನ್ನು ಮಾಡಿದ್ದೇವೆ. ಪ್ರಸಕ್ತ ಸಾಲಿನಲ್ಲಿ ಸುಮಾರು ಈಗಾಗಲೇ ವಿಶೇಷವಾದಂಥ ಚರ್ಚೆ ವಿದ್ಯುತ್ ಬಗ್ಗೆ ಆಗಿರುವುದನ್ನು ನಾವು ಕಂಡಿದ್ದೇವೆ. ರಾಜ್ಯದಲ್ಲಿ 47,665 ವಿದ್ಯುತ್ ಪರಿವರ್ತಕ ಕೆಟ್ಟು ಹೋಗಿದೆ. ಇದರಲ್ಲಿ ಸುಮಾರು 46918 ಪರಿವರ್ತಕಗಳನ್ನು ಬದಲಿಸಿ ಸಮರ್ಪಕ ವಿದ್ಯುತ್ ಪೂರೈಕೆ ಮಾಡುವಂಥ ಕೆಲಸಕಾರ್ಯಗಳನ್ನು ಮಾಡಿದ್ದೇವೆ. ಪ್ರತಿ ವಿಧಾನಸಭಾ ಕ್ಷೇತ್ರದಲ್ಲೂ ಕೂಡಾ ಸುಟ್ಟು ಹೋಗಿರುವಂಥ ವಿದ್ಯುತ್ ಪರಿವರ್ತಕಗಳನ್ನು

ತುರ್ತಾಗಿ ದುರಸ್ತಿ ಮಾಡುವುದಕ್ಕೆ ಆಯಾ ವಿದ್ಯುತ್ ಸರಬರಾಜು ನಿಗಮಗಳಿಗೆ ಸೂಚನೆ ಕೊಡಲಾಗಿದೆ. ವಿಶೇಷವಾಗಿ ಆಣೆವಾರಿ ಪ್ರಕಾರ 24 ಜಿಲ್ಲೆಗಳಲ್ಲಿ ಭೂ ಕಂದಾಯವನ್ನು ಮನ್ನಾ ಮಾಡಲು ಈಗಾಗಲೇ ಕ್ರಮ ಕೈಗೊಂಡಿದ್ದೇವೆ. ವಿವಿಧ ಹಣಕಾಸು ಸಂಸ್ಥೆಗಳಿಂದ ರೈತ ಪಡೆದಿರುವಂಥ ಅಲ್ಪಾವಧಿ ಬೆಳೆ ಸಾಲವನ್ನು ಮಧ್ಯಮಾವಧಿ ಸಾಲವನ್ನಾಗಿ ಪರಿವರ್ತನೆ ಮಾಡುವಂಥದ್ದು. ಮಧ್ಯಮಾವಧಿ ಸಾಲವನ್ನು ದೀರ್ಘಾವಧಿ ಸಾಲವನ್ನಾಗಿ ಪರಿವರ್ತನೆ ಮಾಡಲಿಕ್ಕೆ ಕ್ರಮ ಕೈಗೊಂಡಿದ್ದೇವೆ. ಈಗಾಗಲೇ STRF ನಿಧಿಯಿಂದ ಕೇಂದ್ರ ಸರ್ಕಾರ ಸುಮಾರು ರೂ. 126.76 ಹಣ ಬಿಡುಗಡೆ ಮಾಡಿದೆ. ಈ ಮೊತ್ತ ಈಗಾಗಲೇ ನಾವು ಬರ ಪೀಡಿತ ಪ್ರದೇಶಗಳಿಗೆ ಬಿಡುಗಡೆ ಮಾಡುವಂಥ ಕೆಲಸ ಕಾರ್ಯಗಳನ್ನು ಮಾಡಿದ್ದೇವೆ. ವಾರಾಂತ್ಯದಲ್ಲಿ 24.03.2012 ರವರೆಗೆ ಅಂದರೆ ಮೊನ್ನೆವರೆಗೆ ಜಿಲ್ಲಾಧಿಕಾರಿಗಳ ಪಿ.ಡಿ. ಖಾತೆಯಲ್ಲಿ ಇಡೀ ರಾಜ್ಯದಲ್ಲಿ ಒಟ್ಟು ರೂ. 151.70 ಕೋಟಿ ಹಣ ಲಭ್ಯವಿದೆ. ಯಾವುದೇ ಅನುದಾನಕ್ಕೆ ರಾಜ್ಯದ ಯಾವುದೇ ಜಿಲ್ಲೆಗಳಲ್ಲಿ ಕೊರತೆ ಇಲ್ಲ. ಇದನ್ನು ಅತ್ಯಂತ ಯಶಸ್ವಿಯಾಗಿ ಮುಂದುವರೆಸುವ ಕೆಲಸಕಾರ್ಯಗಳಿಗೆ ಯಾವಾಗ ಅವರಿಂದ ಬೇಡಿಕೆ ಬರುತ್ತದೋ, ಆ ಬೇಡಿಕೆಗಳಿಗೆ ಅನುಗುಣವಾಗಿ ರಾಜ್ಯದಿಂದ ಈ ಹಣವನ್ನು ಬಿಡುಗಡೆ ಮಾಡುವ ಕೆಲಸಕಾರ್ಯಗಳನ್ನು ಮಾಡುತ್ತಿದ್ದೇವೆ. ಬರ ಪರಿಸ್ಥಿತಿಯಲ್ಲಿ ಕೇಂದ್ರ ಸರ್ಕಾರಕ್ಕೆ ಇದನ್ನೆಲ್ಲಾ ಪರಿಶೀಲಿಸಿ ನಾವು ಬಿನ್ನವತ್ತಳೆಯನ್ನು ಕೇಂದ್ರಕ್ಕೆ ಸಲ್ಲಿಸಿದ್ದೇವೆ. ಸುಮಾರು ರೂ. 2605.99 ಕೋಟಿಯ ಸಹಾಯ ಕೋರಿ ಕೇಂದ್ರಕ್ಕೆ ಸಲ್ಲಿಸಿದ್ದೇವೆ. ಇದರ ಹಣವನ್ನು ಬಿಡುಗಡೆ ಮಾಡಬೇಕೆಂದು ಈಗ ಕೇಂದ್ರದ ಜೊತೆಗೆ ಕಾಲಕಾಲಕ್ಕೆ ಸಂಪರ್ಕದಲ್ಲಿದ್ದೇವೆ. ನಾವು ಸಲ್ಲಿಸಿದ ಈ ಬಿನ್ನವತ್ತಳೆ ಇದು N.I.D.M. ಅವರು ಇಡೀ ದೇಶದಲ್ಲಿ ಅತ್ಯಂತ ಉತ್ತಮವಾದಂಥ ಒಂದು ಬಿನ್ನವತ್ತಳೆ ಎಂದು ನಾವು ಸಲ್ಲಿಸಿರುವ ಕೋರಿಕೆಗೆ ಪ್ರಶಂಸೆಯನ್ನು ಕೂಡ ಮಾಡಿದ್ದಾರೆ.

ಶ್ರೀ ಸಿದ್ದರಾಮಯ್ಯ :– ಅದಕ್ಕೆ ಅವರು ದುಡ್ಡು ಕೊಟ್ಟಿಲ್ಲ.

ಶ್ರೀ ಡಿ.ವಿ. ಸದಾನಂದಗೌಡ :– ಎಷ್ಟು ಅತ್ಯಂತ ಯಶಸ್ವಿಯಾಗಿ ನಾನು ಮತ್ತೆ ಅದನ್ನು ಉಲ್ಲೇಖ ಮಾಡುವುದಕ್ಕೆ ಇಷ್ಟಪಡುವುದಿಲ್ಲ. ಯಾವ ಒಂದು ಕೇಂದ್ರದ ತಂಡ ಇಲ್ಲಿ ಬಂದಿತ್ತೋ, ಶ್ರೀ ವಿಜಯಕುಮಾರ್ ಅವರು ತಂಡದ ನೇತೃತ್ವ ವಹಿಸಿಕೊಂಡಿದ್ದರೋ, ಅವರೇ ಇಡೀ ನಮ್ಮ ನಂತರ ಮಾಧ್ಯಮದ ಮೂಲಕ ಮಾತನಾಡುವಾಗ ಏನು ಹೇಳಿದರು ಎಂದರೆ ರಾಜ್ಯದಲ್ಲಿ ಅತ್ಯಂತ ಉತ್ತಮವಾಗಿ ಬರ ಪರಿಹಾರದ ಕಾಮಗಾರಿಗಳನ್ನು ರಾಜ್ಯ ಸರ್ಕಾರ ಮಾಡುತ್ತಿದೆ. ವಿಶೇಷವಾದಂಥ ಲುಕ್ಸಾನ್ ಆಗಿದೆ ಎಂದು ನಾವ್ಯಾರೂ

ಹೇಳುತ್ತಿರುವಂಥದ್ದಲ್ಲ, ಕೇಂದ್ರದಿಂದ ಬಂದಂಥ ತಂಡದ ಮುಖ್ಯಸ್ಥರಾದ ಶ್ರೀ ವಿಜಯಕುಮಾರ್‌ರವರು ಹೇಳಿರುವುದನ್ನು ನಾನು ಮತ್ತೆ ಮತ್ತೆ ಉಲ್ಲೇಖ ಮಾಡುವುದಕ್ಕೆ ಇಷ್ಟಪಡುವುದಿಲ್ಲ. ಜಿಲ್ಲಾಧಿಕಾರಿಗಳು ಮತ್ತು ಕಾರ್ಯನಿರ್ವಾಹಣಾಧಿಕಾರಿಗಳು ಪ್ರತಿ ವಾರದಲ್ಲಿ ಅಲ್ಲಿ ನಡೆದಂಥ ಸಭೆಯ ಸ್ಥಳೀಯ ಅಗತ್ಯತೆಗಳನ್ನು ತಕ್ಷಣ ಅವರು ರಾಜ್ಯಕ್ಕೆ ತಿಳಿಸುವಂಥ ಕೆಲಸಕಾರ್ಯಗಳನ್ನು ಮಾಡುವಂಥ ಪ್ರಯತ್ನಗಳನ್ನು ಅವರು ಮಾಡಿದ್ದಾರೆ. ಈ ರೀತಿ ಒಟ್ಟಾರೆ ಬೇರೆ ಬೇರೆ ನಿಧಿಯಿಂದ ಅಂದರೆ ಒಟ್ಟು ರೂ. 321.31 ಕೋಟಿಗಳನ್ನು ನಾವು ಈಗಾಗಲೇ ಬಿಡುಗಡೆ ಮಾಡಿದ್ದೇವೆ. ವಿಶೇಷವಾಗಿ ಕುಡಿಯುವ ನೀರಿನ ತುರ್ತು ರೂ. 202 ಕೋಟಿಗಳ ಕ್ರಿಯಾ ಯೋಜನೆಯನ್ನು ಅನುಮೋದಿಸಿ, ರೂ. 122 ಕೋಟಿಗಳನ್ನು ಬಿಡುಗಡೆ ಮಾಡಿರುವಂಥದ್ದು, ಜಿಲ್ಲಾಧಿಕಾರಿಗಳಿಂದ ಬಿಡುಗಡೆಯಾದ ಹಣ ರೂ. 182.25, ವಿಶೇಷವಾಗಿ ಈ ಕೆಲಸಕಾರ್ಯಗಳನ್ನು ಮಾಡುವಂಥ ಪ್ರಯತ್ನಗಳನ್ನು ನಮ್ಮ ಕಡೆಯಿಂದ ಮಾಡಲಾಗಿದೆ. NAREGA ಯೋಜನೆಯಡಿಯಲ್ಲಿ ನಾವು ಈಗಾಗಲೇ ಲಭ್ಯವಿರುವಂಥ ಹಣದಿಂದ ಎಲ್ಲಾ ಕಡೆಗಳಲ್ಲೂ ಕೂಡ ಇದನ್ನು ಸದುಪಯೋಗ ಮಾಡಿಕೊಳ್ಳುವಂಥ ಕೆಲಸ ಕಾರ್ಯಗಳನ್ನು ಮಾಡಿದ್ದೇವೆ. ಇನ್ನೂ ನಮಗೆ ಸುಮಾರು 1,280 ಕೋಟಿಗಳಷ್ಟು ಮೊತ್ತ ವಿನಿಯೋಗ ಮಾಡಲು ಲಭ್ಯವಿದೆ. ಮೊನ್ನೆ 400 ಕೋಟಿಗಳ ಬೇಡಿಕೆಯನ್ನು ಸಲ್ಲಿಸಿದ್ದು, 90 ಕೋಟಿ ಬಿಡುಗಡೆ ಮಾಡುವ ಕೆಲಸಕಾರ್ಯ ಮಾಡಿದ್ದೇವೆ. ಈ ರೀತಿ ರಾಜ್ಯದಲ್ಲಿ ಬರಪೀಡಿತ ಪ್ರದೇಶಗಳಲ್ಲಿರುವಂತಹ ಎಲ್ಲಾ ಕೆಲಸ ಕಾರ್ಯಗಳನ್ನು ಅತ್ಯಂತ ಯಶಸ್ವಿಯಾಗಿ ತೆಗೆದುಕೊಳ್ಳುವ ಕೆಲಸಗಳನ್ನು ಮಾಡಿದೆ. ಕುಡಿಯುವ ನೀರಿನ ವಿಚಾರದಲ್ಲಿ ಹೆಚ್ಚಿನ ಆದ್ಯತೆಯನ್ನು ಕೊಡುವ ಕೆಲಸ ಕಾರ್ಯಗಳನ್ನು ಮಾಡಿದ್ದೇವೆ. ಈಗಾಗಲೇ ಮೊನ್ನೆ 36 ಕೋಟಿ, ಅದರ ನಂತರ 19 ಕೋಟಿಗಳನ್ನು ಬೋರ್‌ವೆಲ್ ತೆಗೆಯಲು ಬಿಡುಗಡೆ ಮಾಡಲಾಗಿರುವುದನ್ನು ಈ ಸಂದರ್ಭದಲ್ಲಿ ಪ್ರಸ್ತಾಪಿಸಬಯಸುತ್ತೇನೆ. ವಿಶೇಷವಾಗಿ ಬೇರೆ ಬೇರೆ ಜಿಲ್ಲೆಗಳಲ್ಲಿ ನಡೆಯುತ್ತಿರುವ ಸಭೆಗಳ ವರದಿಗಳನ್ನು ರಾಜ್ಯದಿಂದ ಅತ್ಯಂತ ಸೂಕ್ಷ್ಮವಾಗಿ ಪರಿಗಣಿಸುತ್ತಿದ್ದು, ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಪ್ರತಿ ತಿಂಗಳು ಬರಪೀಡಿತ ಜಿಲ್ಲೆಗಳಿಗೆ ಹಾಗೂ ಅಲ್ಲಿರುವ ತಾಲ್ಲೂಕುಗಳಿಗೆ ಭೇಟಿ ಕೊಟ್ಟು ಅಲ್ಲಿನ ಬೇಡಿಕೆ ಹಾಗೂ ಪರಿಹಾರ ಕಾಮಗಾರಿಗಳ ಬಗ್ಗೆ ತಿಳಿಸಿ ಹೇಳುವ ಕೆಲಸ ಮಾಡುತ್ತಿದ್ದಾರೆ. ಈ ರೀತಿಯಾಗಿ ಬರ ಪರಿಹಾರದ ಪ್ರಯತ್ನ ರಾಜ್ಯ ಸರ್ಕಾರದಿಂದ ಅತ್ಯಂತ ಸುಸೂತ್ರವಾಗಿ ಹಾಗೂ ಯಶಸ್ವಿಯಾಗಿ ನಡೆಯುತ್ತಿದೆ. ಯಾವುದೇ ಭಾಗದಲ್ಲಿ, ಯಾವುದೇ ಸಂದರ್ಭದಲ್ಲಿ ಬೇಡಿಕೆ ಬಂದರೂ ಕೂಡ ಅವುಗಳನ್ನು ಅತ್ಯಂತ

ಸುಸೂತ್ರವಾಗಿ ನಿಭಾಯಿಸುವ ಕೆಲಸ-ಕಾರ್ಯಗಳನ್ನು ರಾಜ್ಯ ಸರ್ಕಾರ ಮಾಡುತ್ತಿದೆ. ನಾನು ಸದನದ ಎಲ್ಲಾ ಸದಸ್ಯರಿಗೆ ವಿನಂತಿ ಮಾಡಿಕೊಳ್ಳುತ್ತಿದ್ದೇನೆ. ಎಲ್ಲೆಲ್ಲಿ ವಿಶೇಷ ಬೇಡಿಕೆಗಳಿದ್ದರೆ ಯಾವುದೇ ಸಂದರ್ಭದಲ್ಲಿ ತಿಳಿಸಿದರೂ ಕೂಡಾ ಯಾವ ರೀತಿಯಲ್ಲಿ ಇದಕ್ಕೆ ಕಾರ್ಯೋನ್ಮುಖ ಆಗಬೇಕೆಂದರೂ ಹೇಳಿದರೂ ಆ ಎಲ್ಲಾ ಸಲಹೆಗಳನ್ನು ಸ್ವೀಕಾರ ಮಾಡಿ ತಕ್ಷಣ ಸ್ಪಂದಿಸುತ್ತೇವೆ. ರಾಜ್ಯದಲ್ಲಿರುವ ಭೀಕರ ಬರವನ್ನು ಎದುರಿಸುವ ಪ್ರಯತ್ನವನ್ನು ಅತ್ಯಂತ ಯಶಸ್ವಿಯಾಗಿ ನಿಭಾಯಿಸುತ್ತೇವೆನ್ನುವ ಮಾತನ್ನು ಹೇಳಿ, ಈ ಬರ ಕಾಮಗಾರಿಯಲ್ಲಿ ಯಾವತ್ತು ರಾಜ್ಯ ಸರ್ಕಾರ ವಿಫಲವಾಗಿಲ್ಲ. ಬರ ಪರಿಹಾರ ಕಾಮಗಾರಿಗಳನ್ನು ಅತ್ಯಂತ ಸೂಕ್ಷ್ಮವಾಗಿ ಗಮನಿಸುವಂತದ್ದು. ಇದನ್ನು ನಿಭಾಯಿಸುವ ಕೆಲಸ ರಾಜ್ಯ ಸರ್ಕಾರ ಮಾಡುತ್ತದೆ.

ಶ್ರೀ ಸುಭಾಷ್ ವಿ. ಗುತ್ತೇದಾರ್ :- ತೊಗರಿ ಖರೀದಿ ಬಗ್ಗೆ ಉತ್ತರದಲ್ಲಿ ಏನನ್ನೂ ಹೇಳಲಿಲ್ಲ.

ಶ್ರೀ ಶ್ರೀಕಾಂತ ಕುಲಕರ್ಣಿ :- ಅಧ್ಯಕ್ಷರೆ, ಕೃಷ್ಣಾ ನದಿ ಸಂಪೂರ್ಣ ಬತ್ತಿ ಹೋಗಿದ್ದು, ನಗರಗಳಲ್ಲಿ ನೀರಿಲ್ಲ. ಇನ್ನು 75 ಬೋರ್‌ವೆಲ್‌ಗಳನ್ನು ಕೊಡಬೇಕು.

(ಗೊಂದಲ)

ಅಧ್ಯಕ್ಷರು :- ಯಾರಾದರೂ ಒಬ್ಬರು ಹೇಳಿ. ವಿರೋಧ ಪಕ್ಷದ ನಾಯಕರು ಮಾತನಾಡಿದ ನಂತರ clarification ಕೇಳಿ.

(ಗೊಂದಲ)

ಶ್ರೀ ವೆಂಕಟರಾವ್ ನಾಡಗೌಡ :- ಮಾನ್ಯ ಅಧ್ಯಕ್ಷರೆ, ನಗರ ಪ್ರದೇಶಕ್ಕೆ ಕುಡಿಯುವ ನೀರಿಗೆ ಒಂದು ರೂಪಾಯಿ ಕೂಡಾ ಬಿಡುಗಡೆಯಾಗಿಲ್ಲ.

ಶ್ರೀ ಸಿದ್ದರಾಮಯ್ಯ :- ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳು ಏನು ಇವತ್ತು ರಾಜ್ಯದಲ್ಲಿ ಭೀಕರ ಬರವಾಗಿದೆ, ಇದರ ಬಗ್ಗೆ ನಮ್ಮ ಚರ್ಚೆಗೆ ಉತ್ತರವನ್ನೇನೋ ಕೊಟ್ಟಿದ್ದಾರೆ. ಆದರೆ ಉತ್ತರ ಸಮರ್ಪಕವಾಗಿಲ್ಲ, ಜೊತೆಗೆ ಸತ್ಯಕ್ಕೆ ದೂರವಾದ ಅನೇಕ ವಿಚಾರಗಳಿಗೆ. ನಾನು ಮುಖ್ಯಮಂತ್ರಿಗಳು ಸತ್ಯಕ್ಕೆ ದೂರವಾದ ವಿಚಾರ ಹೇಳುತ್ತಿದ್ದಾರೆ ಎಂದು ಹೇಳುತ್ತಿಲ್ಲ. ಪಾಪ, ಅಧಿಕಾರಿಗಳು ಹಾಗೆ ಹೇಳಿಸುತ್ತಿದ್ದಾರೆ. ಯಾಕೆ ಹೇಳುತ್ತಿದ್ದೇನೆಂದರೆ, 2400 ಹೊಸ ಬೋರ್‌ವೆಲ್‌ಗಳನ್ನು ತೋಡಿಸಿದ್ದೇವೆ. ಬರಗಾಲ ಬಂದ ಮೇಲೆ ಎಂದು ಹೇಳಿದಿರಿ. ನಮ್ಮ ಮೈಸೂರು ಜಿಲ್ಲೆಯಲ್ಲಿ ನನಗೆ ಗೊತ್ತಿರುವ ಮಟ್ಟಿಗೆ ಒಂದೇ ಒಂದು ಹೊಸ ಬೋರ್‌ವೆಲ್ ತೋಡಿಸಿಲ್ಲ. ಅವರು ಯಾವ ಯಾವ ಜಿಲ್ಲೆಗಳಲ್ಲಿ ಎಷ್ಟೆಷ್ಟು ಬೋರ್‌ವೆಲ್‌ಗಳನ್ನು ತೋಡಿಸಿದ್ದಾರೆಂದು ಹೇಳಲಿ. ಜಿಲ್ಲಾವಾರು, ಮೈಸೂರು ಜಿಲ್ಲೆಯಲ್ಲಿ ಎಷ್ಟು ಬೋರ್‌ವೆಲ್ ತೋಡಿಸಿದ್ದೀರಿ ಮತ್ತು

ಎಂ.ಎಲ್.ಎ.ಗಳು task-force ನಲ್ಲಿ ಏನೇನು ಶಿಫಾರಸ್ಸು ಮಾಡಿದ್ದಾರೆ? ಅವರು ಎಷ್ಟು ದುಡ್ಡು ಕೇಳಿದ್ದಾರೆ? ಮೇವಿಗೆ ಎಷ್ಟು ದುಡ್ಡು ಕೇಳಿದ್ದಾರೆ? ಕುಡಿಯುವ ನೀರಿಗೆ ಎಷ್ಟು ದುಡ್ಡು ಕೇಳಿದ್ದಾರೆ? ಕೆಲಸಕ್ಕೆ ಎಷ್ಟು ದುಡ್ಡು ಕೇಳಿದ್ದಾರೆ? ಇವರು ಎಷ್ಟು ದುಡ್ಡು ಬಿಡುಗಡೆ ಮಾಡಿದ್ದಾರೆ? ಎಷ್ಟು ಖರ್ಚು ಮಾಡಿದ್ದಾರೆ? ನಮಗಿರುವ ಮಾಹಿತಿಯ ಪ್ರಕಾರ ಈ ಸಾರಿ ಸಿ.ಆರ್.ಎಫ್. ನಲ್ಲಿ ಬಂದಿರುವ ಹಣ ರಾಜ್ಯ ಮತ್ತು ಕೇಂದ್ರ ಸರ್ಕಾರದ್ದು 75:25 ಇದೆ. ಇದರಲ್ಲಿ 126 ಕೋಟಿ ಕೇಂದ್ರ ಸರ್ಕಾರದ್ದು. 42 ಕೋಟಿ ರಾಜ್ಯ ಸರ್ಕಾರದ್ದು. ಎರಡೂ ಸೇರಿಸಿ 169 ಕೋಟಿ ಆಗಿದೆ. ಇವರು 172 ಕೋಟಿ ಬಿಡುಗಡೆ ಮಾಡಿದ್ದೇವೆಂದು ಹೇಳುತ್ತಾರೆ. ಆ 172 ಕೋಟಿಯಲ್ಲಿ 41 ಕೋಟಿ ಈ 2–3 ದಿನಗಳಲ್ಲಿ ಬಿಡುಗಡೆ ಮಾಡಿರುವುದು. ಇವರು 187 ಕೋಟಿ ಬಿಡುಗಡೆ ಮಾಡಿ 2400 ಬೋರ್‌ವೆಲ್ ಎಲ್ಲಿ ತೋಡಿಸಿದರು. ಬಿಡುಗಡೆ ಮಾಡಿರುವುದು 87 ಕೋಟಿ. ಖರ್ಚು ಮಾಡಿರುವುದು 87 ಕೋಟಿ. 2400 ಬೋರ್‌ವೆಲ್ ಹೇಗೆ ತೋಡಿಸಿದರು? ಒಂದು ಬೋರ್‌ವೆಲ್ ಕೊರೆಯುವುದಕ್ಕೆ ಕನಿಷ್ಠ 50 ಸಾವಿರ ರೂ. ಬೇಕಲ್ಲವೇ? ಎಷ್ಟು 65 ರಿಂದ 70 ಸಾವಿರ ಬೇಕು. 2400x70 ಎಂದರೆ ಎಷ್ಟಾಯಿತು? ಅದು ಹೇಗೆ ನಂಬುವುದು ಇವರನ್ನು 2400 ಬೋರ್‌ವೆಲ್ ತೋಡಿಸಿದ್ದಾರೆಂದರೆ? See it is a simple Mathematics. 2400 ಬೋರ್‌ವೆಲ್ ತೋಡಿಸಿದ್ದಾರೆ ಅಂದರೆ ಇಡೀ 24 ಜಿಲ್ಲೆಗಳಲ್ಲಿ ಎಷ್ಟು ಬೋರ್‌ವೆಲ್ ತೋಡಿಸಿರಬೇಕು? 123 ತಾಲ್ಲೂಕುಗಳಲ್ಲಿ ಎಷ್ಟು ಬೋರ್‌ವೆಲ್ ತೋಡಿಸಿದ್ದಾರೆ? ಎಂ.ಎಲ್.ಎ ಗಳು ಎಷ್ಟನ್ನು ಶಿಫಾರಸ್ಸು ಮಾಡಿದ್ದರು? ಅದರಲ್ಲಿ ಎಷ್ಟು ತೋಡಿಸಿದ್ದಾರೆ? ಹಾಗಿದ್ದರೆ ನಾವೆಲ್ಲಾ ವಿರೋಧ ಪಕ್ಷದವರು ಮಾತನಾಡಿರುವುದು ಅಸತ್ಯ ಹೇಳಿದ್ದೇವೆಯೇನು? ನಾನು ವರುಣ ಕ್ಷೇತ್ರಕ್ಕೆ ಎಂ.ಎಲ್.ಎ. ಆಗಿ ನನ್ನ ಕ್ಷೇತ್ರಕ್ಕೆ ನಾನು ಕೇಳಿದ ಹೊಸ ಬೋರ್‌ವೆಲ್ ಕೊಡಲು ಅವರಿಗೆ ಆಗಲಿಲ್ಲ. ನಾನು ಶಿಫಾರಸ್ಸು ಮಾಡಿ ಕಳುಹಿಸಿಕೊಟ್ಟಿದ್ದೇನಲ್ಲ? ಡಿ.ಸಿ. ಕೇಳಿದರೆ ನಮಗೆ ಹೊಸ ಬೋರ್‌ವೆಲ್ ತೋಡಿಸುವುದಕ್ಕೆ ಯಾವುದೇ power ಕೊಟ್ಟಿಲ್ಲ. C.E.O ಕೇಳಿದರೆ ನಮಗೆ ಅಧಿಕಾರ ಇಲ್ಲ. ನಮ್ಮ ಹತ್ತಿರ ದುಡ್ಡಿಲ್ಲ. ಡಿ.ಸಿ. ಕೊಡಬೇಕು. Regular programs ಗೆ ಬಿಟ್ಟರೆ ಬೇರೆ ಹಣವಿಲ್ಲ ಎಂದು ಹೇಳುತ್ತಾರೆ. ಮತ್ತೆ ಎಲ್ಲಿ ತೋಡಿಸಿದವರು ಇವರು, ಯಾವ ದುಡ್ಡಿನಲ್ಲಿ ತೋಡಿಸಿದರು? ನಿಮಗೆ ಒಂದು ಉದಾಹರಣೆ ಹೇಳುತ್ತೇನೆ. ನೀವು ನಿನ್ನೆ ಇರಲಿಲ್ಲ. ಇವತ್ತು ನಾನು ಹೇಳುತ್ತೇನೆ. ಮಾನ್ಯ ಮುಖ್ಯಮಂತ್ರಿಗಳೇ, ನಾವು ನೀವು ಅವತ್ತು ನಂಜನಗೂಡಿನಲ್ಲಿ ಒಂದು ಕುಡಿಯುವ ನೀರಿನದನ್ನು ದೊಡ್ಡ

ಕಾವಲಂದೆಯಲ್ಲಿ ಉದ್ಘಾಟನೆ ಮಾಡಿದೆವಲ್ಲ, ಅಲ್ಲಿ ನೀರು ಹೋಗುತ್ತಿದೆಯಾ ಎಂದು ಕೇಳಿದ್ದೀರಾ? ಎಷ್ಟು ತಿಂಗಳಾಯಿತು ಉದ್ಘಾಟನೆ ಮಾಡಿ. ನನ್ನ ಕ್ಷೇತ್ರದಲ್ಲಿ 22 ಹಳ್ಳಿಗಳು, ಶ್ರೀನಿವಾಸ ಪ್ರಸಾದ್ ಕ್ಷೇತ್ರದಲ್ಲಿ 31 ಹಳ್ಳಿಗಳು. ಕುಡಿಯುವ ನೀರು ಹೋಗುತ್ತಿದೆಯೇ ಅಲ್ಲಿ, ನಾವು ಉದ್ಘಾಟನೆ ಮಾಡಿ ಬಂದೆವು. ಅದು ಪ್ರತಿ ವರ್ಷ ಬರಗಾಲಕ್ಕೆ ತುತ್ತಾಗುವ ಪ್ರದೇಶ. ಒಂದು ಹೊಸ ಬೋರ್‌ವೆಲ್ ಆ ಭಾಗದಲ್ಲಿ ತೋಡಿಸಿದ್ದಾರೆಂದರೆ ನಾನು ಇವತ್ತು ಇಲ್ಲಿಯೇ ರಾಜೀನಾಮೆ ಕೊಡುತ್ತೇನೆ. ಎಲ್ಲಿ ಮಾಡಿದ್ದಾರೆ ಅವರು? ನಾನು ಬರಗಾಲ ಬಂದಾಗ ಎಲ್ಲಾ ಕಡೆ visit ಮಾಡಿಕೊಂಡು ಬಂದಿದ್ದೆ. ಮೇವು ಎಲ್ಲಿದೆ. ಮೇವಿನ ಬ್ಯಾಂಕ್ ಮಾಡಿದ್ದೇವೆ, 20 ವಾರಗಳಿಗಾಗುವಷ್ಟು ಮೇವು ಇದೆ ಎಂದು ಹೇಳುತ್ತೀರಿ. ನಾನು ತುಮಕೂರು, ಶಿರಾ, ಪಾವಗಡ, ಮಧುಗಿರಿಗೆ ಹೋಗಿದ್ದೆ, ಅಲ್ಲಿ ಏನು ಬೆಳೆ ಬೆಳೆಯುತ್ತಾರೆ? Only crop they're growing is ಶೇಂಗಾ. ಆ ಶೇಂಗಾ ಬೆಳೆಯೆಲ್ಲಾ ಒಣಗಿದ ಮೇಲೆ ಮೇವೆಲ್ಲಿದೆ ಅಲ್ಲಿ? ಅಲ್ಲಿ 20 ವಾರ ಮೇವು ಎಲ್ಲಿ ಬಂದಿರುತ್ತದೆ? ರಾಗಿ, ಜೋಳ, ಸಜ್ಜೆ ಬೆಳೆಯಲಿಲ್ಲ. ಗುಲ್ಬರ್ಗಾದಲ್ಲಿ ತೊಗರಿ ಬೆಳೆ ಬಿಟ್ಟು ಬೇರೆ ಯಾವ ಬೆಳೆಯನ್ನು ಬೆಳೆಯುವುದಿಲ್ಲ. ತೊಗರಿ ಬೆಳೆಯಿಂದ ಮೇವು ಬರುತ್ತದೆಯೇನು? ನೀರಾವರಿ ಪ್ರದೇಶಗಳಲ್ಲಿ ಭತ್ತ ಬೆಳೆಯುತ್ತಾರೆ, Machine ನಲ್ಲಿ ಕಟಾವ್ ಮಾಡಿ ಬಿಡುತ್ತಾರೆ. ರವೀಂದ್ರನಾಥ್ ಹುಲ್ಲು ಸಿಗುತ್ತದೆಯೇನು ಹೇಳ್ರಿ, ನೀವು ಭತ್ತ ಬೆಳೆಯುವವರು. ಎಷ್ಟು ಸಿಗುತ್ತದೆ?

ಶ್ರೀ ಎಸ್.ಎ. ರವೀಂದ್ರನಾಥ್ : – ಅವಶ್ಯಕತೆ ಇರುವಷ್ಟು ಹುಲ್ಲು ಸಿಗುತ್ತದೆ.

ಶ್ರೀ ಸಿದ್ದರಾಮಯ್ಯ :– ಆಹಾ, ಏನ್ರಪ್ಪ, ರೀ ನಾವೂ ರೈತರು, ನೀವೂ ರೈತರು. ಯಾಕ್ಹೀಗೆ ಹೇಳ್ತೀರಿ? ಮೊದಲಿತ್ತು, Manual labour ಇದ್ದಾಗ. ಈಗೆಲ್ರಿ ಇದೆ ಹುಲ್ಲು? ಬೇರೆ ಏನಾದರೂ ಬೆಳೆದರೆ ಸಿಗುತ್ತದೆಯಷ್ಟೆ. ನಾವು ಹುಲ್ಲಿಗೋಸ್ಕರ Manual ಆಗಿ ಕತ್ತರಿಸಬೇಕು. ಹುಲ್ಲು ಬೇಕು ಎನ್ನುವುದಾದರೆ, Machine ಮೂಲಕ ಮಾಡಿದರೆ ಸಿಗುತ್ತದೆ ಏನ್ರಿ ಬಂಡಿ ಹೇಳ್ರಿ ನೀವೇ. ನೀವು ಭತ್ತ ಬೆಳೆಯುತ್ತೀರಿ.

ಶ್ರೀ ವೆಂಕಟರಾವ್ ನಾಡಗೌಡ :– ಲೇಬರ್ ಹಚ್ಚಿ ಕಟಾವ್ ಮಾಡಿಸಿದರೆ ಸಿಗುತ್ತದೆ.

ಶ್ರೀ ಉಮೇಶ್ ಕತ್ತಿ :– ಬೆಳಗಾವಿಯಲ್ಲಿ 12 ತಿಂಗಳೂ ಕಬ್ಬಿನ ಗರಿ ಸಿಗುತ್ತದೆ ಮೇವಿಗೆ ಯಾವುದೇ ತೊಂದರೆಯಿಲ್ಲ.

ಶ್ರೀ ಸಿದ್ದರಾಮಯ್ಯ :– ಈ ತರಹದ Agriculture Minister ಇರುವುದರಿಂದ ಹೀಗಾಗಿರುವುದು. ಮೇವೇ ಇಲ್ರಿ, ಸತ್ಯವಾಗಿ ಹೇಳುತ್ತಿದ್ದೇನೆ. 123 ತಾಲ್ಲೂಕಿನಲ್ಲಿ ಬರಗಾಲ. ಗೋಶಾಲೆ ಎಷ್ಟು ಮಾಡಿದ್ದೇವೆ ಎಂದು ಹೇಳುತ್ತೀರಿ, 34. ಜಾನುವಾರುಗಳೆಷ್ಟಿವೆ? 1 ಕೋಟಿ 39 ಲಕ್ಷವೆಂದು ನೀವೇ ಹೇಳಿದಿರಿ. 39 ಲಕ್ಷ. 34 ತಾಲ್ಲೂಕುಗಳಲ್ಲಿ ಎಷ್ಟು ಜಾನುವಾರುಗಳು ಇದ್ದಾವೆ? 34 ಗೋಶಾಲೆಗಳಲ್ಲಿ ಎಷ್ಟು ಜಾನುವಾರುಗಳು ಇರುತ್ತವೆ? 23–24 ತಾಲ್ಲೂಕುಗಳಲ್ಲಿ 34 ಗೋಶಾಲೆಗಳನ್ನು ಮಾಡಿದರೆ ಎಲ್ಲಾ ಜಾನುವಾರುಗಳಿಗೆ ಮೇವು, ನೀರು ಸಿಕ್ಕಿಬಿಟ್ಟಿತಾ? ಬೇರೆ ತಾಲ್ಲೂಕುಗಳಲ್ಲಿ ಹಾಗಾದರೆ ಮೇವು, ಕುಡಿಯುವ ನೀರು ಹೀಗೆ ಇದೆ ಎಂದಾಯಿತಲ್ಲ, Scarcity ಇರತಕ್ಕ ತಾಲ್ಲೂಕುಗಳಲ್ಲಿ ಮಾತ್ರ ಗೋಶಾಲೆ ಮಾಡಿದ್ದೀರಾ? ಸರ್ಕಾರ ಬರಗಾಲ ಎದುರಿಸುವಲ್ಲಿ ಸಂಪೂರ್ಣ ವಿಫಲವಾಗಿದೆ. ಇವರಿಗೆ ಸಮಯನೇ ಇಲ್ಲ. ಕುರ್ಚಿ ಉಳಿಸಿಕೊಳ್ಳುವುದಕ್ಕೆ ಒಂದು ಗುಂಪು. ಕುರ್ಚಿ ಕಿತ್ತುಕೊಳ್ಳುವುದಕ್ಕೆ ಇನ್ನೊಂದು ಗುಂಪು. ಒಬ್ಬರು resortಗೆ ಹೋಗುತ್ತಾರೆ. ಇನ್ನೊಬ್ಬರು ದೆಹಲಿಗೆ ಹೋಗುತ್ತಾರೆ ಹೀಗಿರುವಾಗ ಯಾರು ಎಲ್ಲಿಂದ ಸಮೀಕ್ಷೆ ಮಾಡುತ್ತಾರೆ? ಯಾವ ಜಿಲ್ಲೆಗೆ ಜಿಲ್ಲಾ ಮಂತ್ರಿಗಳು ಹೋಗಿ ನೋಡುತ್ತಾರೆ? ನನಗೆ ಗೊತ್ತಿರುವ ಮಟ್ಟಿಗೆ ಮೈಸೂರಿನಲ್ಲಿ ಜಿಲ್ಲಾ ಮಂತ್ರಿಗಳು ಒಂದು ಬರಗಾಲದ ಬಗ್ಗೆ ಎಂಎಲ್ಎ ಗಳನ್ನು ಕರೆದು ಮೀಟಿಂಗ್ ಮಾಡಿಲ್ಲ. As a matter of fact, ಇಡೀ ವರ್ಷದಲ್ಲಿ ಮಾನ್ಯ ಮಂತ್ರಿಗಳು ಒಂದೇ ಒಂದು KDP Meeting ಮಾಡಿರುವುದು. Only one KDP meeting is conducted for the entire year. ಬರಗಾಲದ ಮೀಟಿಂಗ್ ಎಲ್ಲಿ ಮಾಡಿದ್ದಾರೆ? ನಮ್ಮ ಮೈಸೂರಿನ ಎಂಎಲ್ಎಗಳೆಲ್ಲಾ ಬೇಕಾದರೆ ಅಫಿಡವಿಟ್ ಹಾಕುವಾ? ಮೀಟಿಂಗ್ ಮಾಡಿಲ್ಲ ಎಂದು ಅಫಿಡವಿಟ್ ಫೈಲ್ ಮಾಡೋಣವಾ ನಾವು if you don't believe us? I am sorry. ನಿಜವಾಗಿ ಮಾಡಲಿಲ್ಲ. ಮಾನ್ಯ ಶಂಕರಲಿಂಗೇಗೌಡರು ನಮ್ಮ ಕೆಡಿಪಿ ಮೀಟಿಂಗಿಗೆ ಬರುವುದಿಲ್ಲ. ಮಾನ್ಯ ಶಂಕರಲಿಂಗೇಗೌಡರು ಯಾವತ್ತೂ ಕೆಡಿಪಿ ಮೀಟಿಂಗಿಗೆ ಬರುವುದಿಲ್ಲ. Only one KDP meeting for the entire year. ಅದೂ ಜುಲೈನಲ್ಲಿ, ಅದಾದ ಮೇಲೆ no KDP meeting ಬರಗಾಲದ ಬಗ್ಗೆ ಒಂದು ಮೀಟಿಂಗ್ ಇಲ್ಲ. ಹಾಗಾದರೆ ಇವರು ಎಲ್ಲಿ ಮೀಟಿಂಗ್ ಮಾಡಿದ್ದಾರೆ? 169 ಕೋಟಿಗಳಲ್ಲಿ 87 ಕೋಟಿ ರೂಪಾಯಿ ಖರ್ಚು ಮಾಡಿದ್ದೇವೆಂದ ಮೇಲೆ ಹೇಗೆ ಇವರು ಬರಗಾಲ ಎದುರಿಸಿದ್ದಾರೆ? ಇವರು ಹೇಳುತ್ತಾರೆ. ಒಂದೊಂದು ತಾಲ್ಲೂಕಿಗೆ ಕನಿಷ್ಠ 5 ರಿಂದ 6 ಕೋಟಿಯಾದರೂ ಬೇಕು. 5 ಕೋಟಿಯಿಂದ 6

ಕೋಟಿ ರೂಪಾಯಿ ಮೇವಿಗೆ, ಕುಡಿಯುವ ನೀರಿಗೆ ಬೇಕು. ನೀವು ಖರ್ಚು ಮಾಡಿರುವುದು 86 ಕೋಟಿ ರೂಪಾಯಿ. How you have tackled the problem? Is there any sincerity in the Government? What commitment this Government is having towards farmers, rural people? ಇವರಿಗೆ ಕಾಳಜಿನೇ ಇಲ್ಲ. ನಮ್ಮ ಜಿಲ್ಲೆಯಲ್ಲಿ ಯಾವ ಅಧಿಕಾರಿಗಳೂ ಬಂದು ನೋಡಿದ ಹಾಗೆ ನಾನು ಕಾಣಲಿಲ್ಲ. District in-charge ಇದ್ದವರು ಬಂದದ್ದನ್ನು ನೋಡಿಲ್ಲ. ಹಳ್ಳಿಗಳಲ್ಲಿ ಏನೂ ಮಾಡಿಲ್ಲ. NREGS ದುಡ್ಡು, regular action plan ಏನು ಇದೆ ಅದನ್ನು ಬಿಟ್ಟು ಒಂದು ರೂಪಾಯಿ ಖರ್ಚು ಮಾಡಿರುವುದನ್ನು ಇವರು ತೋರಿಸಲಿ. ಹೊಸದಾಗಿ ಕೆಲಸ ಕೊಡುವುದಕ್ಕೆ ಮಾಡಬೇಕಾದರೆ ಅಡಿಷನಲ್ ಆಗಿ ದುಡ್ಡು NREGS ನಲ್ಲಿ ಕೊಡಬೇಕಲ್ಲ. Action planನಲ್ಲಿ ಎಷ್ಟು ದುಡ್ಡು ನಿಗದಿ ಮಾಡಿದ್ದಾರೆ. ಅದನು ಬಿಟ್ಟು not a single pai has been spent. How can they give jobs? How can they give employment? ಇದನ್ನೇ NREGS ಕಾರ್ಯಕ್ರಮ ಇದೆ, ಅಲ್ಲಿ ಕೆಲಸ ಕೊಡುತ್ತೇವೆ. ಕುಡಿಯುವ ನೀರಿನ ಕಾರ್ಯಕ್ರಮ ಇದೆ. Rural Development Departmentನಲ್ಲಿ ಕುಡಿಯುವ ನೀರನ್ನು ಕೊಡುತ್ತೇವೆ. ಇದು ಬರಗಾಲ. It is not a normal year. If it is normal year then it is OK. It is not a normal year. You only admitted. You only declared severe drought ಇದೆ ಎಂದು. 1971ನೇ ಇಸವಿಯಿಂದ ಇವತ್ತಿನವರೆಗೆ 2 ಸಾರಿನೋ, 3 ಸಾರಿನೋ ಹೀಗೆ ಆಗಿರಬೇಕು ಎಂದು ನೀವೇ ಹೇಳಿದ್ದೀರಿ. ಈ ತರಹ ಪರಿಸ್ಥಿತಿ ಎರಡು ಸಾರಿನೋ ಅಥವಾ ಮೂರು ಸಾರಿನೋ ಆಗಿರಬಹುದು. ಕಳೆದ 2001ನೇ ಇಸವಿಯಿಂದ ಸತತವಾಗಿ either drought or flood ಎಂದು ನೀವೇ ಹೇಳಿದ್ದೀರಿ. ಆದ್ದರಿಂದ with all due respect to Hon'ble Chief Minister ನಾನು ಹೇಳುತ್ತೇನೆ, ಈ ರಿಪ್ಲೈ ಇದೆಯಲ್ಲಾ ಇದು ಸತ್ಯಕ್ಕೆ ದೂರವಾದುದು. ಇದನ್ನು ಯಾರೂ ಒಪ್ಪಿಕೊಳ್ಳುವುದಕ್ಕೆ ತಯಾರಾಗಿಲ್ಲ. ನೀವು ಈ ತರಹ ಮಾಡಿದರೆ, this Government ಹಳ್ಳಿಗಾಡಿನ ಜನರಿಗೆ ಮೋಸ ಮಾಡುತ್ತಿದೆ ಎಂದು ಹೇಳಬೇಕಾಗುತ್ತದೆ. ಆ ಜನರಿಗೆ ಅನ್ಯಾಯ ಮಾಡುತ್ತಿದೆ ಎಂದು ಹೇಳಬೇಕಾಗುತ್ತದೆ. ಇವರಿವರ ರಾಜಕೀಯ ಸಮಸ್ಯೆಗಳಿಗೆ ಬರಗಾಲವನ್ನು ಸಂಪೂರ್ಣವಾಗಿ ಇವರು ಮರೆತು ಬಿಟ್ಟಿದ್ದಾರೆ. ಆ ಜನರನ್ನು ನೋಡಿದರೆ ಕಣ್ಣಲ್ಲಿ ನೀರು ಬರುತ್ತದೆ, ಕುಡಿಯುವುದಕ್ಕೆ ನೀರು ಇಲ್ಲ. ಅದು ಯಾವುದೋ

ಊರಿನಲ್ಲಿ ದೇವನಹಳ್ಳಿನೋ ಅಥವಾ ಚಿಕ್ಕಬಳ್ಳಾಪುರನೋ ಒಂದು ಬಿಂದಿಗೆಗೆ ಎಷ್ಟೋ ದುಡ್ಡು ಕೊಡಬೇಕೆಂದು ಟಿ.ವಿ. ಯಲ್ಲಿ ಹೇಳುತ್ತಿದ್ದರು. ಐದು ರೂಪಾಯಿನೋ, ಹತ್ತು ರೂಪಾಯಿನೋ. ಅವರು ಹೇಗೆ survive ಆಗಬೇಕು ಕೆಟ್ಟ ನೀರು ಕುಡಿದರೆ ಖಾಯಿಲೆ ಬರುವುದಿಲ್ಲವಾ? ನಾವೆಲ್ಲಾ ಬಾಟಲ್ ನೀರು ಕುಡಿದು ಕುಳಿತುಕೊಂಡು ಬಿಡುತ್ತೇವೆ. ಏನು ಸಭೆ ಕರೆದ ತಕ್ಷಣ ನಮಗೆ ಅಲ್ಲಿ ಬಾಟಲ್ ಬಂದು ಬಿಡುತ್ತದೆ. What about those people, ಆದ್ದರಿಂದ ಅಧ್ಯಕ್ಷರೆ, ಬರಗಾಲ ಒಂದೇ ಅಲ್ಲ, ಅವರಿಗೆ ಪಾಪ ಕೆಲಸನೂ ಇಲ್ಲ, ದನಕರುಗಳನ್ನೆಲ್ಲಾ ಮಾರಿಕೊಳ್ಳುತ್ತಿದ್ದಾರೆ. ಕಸಾಯಿ ಖಾನೆಗೆ ಹೋಗುತ್ತಿವೆ. ಇವತ್ತು ಜನಗಣತಿ ಮಾಡಿಸಲಿ. ಕ್ಯಾಟಲ್ ಜನಗಣತಿ ಮಾಡಿಸಲಿ. ಎಷ್ಟು ಸಂತೆಗೆ ಹೋಗಿದ್ದಾವೆ? ಎಷ್ಟು ಕಸಾಯಿ ಖಾನೆಗೆ ಹೋಗಿದ್ದಾವೆಂದು. ಎಷ್ಟು ಜನ ರೈತರು ಎತ್ತುಗಳನ್ನು ಮಾರಿಕೊಂಡಿದ್ದಾರೆ? ನಾವೆಲ್ಲಾ ಹಳ್ಳಿಯಿಂದ ಬಂದವರು. ದಿನ ನಿತ್ಯ ಹಳ್ಳಿಯವರ ಸಂಪರ್ಕದಲ್ಲಿರತಕ್ಕಂಥಹವರು. ನಾನು ನಿರಂತರವಾಗಿ ನಮ್ಮ ಕ್ಷೇತ್ರದ ಜನರ ಜೊತೆಗೆ ಸಂಪರ್ಕದಲ್ಲಿದ್ದೇನೆ. I hope that ಎಲ್ಲರೂ ಕೂಡ ಹಾಗೇಯೇ ಇದ್ದಾರೆಂದು ಅಂದುಕೊಂಡಿದ್ದೇನೆ. ಎಲ್ಲೂ ಕೂಡ ಇವತ್ತು ಬರಗಾಲದ ಕಾಮಗಾರಿಗಳು ವಿಶೇಷವಾಗಿ ನಡೆಯುತ್ತಿರತಕ್ಕದ್ದನ್ನು ನಾನಂತೂ ನೋಡಿಲ್ಲ. ಯುದ್ಧೋಪಾದಿಯಲ್ಲಿ ನಡೆಯುತ್ತಿರತಕ್ಕದ್ದನ್ನು ನಾನಂತೂ ನೋಡಿಲ್ಲ. ನನ್ನ ಗಮನಕ್ಕೂ ಬಂದಿಲ್ಲ. ಆ ತರಹ ಇಡೀ ರಾಜ್ಯದಲ್ಲಿ ಎಲ್ಲೂ ನಡೆಯುತ್ತಿಲ್ಲ. This is the situation ನಾವು ಸರ್ಕಾರದ ಈ ಉತ್ತರವನ್ನು ಕೇಳಿಕೊಂಡು ಕ್ಷೇತ್ರದ ಜನರಿಗೆ ಸರ್ಕಾರ ಈ ತರಹ ಉತ್ತರ ಹೇಳಿದೆ ಎಂದು ನಾವು ಜನರಿಗೆ ಹೇಳುವುದಕ್ಕೆ ತಯಾರಾಗಿಲ್ಲ. ಮುಖ್ಯಮಂತ್ರಿಗಳು ಉತ್ತರ ಹೇಳಿದ್ದಾರೆ. ಇವತ್ತು ಈ ಸರ್ಕಾರ ಈ ರಾಜ್ಯದ ಜನರಿಗೆ ಮೋಸ ಮಾಡುತ್ತಿದೆ. ಅದನ್ನು ಪ್ರತಿಭಟನೆ ಮಾಡಿ we do not want to hear. ಈ ಸರ್ಕಾರದಿಂದ ನಾವು ಏನೂ ಕೇಳುವುದಕ್ಕೆ ತಯಾರಾಗಿಲ್ಲ.

(ಕಾಂಗ್ರೆಸ್ ಸದಸ್ಯರು ಮಾನ್ಯ ಸಿದ್ದರಾಮಯ್ಯನವರ ನೇತೃತ್ವದಲ್ಲಿ ಸಭಾ ತ್ಯಾಗ ಮಾಡಿದರು)

ಶ್ರೀ ಡಿ.ವಿ. ಸದಾನಂದಗೌಡ (ಮುಖ್ಯಮಂತ್ರಿಗಳು) :– ಸುಮ್ಮನೇ ರಾಜಕೀಯಕ್ಕಾಗಿ ಬರವನ್ನು ಬಳಸಿಕೊಳ್ಳುವುದು ನ್ಯಾಯವಲ್ಲ.

ಶ್ರೀ ಹೆಚ್.ಡಿ. ರೇವಣ್ಣ :– ಸಾರ್, ನಮಗೂ ಅವಕಾಶ ಕೊಡಿ.

ಶ್ರೀ ವೆಂಕಟರಾವ್ ನಾಡಗೌಡ :- ಮಾನ್ಯ ಮುಖ್ಯಮಂತ್ರಿಯವರೇ ಒಂದೇ ಸಾರಿ ಉತ್ತರ ಕೊಟ್ಟು ಬಿಡಿ. ಹೋದವರಿಗೆ ಏಕೆ ನೀವು ಉತ್ತರ ಕೊಡುತ್ತೀರಿ?

ಶ್ರೀ ಡಿ.ವಿ. ಸದಾನಂದಗೌಡ (ಮುಖ್ಯಮಂತ್ರಿಗಳು) :- ರಾಜಕಾರಣಕ್ಕಾಗಿ ಬರವನ್ನು ಬಳಸಿಕೊಳ್ಳುತ್ತಿದ್ದಾರೆ.

(ಗೊಂದಲ)

ಶ್ರೀ ವೆಂಕಟರಾವ್ ನಾಡಗೌಡ :- ನಮಗೆ ಉತ್ತರ ಕೊಡಿ, ನಾವು ಕೇಳುತ್ತೇವೆ.

ಶ್ರೀ ಸುಭಾಷ್ ಗುತ್ತೇದಾರ್ :- ಮಾನ್ಯ ಮುಖ್ಯ ಮಂತ್ರಿಗಳು ತೊಗರಿ ಬೆಂಬಲ ಬೆಲೆಯದು ಹೇಳಬೇಕು. ಮಾನ್ಯ ಕೃಷಿ ಮಂತ್ರಿಗಳು ಇದ್ದಾರೆ.

(ಗೊಂದಲ)

ಅಧ್ಯಕ್ಷರು :- ಮಾನ್ಯ ಮುಖ್ಯಮಂತ್ರಿಗಳು ನಿಂತಿದ್ದಾರೆ. ಈಗ ತೊಗರಿ ವಿಚಾರದಲ್ಲಿ ಗಮನ ಸೆಳೆಯುವ ವಿಚಾರ ಇದೆ. ಆಮೇಲೆ ತೆಗೆದುಕೊಳ್ಳೋಣ.

ಶ್ರೀ ಡಿ.ವಿ. ಸದಾನಂದಗೌಡ (ಮುಖ್ಯಮಂತ್ರಿಗಳು) :- ಮಾನ್ಯ ಸಭಾಧ್ಯಕ್ಷರೆ, ಒಂದಿಷ್ಟು ಮಾಹಿತಿಗಳನ್ನು ಸದನದ ಮುಂದೆ ಇಡಲಿಕ್ಕೆ ಇಚ್ಛೆಪಡುತ್ತಿದ್ದೇನೆ. ಏಕೆಂದರೆ ಬೋರ್‌ವೆಲ್‌ಗಳನ್ನು ಕೊರೆದಿಲ್ಲ, ಎಂದು ಹೇಳುವಂತಹ ಪ್ರಯತ್ನಗಳನ್ನು ಮಾಡಿದ್ದಾರೆ. ಆದರೆ ನಾವು 2487 ಬೋರ್‌ವೆಲ್‌ಗಳನ್ನು ಸುಮಾರು 126.73 ಕೋಟಿ ರೂಪಾಯಿ ವೆಚ್ಚದಲ್ಲಿ ಕೊರೆಯುವಂತಹದನ್ನು ಮಾಡಿದ್ದೇವೆ. ತಾಲ್ಲೂಕುವೈಸ್ ಹೇಳುತ್ತೇನೆ. ಬಾಗಲ ಕೋಟೆಯಲ್ಲಿ 39, ಬೆಂಗಳೂರು ರೂರಲ್‌ನಲ್ಲಿ 87, ಬೆಂಗಳೂರು ಅರ್ಬನ್‌ನಲ್ಲಿ 72, ಬೆಳಗಾಂನಲ್ಲಿ 124, ಬಳ್ಳಾರಿಯಲ್ಲಿ 55, ಬೀದರ್ ನಲ್ಲಿ 52, ಬಿಜಾಪುರದಲ್ಲಿ 131, ಚಾಮರಾಜ ನಗರದಲ್ಲಿ 94, ಚಿಕ್ಕಬಳ್ಳಾಪುರದಲ್ಲಿ 157, ಚಿಕ್ಕಮಗಳೂರಿನಲ್ಲಿ 36, ಚಿತ್ರದುರ್ಗದಲ್ಲಿ 120 ದಕ್ಷಿಣ ಕನ್ನಡದಲ್ಲಿ 33, ದಾವಣಗೆರೆಯಲ್ಲಿ 121, ಧಾರವಾಡದಲ್ಲಿ 53, ಗದಗ್‌ನಲ್ಲಿ 43, ಗುಲ್ಬರ್ಗಾದಲ್ಲಿ 145, ಹಾಸನದಲ್ಲಿ 33, ಹಾವೇರಿಯಲ್ಲಿ 33, ಕೊಡಗಿನಲ್ಲಿ 22, ಕೋಲಾರದಲ್ಲಿ 270, ಕೊಪ್ಪಳದಲ್ಲಿ 58, ಮಂಡ್ಯದಲ್ಲಿ 122, ಮೈಸೂರಿನಲ್ಲಿ 78, ರಾಯಚೂರಿನಲ್ಲಿ 82, ರಾಮನಗರದಲ್ಲಿ 71, ಶಿವಮೊಗ್ಗದಲ್ಲಿ 52, ತುಮಕೂರಿನಲ್ಲಿ 164, ಉಡುಪಿಯಲ್ಲಿ 27, ಉತ್ತರ ಕನ್ನಡದಲ್ಲಿ 33, ಯಾದಗಿರಿಯಲ್ಲಿ 56, ಹೀಗೆ ಒಟ್ಟಾರೆಯಾಗಿ 2487 ಬೋರ್‌ವೆಲ್‌ಗಳನ್ನು ಪ್ರತಿ ಜಿಲ್ಲೆಯಲ್ಲಿ ಕೊರೆಯುವಂತಹ ಕೆಲಸ ಕಾರ್ಯಗಳನ್ನು ನಾವು ಮಾಡಿದ್ದೇವೆ. ನಾನು ಒಂದು ಮಾತನ್ನು ಸದನಕ್ಕೆ ಹೇಳಲಿಕ್ಕೆ ಇಚ್ಛೆಪಡುತ್ತೇನೆ. ಈ ಬೋರ್‌ವೆಲ್‌ಗಳನ್ನು RDPR ಮುಖಾಂತರ

ಕೊರೆಸುವಂತಹ ಕೆಲಸ ಕಾರ್ಯಗಳನ್ನು ಮಾಡುತ್ತಿದ್ದೇವೆ. ಅದಕ್ಕೆ ಬೇಕಾದ ಮೊತ್ತವನ್ನು ಆ ಇಲಾಖೆಗೆ ಕೊಡುತ್ತೇವೆ. ಇಷ್ಟೊಂದು ಹೊಸ ಬೋರ್‌ವೆಲ್‌ಗಳನ್ನು ನಾವು ಕೊರೆದಿದ್ದೇವೆ. ಇದರ ಜೊತೆಯಲ್ಲಿ ಎಲ್ಲೆಲ್ಲಿ ಹಳೆಯ ಬೋರ್‌ವೆಲ್‌ಗಳಲ್ಲಿ ಸ್ವಲ್ಪ ಮಟ್ಟಿಗೆ ನೀರಿನ ಕೊರತೆ ಆಗಿದೆಯೋ, ಇವತ್ತು ಅವೆಲ್ಲವನ್ನೂ ಪುನಶ್ಚೇತನಗೊಳಿಸಲಿಕ್ಕೆ ಬೇಕಾದಂತಹ ಎಲ್ಲಾ ಕೆಲಸ ಕಾರ್ಯಗಳನ್ನು ನಾವು ಮಾಡುವಂತಹ ಪ್ರಯತ್ನವನ್ನು ಇಡೀ ರಾಜ್ಯದಲ್ಲಿ ಮಾಡಿದ್ದೇವೆ. ಇದು ನಾವು ಮಾಡಿರುವಂತಹ ಸಂಗತಿಗಳು. ವಿಶೇಷವಾಗಿ, ಬೇರೆ ಬೇರೆ task-force ಗಳು ಎಲ್ಲೆಲ್ಲಿ ಬೋರ್‌ವೆಲ್‌ಗಳನ್ನು ತೆಗೆಯಬೇಕೆಂದು ಹೇಳಿದ್ದಾರೋ, ಅಲ್ಲೆಲ್ಲಾ ತೆಗೆಸುವಂತಹ ಪ್ರಯತ್ನಗಳನ್ನು ಮಾಡಿದ್ದೇವೆ. ಮೈಸೂರಿನಲ್ಲಿ 78 ಬೋರ್‌ವೆಲ್‌ಗಳನ್ನು ಬೇರೆ ಬೇರೆ ಭಾಗಗಳಲ್ಲಿ ವಿಶೇಷವಾಗಿ ಕೊರೆದಿದ್ದೇವೆ. ನಾನು ಇನ್ನೂ ಒಂದು ವಿಚಾರವನ್ನು ಸದನದ ಮುಂದೆ ಹೇಳಲಿಕ್ಕೆ ಇಚ್ಛೆಪಡುತ್ತೇನೆ. ಇಲ್ಲಿರುವ ಎಲ್ಲಾ ಶಾಸಕರ ಆತಂಕವನ್ನು ನೋಡಿದರೆ, ತಕ್ಷಣ ಏನಾದರೂ ಬೋರ್‌ವೆಲ್ ಕೊರೆಯಬೇಕೆಂದರೆ, ನಾನು ಪ್ರತಿ ವಿಧಾನ ಸಭಾ ಕ್ಷೇತ್ರಕ್ಕೆ ತಕ್ಷಣ 30 ಲಕ್ಷ ರೂ. ಗಳನ್ನು ಬಿಡುಗಡೆ ಮಾಡಿ, ಎಲ್ಲೆಲ್ಲಿ ಅಗತ್ಯತೆ ಇದೆಯೋ, ಅಲ್ಲೆಲ್ಲಾ ಪ್ರಾರಂಭಿಕ ಹಂತದಲ್ಲೇ ತೆಗೆದುಕೊಳ್ಳುವಂತೆ ಮಾಡುವುದಕ್ಕೆ ನಾನು ತಯಾರಿದ್ದೇನೆ.

(ಗೊಂದಲ)

ಶ್ರೀ ಕೆ.ಎಂ. ಶಿವಲಿಂಗೇಗೌಡ :- ಎಲ್ಲಾ ವಿಧಾನ ಸಭಾ ಕ್ಷೇತ್ರಗಳಿಗೂ ಒಂದೇ ರೀತಿ ಕೊಡುತ್ತೇನೆಂದು ಹೇಳುತ್ತಿದ್ದೀರಿ. ನಮ್ಮಲ್ಲಿ ಬರಗಾಲ ಇದೆ, ನಮಗೆ ನೀವು ಜಾಸ್ತಿ ಹಣವನ್ನು ಬಿಡುಗಡೆ ಮಾಡಬೇಕು.

(ಗೊಂದಲ)

ಶ್ರೀ ಅಧ್ಯಕ್ಷರು :- ಎಲ್ಲರೂ ಒಟ್ಟಿಗೇ ಮಾತನಾಡಲು ಎದ್ದು ನಿಂತರೆ ಹೇಗೆ?

(ಗೊಂದಲ)

ಶ್ರೀ ಗುತ್ತೇದಾರ್ ಸುಭಾಷ್ ರುಕ್ಮಯ್ಯ :- ತೊಗರಿ ಖರೀದಿ ಬಗ್ಗೆ ಏನು ಹೇಳುತ್ತೀರೋ, ಹೇಳಿ.

(ಗೊಂದಲ)

ಅಧ್ಯಕ್ಷರು : – ತೊಗರಿ ಬೇಳೆ ಖರೀದಿ ಬಗ್ಗೆ ನಂತರ Calling attentionವೊಂದು ಇದೆ. ಆಗ ನಿಮ್ಮನ್ನು ಕರೆಯುತ್ತೇನೆ. ಮಾತನಾಡುವಿರಂತೆ.

(ಗೊಂದಲ)

ಶ್ರೀ ಗುತ್ತೇದಾರ್ ಸುಭಾಷ್ ರುಕ್ಮಯ್ಯ :- ನಮ್ಮ ರೈತರ ಸಮಸ್ಯೆ ಇದೆ, ಅದರ ಬಗ್ಗೆ ಮಾತನಾಡಲು ಅವಕಾಶ ಕೊಡಿ. ಸರ್ಕಾರದವರು ಮೊದಲು ತೊಗರಿ ಖರೀದಿ ಮಾಡುತ್ತಿದ್ದರು. ಮಧ್ಯದಲ್ಲಿ ...

(ಗೊಂದಲ)

ಅಧ್ಯಕ್ಷರು :- ಇದರ ಬಗ್ಗೆಯೇ Calling attention ವೊಂದು ಇದೆ. ಆಗ ಇದರ ಬಗ್ಗೆ ಮಾತನಾಡಿ.

(ಗೊಂದಲ)

ಶ್ರೀ ಹೆಚ್.ಡಿ. ರೇವಣ್ಣ :- ತೊಗರಿ ಬೇಳೆ ಬೆಲೆಯೆಲ್ಲಾ ಕುಸಿದು ಹೋಗಿದೆ. ದಯಮಾಡಿ ಅದರ ಬಗ್ಗೆ ...

(ಗೊಂದಲ)

ಅಧ್ಯಕ್ಷರು :- ಅದರ ಬಗ್ಗೆ Calling attention ವೊಂದು ಇದೆ. ಆಗ ಮಾತನಾಡಿ.

(ಗೊಂದಲ)

ಶ್ರೀ ಹೆಚ್.ಡಿ. ರೇವಣ್ಣ :- ಇದರ ಬಗ್ಗೆ ಅರ್ಧ ಗಂಟೆ ಚರ್ಚೆಗೆ ಅವಕಾಶ ಮಾಡಿಕೊಡುತ್ತೇನೆಂದು ಹೇಳಿ. ಮಾನ್ಯ ಸದಸ್ಯರು ಇದರಿಂದಲಾದರೂ ಸಮಾಧಾನಗೊಳ್ಳುತ್ತಾರೆ.

(ಗೊಂದಲ)

ಅಧ್ಯಕ್ಷರು :- ಇದರ ಬಗ್ಗೆಯೇ Calling attention ಇದೆ. ಆಗ ತಾವು ಮಾತನಾಡಿ.

(ಗೊಂದಲ)

(ಈ ಹಂತದಲ್ಲಿ ಮಾನ್ಯ ಸದಸ್ಯರಾದ ಗುತ್ತೇದಾರ್ ಸುಭಾಷ್ ರುಕ್ಮಯ್ಯರವರು ಸದನದ ಬಾವಿಯಲ್ಲಿ ಧರಣಿ ನಿರತರಾದರು)

(ಗೊಂದಲ)

ಅಧ್ಯಕ್ಷರು :- ಇದರ ಬಗ್ಗೆಯೇ Calling attentionವೊಂದು ಇದೆ. ಆಗ ನೀವು ಮಾತನಾಡುವಿರಂತೆ ಎಂದು ನಾನು ಹೇಳಿದರೂ ನೀವು ಕೇಳದೆ, ನೆಟ್ಟಗೆ ಸದನದ ಬಾವಿಗೆ ಬರುತ್ತಿದ್ದೀರಲ್ಲಾ? ಇದು ಸರಿಯಲ್ಲ. ಗಮನ ಸೆಳೆಯುವ ಸೂಚನೆ ಚರ್ಚೆಗೆ ಬಂದಾಗ ನಿಮ್ಮನ್ನೂ ಕರೆಯುತ್ತೇನೆ. ಆಗ ನೀವೂ ಮಾತನಾಡಿ.

(ಗೊಂದಲ)

ಅಧ್ಯಕ್ಷರು :- ಚರ್ಚೆಗೆ ಅವಕಾಶ ಕೊಡುವುದಿಲ್ಲ ಎಂದು ನಾನು ಹೇಳಿಲ್ಲ. ಖಂಡಿತವಾಗಿಯೂ ಚರ್ಚೆಗೆ ಅವಕಾಶ ಕೊಡುತ್ತೇನೆ.

(ಗೊಂದಲ)

(ಈ ಹಂತದಲ್ಲಿ ಮಾನ್ಯ ಸದಸ್ಯರಾದ ಗುತ್ತೇದಾರ್ ಸುಭಾಷ್ ರುಕ್ಮಯ್ಯರವರು ಸದನದ ಬಾವಿಯಿಂದ ತಮ್ಮ ಧರಣಿಯನ್ನು ಹಿಂತೆಗೆದುಕೊಂಡು ತಮ್ಮ ಸ್ಥಾನಕ್ಕೆ ಮರಳಿದರು)

(ಗೊಂದಲ)

ಶ್ರೀ ವೆಂಕಟರಾವ್ ನಾಡಗೌಡ :- ಮಾನ್ಯ ಅಧ್ಯಕ್ಷರೆ, ನಾನು ಮಾನ್ಯ ಮುಖ್ಯಮಂತ್ರಿಗಳಲ್ಲಿ ವಿನಂತಿಯೊಂದನ್ನು ಮಾಡುತ್ತೇನೆ. ನಗರಾಭಿವೃದ್ಧಿಗೆ ಸ್ಥಳೀಯ ಸಂಸ್ಥೆಗಳಿಗೆ 10 ಕೋಟಿ ರೂ.ಗಳನ್ನು release ಮಾಡಿದ್ದು ಸತ್ಯ. ನಾನು ಖುದ್ದಾಗಿ 32 ಲಕ್ಷ ರೂ.ಗಳ proposal ವೊಂದನ್ನು ಮಾನ್ಯ ಮಂತ್ರಿಗಳಿಗೆ ಕೊಟ್ಟು, ನಾನು ನಿಮ್ಮ Secretarty ಯವರ ಹತ್ತಿರ ಹೋದಾಗ, ನಿಮ್ಮ Secretaryಯವರು DMA ಗೆ ಹಣವನ್ನು release ಮಾಡಿದ್ದಾರೆ. DMA ಯವರನ್ನೂ ಸಹ ನಾನು ಭೇಟಿಯಾದೆ. ಅವರ ಕೆಳಗಡೆ ಇರತಕ್ಕಂಥ ಅಧಿಕಾರಿಗಳಾದ CAO ಗಳು, ಅವುಗಳಿಗೆಲ್ಲಾ estimate ಬರಬೇಕು, ಅವುಗಳು approval ಆಗಬೇಕೆಂದು ಹೇಳಿ, ಇದುವರೆಗೂ ಒಂದು ಪೈಸೆಯನ್ನೂ ಯಾವ ಸ್ಥಳೀಯ ಸಂಸ್ಥೆಗಳಿಗೂ ಕಳುಹಿಸಿಲ್ಲ. ಅದನ್ನೆಲ್ಲಾ ತಮ್ಮ ಹತ್ತಿರವೇ ಇಟ್ಟುಕೊಂಡು ಕುಳಿತಿದ್ದಾರೆ. ನಮ್ಮಲ್ಲಿ ಏನಾಗಿದೆ ಎಂದರೆ, 30ಕ್ಕೆ ಕಾಲುವೆ ಬಂದ್ ಆಗುತ್ತದೆ. ಮಾನ್ಯ ಮುಖ್ಯಮಂತ್ರಿಗಳೇ, ಇದನ್ನು ಅವರಿಗೆ ಹೋಗಿ ನಾವು ಹೇಳಿದರೂ, ಅವರಿಗೆ ಅರ್ಥವಾಗುತ್ತಿಲ್ಲ. ಅವರು regular schemes ಗಳಿಗೆ ಮಾಡಿದಂತೆ ಮಾಡುತ್ತಿದ್ದಾರೆ. ತಾವು ಬಿಡುಗಡೆ ಮಾಡಿದ 10 ಕೋಟಿ ರೂ. ಗಳಲ್ಲಿ ಒಂದು ಪೈಸೆಯನ್ನೂ ಸಹಾ ನಮಗೆ ಕಳುಹಿಸಿಲ್ಲ. ಎಲ್ಲೂ ಕೂಡ ಒಂದು ಪೈಸೆ ಹೋಗಿಲ್ಲ.

ಅಧ್ಯಕ್ಷರು :- ಮಾನ್ಯ ಮುಖ್ಯಮಂತ್ರಿಗಳು ಹೇಳುತ್ತಾರೆ, ದಯವಿಟ್ಟು ಕೇಳಿ.

ಶ್ರೀ ಡಿ.ವಿ. ಸದಾನಂದಗೌಡ :- ಮಾನ್ಯ ಅಧ್ಯಕ್ಷರೆ, ಈ ಬಗ್ಗೆ ನಾನು ತಕ್ಷಣವೇ ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚನೆ ಕೊಡುತ್ತೇನೆ. ಸಂಬಂಧಪಟ್ಟ ಅಧಿಕಾರಿಗಳು ತಕ್ಷಣವೇ ಹಣವನ್ನು ರಿಲೀಸ್ ಮಾಡಬೇಕೆಂದು ಹೇಳುತ್ತೇನೆ. ಅಲ್ಲಿ ಅವರ ಆ ಭಾಗದಲ್ಲಿ ಇರುವಂತಹ ಅಧಿಕಾರಿಗಳು ಇದಕ್ಕೆ ಬೇಕಾದಂತಹ estimates ಬಾಕಿ ವಗೈರೆ ಏನೇನಿದೆ ಅದನ್ನೆಲ್ಲಾ ಮಾಡಿಕೊಂಡು ಮುಂದುವರೆಸಲಿಕ್ಕೆ ಅವಕಾಶ ಮಾಡಿಕೊಡುತ್ತೇನೆ.

ಅಧ್ಯಕ್ಷರು :- ಆಯಿತು.

(ಗೊಂದಲ)

ಶ್ರೀ ಗುತ್ತೇದಾರ್ ಸುಭಾಷ್ ರುಕ್ಮಯ್ಯ :- ಮಾನ್ಯ ಅಧ್ಯಕ್ಷರೆ, ನನಗೆ ಮಾತನಾಡಲು ಅವಕಾಶ ಕೊಡುತ್ತೀರಾ?

(ಗೊಂದಲ)

ಅಧ್ಯಕ್ಷರು :- 30 ಲಕ್ಷ ರೂ. ಗಳನ್ನು ಕೊಡುತ್ತೇನೆ ಎಂದು ಹೇಳಿದರಲ್ಲಾ.

(ಗೊಂದಲ)

ಶ್ರೀ ಕೆ. ರಹೀಂ ಖಾನ್ :- ಮಾನ್ಯ ಅಧ್ಯಕ್ಷರೆ,.....

(ಗೊಂದಲ)

ಶ್ರೀ ಹೆಚ್.ಡಿ. ರೇವಣ್ಣ :- ಮಾನ್ಯ ಅಧ್ಯಕ್ಷರೆ, ಅವರ ಪಕ್ಷದವರು ವಾಕೌಟ್ ಮಾಡಿದ್ದಾರೆ. ಆದರೆ ಇವರು ಇಲ್ಲಿ ಚರ್ಚೆ ಮಾಡುತ್ತಿದ್ದಾರೆ.

(ಗೊಂದಲ)

ಶ್ರೀ ಅಧ್ಯಕ್ಷರು :- ಅದು ಅವರ ಹಕ್ಕು

(ಗೊಂದಲ)

ಶ್ರೀ ಕೆ. ರಹೀಂ ಖಾನ್ :- ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳು ಬೀದರ್ ಜಿಲ್ಲೆಗೆ ದುಡ್ಡು ರಿಲೀಸ್ ಮಾಡಿ ಎಂದು ಲೆಟರ್ ಕೊಟ್ಟು ಮೂರು ತಿಂಗಳಾಗಿದೆ. ಆದರೆ ಇನ್ನೂ ನಮಗೆ ದುಡ್ಡು ಬಂದಿಲ್ಲ.

(ಗೊಂದಲ)

ಶ್ರೀ ಹೆಚ್.ಡಿ. ರೇವಣ್ಣ :- ಅವರೂ ವಾಕೌಟ್ ಮಾಡುವುದಾದರೆ, ನಮ್ಮದೇನೂ ಅಭ್ಯಂತರವಿಲ್ಲ. ಅವರು ನಮ್ಮ ಜೊತೆಗೇ ಇದ್ದರೆ, ಬೇಕಾದರೆ ಇನ್ನಷ್ಟು ಚರ್ಚೆ ಮಾಡೋಣ.

(ಗೊಂದಲ)

ಶ್ರೀ ಕೆ. ರಹೀಂ ಖಾನ್ :- ಮಾನ್ಯ ಅಧ್ಯಕ್ಷರೆ, ಮಾನ್ಯ Chief Minister ರವರು ಖುದ್ದಾಗಿ ಲೆಟರ್ ಅನ್ನು ಕೊಟ್ಟಿದ್ದಾರೆ. Immediately ದುಡ್ಡು ರಿಲೀಸ್ ಮಾಡಿ ಎಂದು ಅವರು ಹೇಳಿ ಈಗಾಗಲೇ ಮೂರು ತಿಂಗಳಾಯಿತು. ಆದರೆ ಇನ್ನೂ ನಮಗೆ ದುಡ್ಡು ರಿಲೀಸ್ ಆಗಿಲ್ಲ. ನಮ್ಮದು ಬರಗಾಲ ಎಂದು ಡಿಕ್ಲೇರ್ ಮಾಡಲಾಗಿದೆ. Immediately ದುಡ್ಡು ಬಿಡುಗಡೆ ಮಾಡಬೇಕೆಂದು ನಾನು ಇನ್ನೊಮ್ಮೆ ಮಾನ್ಯ ಮುಖ್ಯಮಂತ್ರಿಗಳನ್ನು request ಮಾಡಿಕೊಳ್ಳುತ್ತಿದ್ದೇನೆ.

(ಗೊಂದಲ)

ಶ್ರೀ ಹೆಚ್.ಡಿ. ರೇವಣ್ಣ :- ಮಾನ್ಯ ಅಧ್ಯಕ್ಷರೆ, ದಯಮಾಡಿ ನಮಗೂ ಮಾತನಾಡಲು ಅವಕಾಶ ಕೊಡಿ.

ಅಧ್ಯಕ್ಷರು :– ಆಯಿತು ಹೇಳಿ.

ಶ್ರೀ ಹೆಚ್.ಡಿ. ರೇವಣ್ಣ (ಹೊಳೆನರಸೀಪುರ) :– ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಟ್ಟಿದ್ದನ್ನು ನಾನು ಕೇಳಿದೆ. ನಾನು ಕಳೆದ ಸಾರಿ ರಾಜ್ಯ ಸರ್ಕಾರವು 123 ತಾಲ್ಲೂಕುಗಳನ್ನು ಬರಗಾಲ ಎಂದು ಡಿಕ್ಲೇರ್ ಮಾಡಿದ ನಂತರ ಬರಗಾಲದ ಬಗ್ಗೆ ಚರ್ಚಿಸಲು ನಿಯಮ 60ರ ಅಡಿಯಲ್ಲಿ ಪ್ರಸ್ತಾಪಿಸಿದ್ದೆವು. ಅದನ್ನು convert ಮಾಡಿ ನಿಯಮ 69ರ ಅಡಿಯಲ್ಲಿ ಚರ್ಚೆಗೆ ಅವಕಾಶ ಕೊಡಲಾಗಿತ್ತು. ರಾಜ್ಯದಲ್ಲಿ ಇಂತಹ ಭೀಕರ ಬರಗಾಲ ಕೇವಲ ಮೂರು ಸಲ ಮಾತ್ರ ಆಗಿತ್ತು ಎನ್ನುವುದನ್ನೂ ಚರ್ಚೆಯ ಸಂದರ್ಭದಲ್ಲಿ ಸಭೆಯ ಗಮನಕ್ಕೆ ತರಲಾಗಿತ್ತು. ದೆಹಲಿಗೆ ಪ್ರತಿಪಕ್ಷದ ನಾಯಕರುಗಳನ್ನು ಒಳಗೊಂಡ ನಿಯೋಗವೊಂದನ್ನು ಕರೆದುಕೊಂಡು ಹೋಗಿ ಬರಗಾಲ ನಿವಾರಣೆಗಾಗಿ ಕೇಂದ್ರ ಸರ್ಕಾರದಿಂದ ಹೆಚ್ಚಿನ ನೆರವು ನೀಡುವಂತೆ ನೀವು ಒತ್ತಾಯ ಮಾಡಬಾರದೆ? ನೀವು ಅದರ ಬಗ್ಗೆ ಚಕಾರವನ್ನೇ ಎತ್ತಿಲ್ಲ. ಉದಾಹರಣೆಗೆ ಹೇಳುವುದಾದರೆ, ಉದ್ಯೋಗ ಖಾತ್ರಿ ಯೋಜನೆಯಲ್ಲಿ ಕೆಲಸ ಕೊಡುತ್ತಿದ್ದೇವೆ ಎಂದು ಹೇಳುತ್ತಾರೆ. ಉದ್ಯೋಗ ಖಾತ್ರಿ ಯೋಜನೆಯಲ್ಲಿ ಬಾಕಿ ಬಿಲ್ಲುಗಳು ಎಷ್ಟಿವೆ? ಎಂಬುದು ನಿಮಗೆ ಗೊತ್ತೇ? ಸುಮಾರು 300 ಕೋಟಿ ರೂ.ಗಳಷ್ಟು ಬಿಲ್ ಪೆಂಡಿಂಗ್ ಇದೆ. ಇದನ್ನು ನಾನು ಸ್ವತಃ ಹೇಳುತ್ತಿಲ್ಲ. ಈ ಮಾಹಿತಿಯನ್ನು ನಿಮ್ಮ ಕಾರ್ಯದರ್ಶಿಗಳೇ ನನಗೆ ಕೊಟ್ಟಿದ್ದಾರೆ. ಉದ್ಯೋಗ ಖಾತ್ರಿ ಯೋಜನೆಯೊಂದರಲ್ಲೇ 300 ಕೋಟಿ ರೂ. ಗಳು ಬಾಕಿ ಇದೆ. ಆ ಬಾಕಿ ಹಣವನ್ನು ರಾಜ್ಯ ಸರ್ಕಾರದವರು ಕೊಡುತ್ತಾರೋ? ಅಥವಾ ಕೇಂದ್ರ ಸರ್ಕಾರದವರು ಕೊಡುತ್ತಾರೋ? ಕೇಂದ್ರ ಸರ್ಕಾರಕ್ಕೆ ರಾಜ್ಯ ಸರ್ಕಾರದವರು ಬರೆದಿರುವ ಲೆಟರ್‌ಗಳನ್ನು ನಾನು ನೋಡಿದೆ. ಕೇಂದ್ರ ಸರ್ಕಾರಕ್ಕೆ ಮೂರು ಸಲ ಲೆಟರ್ ಬರೆದಿದ್ದರೂ ಪ್ರಯೋಜನವಾಗಿಲ್ಲ. ಕಾರ್ಯದರ್ಶಿಯವರೇ ಅಲ್ಲಿಗೇ ಹೋದರೂ ಅವರಿಗೆ ಬೆಲೆ ಇಲ್ಲವಂತೆ. ಕಾರ್ಯದರ್ಶಿಯವರಿಗೆ ಅವರು interview ಅನ್ನೇ ಕೊಟ್ಟಿಲ್ಲ. ಉದ್ಯೋಗ ಖಾತ್ರಿ ಯೋಜನೆಯಲ್ಲಿ 300 ಕೋಟಿ ರೂ. ಗಳ ಹಣವೇ ಬಂದಿಲ್ಲ. ಹಾಗಿದ್ದಲ್ಲಿ ಉದ್ಯೋಗ ಖಾತ್ರಿ ಯೋಜನೆಯಲ್ಲಿ ಎಲ್ಲಿ ಯಾವ ಹಣವನ್ನು ಖರ್ಚು ಮಾಡುತ್ತಿದ್ದೀರಿ? ಎಂದು ನಾನು ಮಾನ್ಯ ಮುಖ್ಯಮಂತ್ರಿಗಳನ್ನು ಕೇಳಬಯಸುತ್ತೇನೆ. ಈಗ latest ಆಗಿ ದಿನಾಂಕ : 22.03.2012ರಲ್ಲಿ ಕೇಂದ್ರ ಸರ್ಕಾರದ Joint Secretary ಯವರಿಗೆ ಬರೆದಿರುವ ಪತ್ರದ ಪ್ರತಿ ನನ್ನ ಬಳಿಯಿದೆ. ಅದರಲ್ಲಿ ಉದ್ಯೋಗ ಖಾತ್ರಿ ಯೋಜನೆ ಅಡಿ ಬರಬೇಕಾದ 300 ಕೋಟಿ ರೂ. ಗಳನ್ನು ಬಿಡುಗಡೆ ಮಾಡುವಂತೆ ಕೋರಿದ್ದಾರೆ. ಬೇಕಿದ್ದಲ್ಲಿ, ನಾನು ಸದರಿ ಪತ್ರದ ಪ್ರತಿಯನ್ನು ಸರ್ಕಾರಕ್ಕೆ ಕಳುಹಿಸಿಕೊಡುತ್ತೇನೆ.

ಉದ್ಯೋಗ ಖಾತ್ರಿ ಯೋಜನೆ ಅಡಿಯಲ್ಲಿ ಕೆಲಸವೇ ನಡೆಯುತ್ತಿಲ್ಲ. ಆದರೆ ನೀವು ದುಡ್ಡು ಕೊಡುತ್ತಿದೇವೆ ಎಂದು ಹೇಳುತ್ತಿದ್ದೀರಿ. ಕೆಲಸ ಮಾಡಿದ್ದಕ್ಕೆ 300 ಕೋಟಿ ರೂ.ಗಳ ಬಿಲ್ ಪೆಂಡಿಂಗ್ ಇದೆ.

ಶ್ರೀ ಉಮೇಶ್ ವಿ. ಕತ್ತಿ :– ಸರ್ಕಾರದ ದಾಖಲೆಗಳು ನಿಮ್ಮ ಹತ್ತಿರ ಹೇಗೆ ಬರುತ್ತವೋ ಗೊತ್ತಿಲ್ಲ. ನಮಗೆ ಸ್ವಲ್ಪ ಅದರ ಪ್ರತಿಯನ್ನು ಕಳುಹಿಸಿಕೊಡಿ.

ಶ್ರೀ ಹೆಚ್.ಡಿ. ರೇವಣ್ಣ :– ಮಾನ್ಯ ಅಧ್ಯಕ್ಷರೆ, ನೀವು ಈ ವಿಷಯ ಮಾತನಾಡಿ ಎಂದು ಮಾನ್ಯ ಉಮೇಶ್ ಕತ್ತಿಯವರೇ ನಮಗೆ ಈ ಪತ್ರವನ್ನು ಕಳುಹಿಸಿಕೊಟ್ಟಿದ್ದಾರೆ. ಮಾನ್ಯ ಉಮೇಶ್ ಕತ್ತಿಯವರು ಕಳುಹಿಸಿಕೊಟ್ಟಿರುವುದರ ಬಗ್ಗೆ ನಾನು ಮಾತನಾಡುತ್ತಿದ್ದೇನೆ.

ಶ್ರೀ ಗೋವಿಂದ ಎಂ. ಕಾರಜೋಳ :– ಹಬ್ಬ ಹರಿದಿನಗಳಲ್ಲಿ ಅಡುಗೆ ಮಾಡಿದ ಮೇಲೆ ಮೊಟ್ಟ ಮೊದಲನೆಯದಾಗಿ ದೇವರಿಗೆ ನೈವೇದ್ಯ ಕಳುಹಿಸಿಕೊಡುತ್ತೇವಲ್ಲಾ, ಆ ರೀತಿ ನಿಮಗೆ ಅದನ್ನು ಕಳುಹಿಸಿಕೊಟ್ಟಿದ್ದಾರೆ.

ಶ್ರೀ ಹೆಚ್.ಡಿ.ರೇವಣ್ಣ :– ಮಾನ್ಯ ಅಧ್ಯಕ್ಷರೆ, ಮಾನ್ಯ ಕಾರಜೋಳರವರು ಏನಾದರೂ ಹೇಳಲಿ. ಅವರು ಬಹಳ ಹಿರಿಯರಿದ್ದಾರೆ. ನಮಗೆ ಅವರ ಬಗ್ಗೆ ಗೌರವವಿದೆ. ದುಡ್ಡನ್ನು ಕೇಂದ್ರ ಸರ್ಕಾರದವರಾದರೂ ಕೊಡಲಿ ಅಥವಾ ರಾಜ್ಯ ಸರ್ಕಾರದವರಾದರೂ ಕೊಡಲಿ. ದಿನಾಂಕ 22.3.2012ರಲ್ಲಿ RDPR ನಿಂದ ಪತ್ರ ಬರೆದಿದ್ದಾರೆ. ಇದು ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ಬಂದಿದೆಯೋ ಇಲ್ಲವೋ ಗೊತ್ತಿಲ್ಲ. ಸದರಿ ಪತ್ರದಲ್ಲಿ ದಿನಾಂಕ 10.1.2012, 31.01.2012 ಈ ರೀತಿ ಸುಮಾರು ಐದು ಲೆಟರ್‌ಗಳ reference ಹಾಕಿದ್ದಾರೆ. ಕೇಂದ್ರ ಸರ್ಕಾರಕ್ಕೆ ಸುಮಾರು ಐದು ಲೆಟರ್‌ಗಳನ್ನು ಬರೆದು 300 ಕೋಟಿ ರೂ.ಗಳ ಬಾಕಿ ಬರಬೇಕೆಂದು ಹೇಳಿದ್ದಾರೆ. ಹೀಗಿರುವಾಗ ಉದ್ಯೋಗ ಖಾತ್ರಿ ಯೋಜನೆಗೆ ಎಲ್ಲಿ ನೀವು ದುಡ್ಡು ಕೊಟ್ಟಿದ್ದೀರಿ? ಕುಡಿಯುವ ನೀರಿಗೆ 30 ಲಕ್ಷ ರೂ.ಗಳನ್ನು ಕೊಡುತ್ತೇನೆಂದು ಹೇಳುತ್ತಿದ್ದೀರಿ. ಅದು ಸಾಕಾಗುವುದಿಲ್ಲ. ಕನಿಷ್ಠ ಪಕ್ಷ ಅದಕ್ಕಾಗಿ 1 ಕೋಟಿ ರೂ.ಗಳನ್ನಾದರೂ ಕೊಡಬೇಕೆಂದು ಮಾನ್ಯ ಮುಖ್ಯಮಂತ್ರಿಗಳಿಗೆ ಮನವಿ ಮಾಡಿಕೊಳ್ಳುತ್ತೇನೆ. ಕೆಲವು ಏರಿಯಾದಲ್ಲಿ ಬಹಳ ಸಮಸ್ಯೆ ಇದೆ. ಹಾಸನ ಜಿಲ್ಲೆಯಲ್ಲಿ 30 ಬೋರ್‌ವೆಲ್‌ಗಳನ್ನು ತೆಗೆಸಿದ್ದೇವೆ ಎಂದು ತಾವು ತಮ್ಮ ಉತ್ತರದಲ್ಲಿ ಆಗಲೇ ಹೇಳಿದಿರಿ. ನಮ್ಮ ಜಿಲ್ಲೆಯ ಆರು ತಾಲ್ಲೂಕುಗಳಲ್ಲಿ ಬರಗಾಲವಿದೆ. ಅಂದರೆ ಪ್ರತಿ ತಾಲ್ಲೂಕಿಗೆ ತಲಾ 5–6 ಬೋರ್‌ವೆಲ್‌ಗಳನ್ನು ತೋಡಿಸಲಾಗಿದೆ. ಮಾನ್ಯ ಶಿವಲಿಂಗೇಗೌಡರಿಗೆ ಐದು, ನನಗೆ ಐದರಂತೆ ನಮ್ಮ ಆರು ತಾಲ್ಲೂಕುಗಳಿಗೆ ತಲಾ ಐದೈದರಂತೆ ಬೋರ್‌ವೆಲ್‌ಗಳನ್ನು ಕೊರೆಸಲಾಗಿದೆ. ಕನಿಷ್ಠ 1 ಕೋಟಿ ರೂ.ಗಳನ್ನಾದರೂ ಕುಡಿಯುವ ನೀರಿಗೆ ಒದಗಿಸಬೇಕು.

ಬರಗಾಲದ ಕಾಮಗಾರಿಗಳ ಅನುಷ್ಠಾನಕ್ಕಾಗಿ ಇನ್ನೊಂದು ಕೋಟಿ ರೂ.ಗಳನ್ನು ಕೊಡಬೇಕು. ಉದ್ಯೋಗ ಖಾತ್ರಿ ಯೋಜನೆಯ ದುಡ್ಡು ಕೇಂದ್ರ ಸರ್ಕಾರದಿಂದ ರಿಲೀಸ್ ಆಗುವವರೆಗೆ, ರಾಜ್ಯ ಸರ್ಕಾರದಿಂದ ಆ ದುಡ್ಡನ್ನು ಕೊಡಿ. ಕೇಂದ್ರದಿಂದ ಬಂದ ಮೇಲೆ ಬೇಕಾದರೆ adjust ಮಾಡಿಕೊಳ್ಳಿ. ಇವತ್ತು ತೊಗರಿ ಬೇಳೆಯ ಮಾರ್ಕೆಟ್ ಕಂಪ್ಲೀಟ್ ಆಗಿ ಬಿದ್ದು ಹೋಗಿದೆ. ಪಾಪ! ಮೆಂಬರ್‌ಗಳು ಅವರ constituency ಗಳಿಗೆ ಹೋಗಲಿಕ್ಕಾಗುತ್ತಿಲ್ಲ. ಶುಂಠಿ ಇರಬಹುದು, ಅರಿಶಿನ ಇರಬಹುದು, ಒಂದಲ್ಲ ಎರಡಲ್ಲ ಹಲವು ಬೆಳೆಗಳ ಬೆಲೆ ಬಿದ್ದು ಹೋಗಿದೆ. ರಾಜ್ಯದಲ್ಲಿ ಒಂದು ಕಡೆ ಬರಗಾಲವಿದ್ದರೆ, ಮತ್ತೊಂದು ಕಡೆ ರೈತರು ಬೆಳೆದಂತಹ ಬೆಳೆಗಳಿಗೆ ಸರಿಯಾದ ಬೆಲೆ ಸಿಗುತ್ತಿಲ್ಲ. ರೈತರು ಸಾಲಸೋಲ ಮಾಡಿ ಕಷ್ಟಪಟ್ಟು ಬೆಳೆ ಬೆಳೆದಿರುತ್ತಾರೆ. ಆ ಬೆಳೆಗಾರ ಬೆಳೆದಂತಹ ಬೆಳೆಗೆ ತಕ್ಕ ಬೆಲೆಯನ್ನು ಸರ್ಕಾರ ಕೊಡಿಸಬೇಕಲ್ಲವೇ? ಅದಕ್ಕಾಗಿ ದಯಮಾಡಿ ಸಭೆಯನ್ನು ಕರೆಯುವುದಕ್ಕೆ ಹೇಳಿ. ನಮಗೆ ಬರಗಾಲಕ್ಕಾಗಿ ಎಷ್ಟು ದುಡ್ಡು ಕೊಡಬೇಕು ಎನ್ನುವುದರ ಬಗ್ಗೆ ಕೇಂದ್ರ ಸರ್ಕಾರದ ಮೇಲೆ ಒತ್ತಾಯ ತರಬೇಕಾಗುತ್ತದೆ. ಕೇಂದ್ರ ಸರ್ಕಾರದ norms ಪ್ರಕಾರ ಹೋದರೆ ಎಲ್ಲೂ ಬೋರ್‌ವೆಲ್‌ಗಳನ್ನು ಹಾಕುವುದಕ್ಕಾಗುವುದಿಲ್ಲ. ಈ ಬಗ್ಗೆ ಕೇಂದ್ರ ಸರ್ಕಾರಕ್ಕೆ ಮನವರಿಕೆ ಮಾಡಬೇಕಾಗುತ್ತದೆ. ಕುಡಿಯುವ ನೀರಿಗೆ ಸಂಬಂಧಪಟ್ಟಂತೆ ಕೆಲವೊಂದನ್ನು ಸಡಿಲಗೊಳಿಸಲು ಕೇಂದ್ರಕ್ಕೆ ರಾಜ್ಯ ಮನವರಿಕೆ ಮಾಡಬೇಕಾಗುತ್ತದೆ. ಕೇಂದ್ರ ಸರ್ಕಾರ ಹಾಕಿರುವಂತಹ guidelines ಏನಿದೆ, ಅದನ್ನು ಸಡಿಲಗೊಳಿಸಬೇಕೆಂದು ರಾಜ್ಯ ಸರ್ಕಾರ ಒತ್ತಾಯ ಮಾಡಬೇಕೆಂದು ನಾನು ಸನ್ಮಾನ್ಯ ಮುಖ್ಯಮಂತ್ರಿಗಳನ್ನು ಮತ್ತು RDPR Minister ಅನ್ನು ಒತ್ತಾಯ ಮಾಡುತ್ತೇನೆ. ಆಲೂಗೆಡ್ಡೆ ಬೆಳೆಗಾರರ ಸಮಸ್ಯೆ ಬಗ್ಗೆ ಸಭೆಯೊಂದನ್ನು ಕರೆಯುತ್ತೇನೆಂದು ತಾವು ಹೇಳಿದ್ದೀರಿ. ದಯಮಾಡಿ 30ನೇ ತಾರೀಖಿನೊಳಗೆ ಆ ಸಭೆ ಕರೆಯಿರಿ. ಇಲ್ಲದಿದ್ದರೆ ರೈತರು ವಿಷ ತೆಗೆದುಕೊಳ್ಳುವಂತಹ ಪರಿಸ್ಥಿತಿ ಬರುತ್ತದೆ. ರೈತರು ನಿಮ್ಮ ಮನೆ ಮುಂದೆ ಬಂದು ವಿಷ ತೆಗೆದುಕೊಳ್ಳಬೇಕಾಗುತ್ತದೆ. ಆ ಪರಿಸ್ಥಿತಿಗೆ ನಾವು ಹೋಗಬಾರದು. ದಯಮಾಡಿ ಸಭೆಯನ್ನು ಕೂಡಲೇ ಕರೆಯಬೇಕೆಂದು ಒತ್ತಾಯ ಮಾಡಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಸಿ.ಎಸ್. ಪುಟ್ಟೇಗೌಡ (ಶ್ರವಣಬೆಳಗೊಳ) :– ಸನ್ಮಾನ್ಯ ಸಭಾಧ್ಯಕ್ಷರೆ, ಈಗ ಹೊಸದಾಗಿ ಮಾನ್ಯ ಮುಖ್ಯಮಂತ್ರಿಗಳು ಬಜೆಟ್ ಮಾಡುವಂತಹ ಸಂದರ್ಭದಲ್ಲಿ ನಾವು ಹೆಚ್ಚು ತಗಾದೆ ತೆಗೆಯಲು ಹೋಗುವುದಿಲ್ಲ. ಆದರೆ 150

ವರ್ಷದಿಂದ ಇಂತಹ ಬಿಸಿಲು, ಬರಗಾಲ ಇರಲಿಲ್ಲ ಎನ್ನತಕ್ಕ ಮಾತನ್ನು ಗ್ರಾಮಾಂತರ ಪ್ರದೇಶದಲ್ಲಿದೆ. ಬೇರೆ ಏನೂ ಕೊಡದೇ ಇದ್ದರೂ ಪರವಾಗಿಲ್ಲ. ಕನಿಷ್ಠ ಶುದ್ಧವಾದ ಕುಡಿಯುವ ನೀರಿಗೆ ಹೆಚ್ಚಿನ ಪ್ರಾಮುಖ್ಯತೆಯನ್ನು ಕೊಡಬೇಕು. ಅದರ ಬೇಡಿಕೆ ಇಡೀ ರಾಜ್ಯದಲ್ಲಿ ತುಂಬಾ ಇದೆ. ಜನರು ಬಹಳ ಸಂಕಷ್ಟದಲ್ಲಿದ್ದಾರೆ. ಏಕೆಂದರೆ ನೀವು ಮಾತನಾಡುವಾಗ ಒಂದು ಮಾತನ್ನು ಈಗ ಹೇಳಿದಿರಿ. ಮಂತ್ರಿಗಳು ಅವರು ಇವರು ಸಿಕ್ಕುವುದಿಲ್ಲ ಎಂದು ಹೇಳಿದಿರಿ. ಈ ರಾಜ್ಯದ ಶಾಸಕರಾಗಿ ನಾವು ನೀವು ಎಲ್ಲಾ ಒಟ್ಟಿಗೇ ಬಂದವರು. ಆ ಕಾಲದಲ್ಲಿ ಮಂತ್ರಿಗಳಿಗೆ ಅಪಾಯ ಇರಲಿಲ್ಲ. ಈಗ ಮಂತ್ರಿಗಳು ಹಳ್ಳಿಯ ಜನರನ್ನು ನೋಡುವುದಕ್ಕೆ, ಅವರ ಕಷ್ಟಗಳನ್ನು ಕೇಳುವುದಕ್ಕೆ, ಅರ್ಜಿಗಳನ್ನು ತೆಗೆದುಕೊಳ್ಳುವುದಕ್ಕೂ ಯಾರೂ ಬರುವುದಿಲ್ಲ. ಅದು ನಿಮಗೂ ಗೊತ್ತಿರತಕ್ಕಂತಹ ವಿಚಾರ. ನಮ್ಮ ಭಾಗದವರೆಲ್ಲಾ ತುಮಕೂರಿಗೆ, ಮಂಡ್ಯಕ್ಕೆಲ್ಲಾ ನೀರು ಊಟ ಮಾಡಿಸಿ ಶಿರಾದ ಜಯಚಂದ್ರಣ್ಣನವರಿಗೂ ನೀರಿನ ಊಟ ಮಾಡಿಸುತ್ತಿದ್ದಾರೆ. ಆ ಭಾಗದಲ್ಲಿ ಬಹಳ ಅಭಾವ ಇದೆ. ಖಂಡಿತ ನೀವು ಇದಕ್ಕೆ ಹೆಚ್ಚಿನ ಆದ್ಯತೆ ಕೊಟ್ಟು ಕುಡಿಯುವ ನೀರು ಕನಿಷ್ಠ ಕೊಡಬೇಕಾಗುತ್ತದೆ. ಏಕೆಂದರೆ ಕೆಡಿಪಿ ಮೀಟಿಂಗ್ ಅದೂ ಇದೂ ಕರೆಯುವುದಿಲ್ಲ ಎಂದು ಹೇಳುತ್ತಾರೆ. ಮಂತ್ರಿಗಳು ಸಿಗುವುದೇ ಇಲ್ಲ ಬಿಡಿ. ಆ ಕಡೆಗೆ ಗಮನ ಇದ್ದ ಹಾಗೆ ಕಾಣುವುದಿಲ್ಲ. ಅವರ ಗಮನ ಬದಲಾದ ಹಾಗೆ ಕಾಣುತ್ತದೆ. ಆದ್ದರಿಂದ ದಯಮಾಡಿ ನೀವೇನು ಹೊಸದಾಗಿ ಬಂದಿದ್ದೀರಿ, ಇದರ ಬಗ್ಗೆ ವಿಶೇಷವಾಗಿ ಕಾಳಜಿ ವಹಿಸಿ. ನೀವಾದರೂ ಈ ಸದನ ಮುಗಿದ ಕೂಡಲೇ ನಿಮ್ಮ ಕಾಳಜಿಯನ್ನು ತೋರಿಸಿ. ನಿಮ್ಮ ಜಗಳವನ್ನೆಲ್ಲಾ ಬಿಟ್ಟು, ಇಡೀ ರಾಜ್ಯದಾದ್ಯಂತ ಪ್ರವಾಸ ಮಾಡಿ. ಎಲ್ಲಿ ಅತ್ಯಂತ ಕನಿಷ್ಠ ಸ್ಥಿತಿ ಇದೆ, ಅಲ್ಲಿ ನೀವು ಸುಧಾರಣೆ ಮಾಡಿ ಜೊತೆಗೆ ನಮ್ಮ ಮೇಡಂ ಅವರು ಗಮನಿಸಬೇಕು. ಹಳ್ಳಿಯ ಕಡೆಗೆ ಏನಾಗಿದೆ ಅಂದರೆ ಮೇಡಂ ಅವರೇ, ಹಳ್ಳಿಯ ಕಡೆ ಟಿ.ಸಿ. ಗಳೆಲ್ಲಾ ಹೋಗಿವೆ. ಹೊಸ ಟ.ಸಿ. ಗಳಿಲ್ಲ. ಏನಾಗಿದೆ ಅಂದರೆ ರೆಗ್ಯುಲರೈಸ್ ಮಾಡಿಲ್ಲ ಅದೇ ಮುಖ್ಯ ಕಾರಣ ಟಿ.ಸಿ. ಹೋಗಲಿಕ್ಕೆ. ಆ ಸುಧಾರಣೆ ಮಾಡಲಿಕ್ಕೆ ಪ್ರಯತ್ನ ಮಾಡಬೇಕು. ನೀವು ಮಂಗಳೂರು ಭಾಗದಿಂದ ಬಂದಿರತಕ್ಕಂತಹ ಮುಖ್ಯಮಂತ್ರಿಗಳು ನಿಮ್ಮಲ್ಲಿ ಅಷ್ಟು ಸಮಸ್ಯೆ ಇಲ್ಲ. ಜನ ಬುದ್ಧಿವಂತರು. ಸ್ವಲ್ಪ ಅಡ್ವಾನ್ಸಾಗಿ ಏನೇನು ಬೇಕೋ ಸಮಸ್ಯೆ ನಿವಾರಣೆ ಮಾಡಿಕೊಳ್ಳುವುದಕ್ಕೆ ತನುವಾಗಿದ್ದಾರೆ. ನಮ್ಮ ಕತ್ತಿ ಸಾಹೇಬರು ಸಹ ಇತ್ತೀಚೆಗೆ ಸ್ವಲ್ಪ ತನುವಾಗಿದ್ದಾರೆ.

ಶ್ರೀ ಉಮೇಶ್ ವಿ. ಕತ್ತಿ (ಮಾನ್ಯ ಕೃಷಿ ಸಚಿವರು) :- ನಾಲ್ಕು ವರ್ಷ ಪವರ್ ಮಿನಿಸ್ಟರ್ ಹಾಸನ ಜಿಲ್ಲೆಯವರಿದ್ದರು. ಹಾಸನಕ್ಕೇನೂ ತೊಂದರೆ ಇಲ್ಲ.

ಇನ್ನು ಬೀದರ್ ಹೇಳಿ, ಬೆಳಗಾಂ ಹೇಳಿ, ಬಿಜಾಪುರ ಹೇಳಿದರೆ ಒಪ್ಪಿಕೊಳ್ಳಬಹುದು.

(ಗೊಂದಲ)

ಶ್ರೀ ಸಿ.ಎಸ್. ಪುಟ್ಟೇಗೌಡ :– ಒಂದು ರೀತಿ ಹಾಸನ ಎಂದರೆ ಶಾಪಗ್ರಸ್ಥ ಜಿಲ್ಲೆ ಎಲ್ಲಾ ತರಹ ಹೇಳಿ ಹೇಳಿ ಏನಾಗುತ್ತೆ ಅಂದರೆ ಹಾಸನ ಜಿಲ್ಲೆಯವರು ಒಂದು ರೀತಿ ಶಾಪಗ್ರಸ್ಥರಾಗಿ ಬಿಟ್ಟಿದ್ದೇವೆ. ದಯಮಾಡಿ ಆ ಭಾವನೆ ಬೇಡ. ನಾವು ಹಾಸನದವರು ಅತ್ಯಂತ ಹೃದಯ ವೈಶಾಲ್ಯ ಇರತಕ್ಕಂತಹ ಜನ. ಆ ಭಾಗಕ್ಕೆ ಗಮನ ಹರಿಸಿ. ಖಂಡಿತ ಅಲ್ಲಿ ಕುಡಿಯುವ ನೀರಿಗೆ ಆದ್ಯತೆ ಕೊಟ್ಟು ನುಗ್ಗೇಹಳ್ಳಿ ಲಿಫ್ಟ್ ಇರಿಗೇಷನ್ ಎಂದು ಹೇಳಿ ಒಂದು ಯೋಜನೆ ಮಂಜೂರು ಮಾಡಿಕೊಟ್ಟಿದ್ದೀರಿ. ಅದಕ್ಕಾಗಿ ನಾನು ಅಭಿನಂದಿಸುತ್ತೇನೆ. ಬೇಗ ಕೆಲಸ ಕಾರ್ಯ ಪ್ರಾರಂಭ ಆಗಬೇಕು. ಜೊತೆಗೆ ಹಿರಿಸಾವೆ ಲಿಫ್ಟ್ ಇರಿಗೇಷನ್ ವಿಚಾರ. ನೀರಾವರಿ ಸಚಿವರು ನಿಮ್ಮ ಹಿಂದುಗಡೆಯೇ ಇದ್ದಾರೆ. ದಯಮಾಡಿ ಅಂತಹವಕ್ಕೆಲ್ಲಾ ಹೆಚ್ಚಿನ ಗಮನ ಕೊಟ್ಟು ಕುಡಿಯುವ ನೀರಿಗಾಗಿ ಕೆರೆ ತುಂಬಿಸುವಂತಹ ಕಾರ್ಯಕ್ರಮ ಇದೆಯಲ್ಲಾ ಅದಕ್ಕೆ ಹೆಚ್ಚು concentration ಮಾಡಿ. ಈಗ ಎಷ್ಟು ಸಾವಿರ ಕೋಟಿಯನ್ನು ಯಾವ ವರ್ಗಕ್ಕೆ ದುಡ್ಡು ಕೊಟ್ಟೆವು ಎಂದು ಹೇಳಿದರೂ ಕೂಡ ಅದರಲ್ಲಿ 65% ಸಂಬಳ ತಿಂದುಕೊಂಡು, ಇನ್ನು 25% ಅವರಿವರು ಅಧಿಕಾರಿಗಳ ಪಾಲೋ ಅಥವಾ ಇನ್ನೊಂದು ಪಾಲು ಆ ಕಂಟ್ರಾಕ್ಟರ್ ಪಾಲಾಗುತ್ತದೆ. ನೀವು ಕುಡಿಯುವ ನೀರಿಗೆ, ಕೆರೆ ತುಂಬಿಸುವ ಕಾರ್ಯಕ್ರಮ ಇದೆಯಲ್ಲಾ ನಮ್ಮ ಬಯಲು ನಾಡಿನಲ್ಲಿ, ನೀವು ಕೆರೆ, ಗದ್ದೆ, ಹೊಲಕ್ಕೆ ಭತ್ತ ಬೆಳೆಯುವುದಕ್ಕೆ, ಕಬ್ಬು ಬೆಳೆಯುವುದಕ್ಕೆ ನೀರು ಕೊಡುವುದು ಬೇಡ. ಒಂದು ಸಲ ಕೆರೆಗೆ ತುಂಬಿಸಿದರೆ ಆ ಭಾಗದ ಜನ ಒಂದೂವರೆ ಎರಡು ವರ್ಷ ತನುವಾಗಿರುತ್ತಾರೆ. ಇದು ಶಾಶ್ವತವಾದ ಕಾರ್ಯಕ್ರಮ. ಇದಕ್ಕೆ ದಯಮಾಡಿ ತಾವು ಹೆಚ್ಚಿನ ಗಮನ ಕೊಡಬೇಕು. ನೀರಾವರಿ ಸಚಿವರೂ ಕೂಡ ಇದಕ್ಕೆ ಕೈ ಜೋಡಿಸಬೇಕು. ಕೆ.ಇ.ಬಿ.ಮಿನಿಸ್ಟರ್‌ರವರು ಇದರ ಬಗ್ಗೆ ಗಮನ ಹರಿಸಿ. ಹಳ್ಳಿಯ ಕಡೆ ಏನು ಕರೆಂಟ್ ಕೊಡಲಿಕ್ಕೆ, ಟಿ.ಸಿ. ಇಂತಹದನ್ನೆಲ್ಲಾ ಸುಧಾರಣೆ ಮಾಡಲಿಕ್ಕೆ ಆ ಕಡೆಗೆ ಗಮನ ಹರಿಸಬೇಕು ಎಂದು ಹೇಳಬಯಸುತ್ತೇನೆ. ನೀವು ಹೊಸ ಮುಖ್ಯಮಂತ್ರಿಗಳು. ನಿಮಗೆ ನಾವು ಎಲ್ಲೂ ಅಡ್ಡ ಬರುವುದಿಲ್ಲ. ನಿಮ್ಮ ದಾರಿ ಸುಗಮವಾಗಿರಲಿ ಎಂದು ನಾವು ವಿರೋಧ ಪಕ್ಷದ ಸಾಲಿನಲ್ಲಿದ್ದರೂ ಹೇಳುತ್ತೇವೆ. ದಯಮಾಡಿ ನಿಮ್ಮವರೇ ನಿಮಗೆ ಅಡ್ಡ ಬರಬಹುದು. ನಾವು ಖಂಡಿತ ಬರುವುದಿಲ್ಲ. ಜನರ ಕಷ್ಟಕ್ಕೆ ಮಾತ್ರ ನೀವು ಮುಂದೆ ಇರಬೇಕು ಎನ್ನುವಂತಹ ಮಾತನ್ನು ಹೇಳಿ ದಯಮಾಡಿ

ಮಾತನಾಡಲು ಅವಕಾಶ ಕೊಟ್ಟಂತಹ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಅಧ್ಯಕ್ಷರು :- ಮಾನ್ಯ ಶ್ರೀಕಾಂತ್ ಕುಲಕರ್ಣಿಯವರು ಮಾತನಾಡಲಿ, ಆಗಿನಿಂದ ಅವರು ನಿಂತಿದ್ದಾರೆ.

ಶ್ರೀ ಶ್ರೀಕಾಂತ್ ಕುಲಕರ್ಣಿ (ಜಮಖಂಡಿ) :- ಮಾನ್ಯ ಸಭಾಧ್ಯಕ್ಷರೆ, ಬರ ಪರಿಹಾರ, ಕುಡಿಯುವ ನೀರು ಇತ್ಯಾದಿ ವಿಚಾರಗಳಿಗೆ ಮಾನ್ಯ ಮುಖ್ಯಮಂತ್ರಿಗಳು ಕೊಟ್ಟಂತಹ ಉತ್ತರ, ಸರ್ಕಾರ ಸ್ಪಂದನ ಮಾಡಿದ್ದಂತಹದನ್ನು ನಾನು ಅತ್ಯಂತ ಹೃದಯಪೂರ್ವಕವಾಗಿ ಸ್ವಾಗತಿಸುತ್ತೇನೆ. ಇವತ್ತು ಒಂದು ವಿಶೇಷವಾದ ಸಮಸ್ಯೆಯನ್ನೂ ತಮ್ಮ ಮೂಲಕ ಸನ್ಮಾನ್ಯ ಮುಖ್ಯಮಂತ್ರಿಗಳ ಗಮನ ಸೆಳೆಯಲು ಬಯಸುತ್ತೇನೆ. ಕೃಷ್ಣಾ ನದಿ ಸಂಪೂರ್ಣ ಬತ್ತಿ ಹೋಗಿದ್ದು ಬಾಗಲಕೋಟೆ, ಬಿಜಾಪುರ ಮತ್ತು ಬೆಳಗಾಂ ಮೂರು ಜಿಲ್ಲೆಗಳಿಗೆ ಭಯಾನಕವಾದಂತಹ ಪರಿಸ್ಥಿತಿ ಮುಂಬರುವ ಏಪ್ರಿಲ್, ಮೇ ತಿಂಗಳಲ್ಲಿ ಬರುತ್ತದೆ. ಹೀಗಾಗಿ ನಮಗೆ ಕೊಯಿನಾದಿಂದ, ಮಹಾರಾಷ್ಟ್ರದಿಂದ ನೀರು ಬಿಡಿಸದೇ ಇದ್ದರೆ ಬೇರೆ ವ್ಯವಸ್ಥೆ ಮಾಡಲು ಆಗುವುದಿಲ್ಲ. ಈಗಾಗಲೇ ಬಹುಶಃ ನಿನ್ನೆ ಸದನದಲ್ಲಿ ಚರ್ಚೆ ಆಗಿದೆ. ಇವತ್ತು ಮಹಾರಾಷ್ಟ್ರದಿಂದ ನೀರು ಬಿಡಿಸಬೇಕಾದರೆ ಕನಿಷ್ಠ 5 ಟಿ.ಎಂ.ಸಿ ನೀರು ಬೇಕು ಎನ್ನುವಂತಹದು ಆ ಭಾಗದ ಜನರ ಬೇಡಿಕೆ ಇದೆ. ಇವತ್ತು ಹಿಪ್ಪರಗಿ, ಆಲಮಟ್ಟಿ ಜಲಾಶಯದಲ್ಲಿ ಎಲ್ಲೂ ಕೂಡ ನೀರಿಲ್ಲ. ಮುಂಬರುವ ಏಪ್ರಿಲ್ ಮೇ ತಿಂಗಳಲ್ಲಿ ಬಿಸಿಲು ಇನ್ನು ಜಾಸ್ತಿ ಆಗುವ ಸಂಭವ ಇರುವುದರಿಂದ ನೀರು ಬೇಕಾಗುತ್ತದೆ. ಈ ಹಿಂದೆ ನಮ್ಮ ಸರ್ಕಾರ ಮಹಾರಾಷ್ಟ್ರದಿಂದ ಪಡೆದಂತಹ ನೀರಿಗೆ ಏನಾದರೂ ವಾಪಸ್ ಕೊಡಬೇಕಾದಂತಹ ಬಿಲ್ ಬಾಕಿ ಅರಿಯರ್ಸ್ ಎಷ್ಟು ಕೊಡಬೇಕು ಎಂದು ಯೋಚನೆ ಮಾಡಿ ಒಂದೊಂದು ಟಿಎಂಸಿಗೆ ಎಷ್ಟು ದುಡ್ಡು ಕಟ್ಟಬೇಕೆನ್ನುವಂತಹ ಆರ್ಥಿಕ ವ್ಯವಸ್ಥೆಯನ್ನು ಮಾಡಿಕೊಂಡು ತಕ್ಷಣ ಬಿಡಿಸುವಂತಹ ಪ್ರಯತ್ನ ಮಾಡಿದರೆ ಆ ಎರಡು ಮೂರು ಜಿಲ್ಲೆಗಳ ಜನರಿಗೆ ಶಾಶ್ವತವಾದ ಒಂದು ವ್ಯವಸ್ಥೆ ಮಾಡಲಿಕ್ಕೆ ಆಗುತ್ತದೆಂದು ಹೇಳಿ ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತರುತ್ತೇನೆ.

ಶ್ರೀ ಡಿ.ವಿ. ಸದಾನಂದಗೌಡ :- ಒಂದು ನಿಮಿಷ ಮಾನ್ಯ ಶಿವಲಿಂಗೇ ಗೌಡರೇ, ಇದರ ಬಗ್ಗೆ ಅಂದರೆ ಕೃಷ್ಣಾ ನದಿಯಲ್ಲಿ ನೀರು ಬತ್ತಿ ಹೋಗಿರುವಂತಹದು, ಕುಡಿಯುವ ನೀರಿಗೆ ತೊಂದರೆ ಆಗಿರುವಂತಹದು, ಇದರ ಬಗ್ಗೆ ನಾವು ಹಿಂದೆ ಕೂಡ ಮಹಾರಾಷ್ಟ್ರದ ಜೊತೆಗೆ ಮಾತನಾಡಿ ಕೊಯಿನಾ ಅಣೆಕಟ್ಟಿನಿಂದ ನೀರು ಬಿಡುಗಡೆ ಮಾಡಿರುವಂತಹದ್ದು ಮತ್ತು ಅದಕ್ಕೆ

ಬೇಕಾದಂತಹ ಹಣ ಪಾವತಿ ಮಾಡಿರುವಂತಹ ನಿದರ್ಶನಗಳು ಇವೆ. ಈಗಾಗಲೇ ಮೊನ್ನೆ ನಮ್ಮ ಜಲ ಸಂಪನ್ಮೂಲ ಸಚಿವರು ಮುಂಬೈಗೆ ಹೋಗಿ ಅಲ್ಲಿಯ ಮುಖ್ಯಮಂತ್ರಿಗಳ ಜೊತೆ ಮಾತುಕತೆಗಳನ್ನು ಮಾಡಿ ಬಂದಿದ್ದಾರೆ. ಮತ್ತೆ ನಾವೂ ಕೂಡ ನಿನ್ನೆಯಿಂದ ಆ ಪ್ರಯತ್ನಗಳನ್ನು ಮುಂದುವರಿಸುತ್ತಿದ್ದೇವೆ. ಬಹುಶಃ ಎರಡು ಮೂರು ದಿನಗಳೊಳಗೆ ನಾವು ಮಹಾರಾಷ್ಟ್ರದ ಸರ್ಕಾರದ ಜೊತೆ, ಮುಖ್ಯಮಂತ್ರಿಗಳ ಜೊತೆ, ನಾವು ಮತ್ತು ಇರಿಗೇಷನ್ ಮಿನಿಸ್ಟರ್ ಸೇರಿ ಮಾತನಾಡಿಕೊಂಡು ಕೃಷ್ಣಾ ನದಿಗೆ ನೀರು ಬಿಡಿಸುವಂತಹ ಪ್ರಯತ್ನಗಳನ್ನು ನಮ್ಮ ಸರ್ಕಾರದಿಂದ ಮಾಡುತ್ತೇವೆ.

ಶ್ರೀ ಬಂಡೆಪ್ಪ ಖಾಶೆಂಪೂರ್ :- ನಮ್ಮೆಲ್ಲರ ಬೇಡಿಕೆ ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತಂದಿದ್ದೇವೆ. ಮಿನಿಮಮ್ ಒಂದು ಕೋಟಿಯಾದರೂ ಕೊಡುತ್ತಾರಾ ಎಂದು ಹೇಳಿ. ಆದರೂ ಒಂದು 30% ಅಂದರೆ ಅವರು 30 ಲಕ್ಷ ಕೊಟ್ಟಿದ್ದಕ್ಕೂ ನಾವು ಧನ್ಯವಾದಗಳನ್ನು ಹೇಳುತ್ತೇವೆ. ಏಕೆಂದರೆ ಇವತ್ತು ಬಹಳಷ್ಟು ಬರ ಗಂಭೀರ ಪರಿಸ್ಥಿತಿಯಲ್ಲಿದೆ. ಒಂದು ಸೂಚನೆ ಕೊಟ್ಟು ಬಿಡಿ. ಈ 30 ಲಕ್ಷ ರೂಪಾಯಿ ಬೋರ್‌ವೆಲ್ ಕೊರೆಯುವುದಕ್ಕೆ ಮಾತ್ರ. ಏಕೆಂದರೆ ಸಿಆರ್‌ಎಫ್‌ನಲ್ಲಿ ಡಿ.ಸಿ. ಅವರು ಪೈಪ್ ಲೈನ್ ಎಲ್ಲಾ ಮಾಡುತ್ತಾರೆ. ಹಾಗಾಗಿ ನಮ್ಮಲ್ಲಿ ಒಂದು ವಿಚಾರ ಇದೆ. ಇನ್ನೂ ಸ್ವಲ್ಪ ಧಾರಾಳವಾಗಿ ಮಾನ್ಯ ಮುಖ್ಯಮಂತ್ರಿಗಳು ನಗದಿ ಮತ್ತು ಉದ್ರಿ ಎಂದು ಇದೆ. ಇವತ್ತು ನೀವು Supplementary Estimates ನಲ್ಲಿ 75% ಕೆಲಸ ಮಾಡಿ ದುಡ್ಡು ರಿಲೀಸ್ ಮಾಡುತ್ತಿದ್ದೀರಿ. ಹಾಗಾಗಿ ನಮಗೆ ಒಂದೇ ದಿವಸಕ್ಕೆ ಒಂದು ಕೋಟಿ ರೂಪಾಯಿ ಬೇಕಾಗುವುದಿಲ್ಲ. ಬಹಳಷ್ಟು ಕೆಟ್ಟ ಪರಿಸ್ಥಿತಿ ಬಂದಾಗ at least ನಿಮ್ಮ ಅಧಿಕಾರಿಗಳಿಗೆ ಹೇಳಿ ಅಲ್ಲಿ immediately ಈ 30 ಲಕ್ಷ ನಗದು, ಇನ್ನೊಂದು 70 ಲಕ್ಷ ಉದ್ರಿ, ಆದರೆ ಒಂದು ಕೋಟಿ ರೂಪಾಯಿಯವರೆಗೆ ಯಾರೂ ಕೆಲಸ ನಿಲ್ಲಿಸಬೇಡಿ, ಕೆಲಸ ಮಾಡಿ ಎಂಬ ನಿಟ್ಟಿನಲ್ಲಿ ಒಂದು ಸಂದೇಶ ಹೋಗಲಿ. ಇದರಲ್ಲಿ 75% ಉದ್ರಿ ಅಲ್ಲವೇ?

ಶ್ರೀ ಡಿ.ವಿ. ಸದಾನಂದಗೌಡ :- ಮಾನ್ಯ ಖಾಶೆಂಪೂರ್ ಅವರು ಈಗಾಗಲೇ ಹೇಳಿದ ರೀತಿಯಲ್ಲಿ 30 ಲಕ್ಷವನ್ನು ನಿಮಗೆ ಬೇಕಾದ ರೀತಿಯಲ್ಲಿ ಬೋರ್‌ವೆಲ್ ಅನ್ನು ಕೊರೆಯುವುದಕ್ಕೆ ಕೊಡುವಂತಹದ್ದು ಮತ್ತು ವಿಶೇಷವಾಗಿ ಎಲ್ಲೆಲ್ಲಿ ನಿಮಗೆ ಭಾರೀ ಆತಂಕದ ಸ್ಥಳಗಳು ಇವೆ, water necessity ಇದೆ ಅಲ್ಲಿ ನೀರಿನ ಅಗತ್ಯಕ್ಕೆ ಅನುಗುಣವಾಗಿ ನಿಮಗೆ ಎಲ್ಲಿದೆ ಅಲ್ಲಿ ಹೆಚ್ಚಿನದನ್ನು ಕೊಡುವಂತಹ ಪ್ರಯತ್ನಗಳನ್ನು ಕೂಡ ಮಾಡುತ್ತೇವೆ. 30 ಲಕ್ಷವನ್ನು ಹೊಸ

ಬೋರ್‌ವೆಲ್ ಕೊರೆಯಲಿಕ್ಕೆ RDPR ಕೊಡುವಂತಹ ಕೆಲಸ ಕಾರ್ಯಗಳನ್ನು ಮಾಡುತ್ತೇವೆ.

7. ಗಮನ ಸೆಳೆಯುವ ಸೂಚನೆಗಳು

1. ವಿಷಯ :- **ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ವಿಶೇಷವಾಗಿ ಮಂಗಳೂರು ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಅನುದಾನದ ಕೊರತೆಯಿಂದ ಕುಡಿಯುವ ನೀರಿನ ಅಭಾವವನ್ನು ನೀಗಿಸಲು ಕಷ್ಟವಾಗಿರುವ ಬಗ್ಗೆ.**

ಶ್ರೀ ಯು. ಟಿ. ಖಾದರ್ (ಮಂಗಳೂರು) :- ಮಾನ್ಯ ಸಭಾಧ್ಯಕ್ಷರೆ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ವಿಶೇಷವಾಗಿ ಮಂಗಳೂರು ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಅನುದಾನದ ಕೊರತೆಯಿಂದ ಕುಡಿಯುವ ನೀರಿನ ಅಭಾವವನ್ನು ನೀಗಿಸಲು ಕಷ್ಟವಾಗಿರುವ ಬಗ್ಗೆ ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರ ಗಮನವನ್ನು ಸೆಳೆಯುತ್ತೇನೆ.

ಶ್ರೀ ಎಸ್. ಸುರೇಶ್ ಕುಮಾರ್ (ಮಾನ್ಯ ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು) :- (ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಪರವಾಗಿ) : ಮಾನ್ಯ ಸಭಾಧ್ಯಕ್ಷರೆ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ವಿಶೇಷವಾಗಿ ಮಂಗಳೂರು ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಅನುದಾನದ ಕೊರತೆಯಿಂದ ಕುಡಿಯುವ ನೀರಿನ ಅಭಾವವನ್ನು ನೀಗಿಸಲು ಕಷ್ಟವಾಗಿರುವ ಬಗ್ಗೆ ಮಾನ್ಯ ಸದಸ್ಯರು ಗಮನವನ್ನು ಸೆಳೆದಿದ್ದಾರೆ.

2011-12ರ ಸಾಲಿನಲ್ಲಿ ರೂ. 1500.00 ಕೋಟಿ ಅಂದಾಜು ಮೊತ್ತದ ಕುಡಿಯುವ ನೀರಿನ ಕಾಮಗಾರಿಗಳ ಕ್ರಿಯಾಯೋಜನೆಗೆ ಸರ್ಕಾರದ ಅನುಮೋದನೆ ನೀಡಲಾಗಿದೆ. ಈವರೆಗೆ ರಾಜ್ಯ ಮತ್ತು ಕೇಂದ್ರ ವಲಯಗಳಡಿ (ತುರ್ತು ಕುಡಿಯುವ ನೀರಿನ ಕಾಮಗಾರಿಗಳ ಅನುಷ್ಠಾನದ ಸಲುವಾಗಿಯೇ (Over and above budgetary provision) ಜಿಲ್ಲಾ ಪಂಚಾಯತಿಗಳಿಗೆ ಬಿಡುಗಡೆ ಮಾಡಲಾದ ರೂ. 124.74 ಕೋಟಿ ಸೇರಿ) ಒಟ್ಟಾರೆ ರೂ. 1418.72 ಕೋಟಿ ಅನುದಾನವನ್ನು ಬಿಡುಗಡೆ ಮಾಡಲಾಗಿದೆ. ಈ ಪೈಕಿ ರೂ. 34.57 ಕೋಟಿ ಮಂಗಳೂರು ಜಿಲ್ಲಾ ಪಂಚಾಯಿತಿಗೆ ಬಿಡುಗಡೆಯಾಗಿದೆ. ವೆಚ್ಚ ರೂ. 25.57 ಕೋಟಿಯಾಗಿದೆ. ಇದರಲ್ಲಿ ರೂ. 1.65 ಕೋಟಿ ಮಂಗಳೂರು ಜಿಲ್ಲಾ ಪಂಚಾಯಿತಿಗೆ ಬಿಡುಗಡೆಯಾಗಿದೆ. ಟಾಸ್ಕ್ ಫೋರ್ಸ್ ಸಮಿತಿಗಳಿಗೆ ಪೂರಕವಾಗಿ ತಾಲ್ಲೂಕು ಮಟ್ಟದ ಕಂಟ್ರೋಲ್ ರೂಂಗಳು ಚುರುಕಾಗಿ ಕೆಲಸ ನಿರ್ವಹಿಸುತ್ತಿದ್ದು, ಕುಡಿಯುವ ನೀರಿನ ಸಮಸ್ಯೆಗೆ ಆದ್ಯತೆ ಮೇಲೆ ಸ್ಪಂದಿಸಲಾಗುತ್ತಿದೆ. ಇದಲ್ಲದೆ, ವಾಸ್ತವಿಕವಾಗಿ ಕುಡಿಯುವ ನೀರಿನ ಸಮಸ್ಯೆ ಕಂಡುಬಂದಲ್ಲಿ ಜಿಲ್ಲಾಧಿಕಾರಿಗಳ (ಕಂದಾಯ ಇಲಾಖೆಯು ಸಹ ದಕ್ಷಿಣ ಜಿಲ್ಲೆಗೆ